ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

# ಇತಿಹಾಸ

## ಎಂ.ಎ. (ಪ್ರಥಮ)

# ಉತ್ತರ ಭಾರತದ ಇತಿಹಾಸ
# ಕಾನಿಷ್ಕ, ಸಮುದ್ರಗುಪ್ತ, ಅಶೋಕ, ಹರ್ಷವರ್ಧನ, ಕಾಳಿದಾಸ, ಆರ್ಯಭಟ, ವರಾಹ ಮೀಹಿರ

ಕೋರ್ಸ್ – 2

ಬ್ಲಾಕ್ – 2

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

Higher Education To Everyone Everywhere

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್ - 2

ಬ್ಲಾಕ್
2


| | |
|---|---|
| ಘಟಕ - 38<br>ಆರ್ಯರ ಆಗಮನ - ಋಗ್ವೇದ ಸಂಸ್ಕೃತಿ | 1-14 |
| ಘಟಕ - 39<br>ಉತ್ತರ ವೈದಿಕ ಕಾಲದ ಸಮಾಜ, ಆರ್ಥಿಕತೆ, ಧರ್ಮ ಮತ್ತು ರಾಜಕೀಯ ವ್ಯವಸ್ಥೆ | 15-26 |
| ಘಟಕ - 40<br>ಮಹಾಕಾವ್ಯಗಳ ಕಾಲದಲ್ಲಿ ಜೀವನ | 27-40 |
| ಘಟಕ - 41<br>ಹೊಸ ಧರ್ಮಗಳ ಉದಯದ ಸಂದರ್ಭದಲ್ಲಿ ಹಿಂದೂ ಸಮಾಜ | 41-48 |

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಡಾ. ಎಂ. ಸುಶೀಲ ಅರಸ್**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

**ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

*ವಿಷಯ ಸಂಯೋಜಕರು*

## ಪಠ್ಯಕ್ರಮ ನಿರೂಪಕರು

ಡಾ. ಬಿ.ಸಿ. ಮಹಬಲೇಶ್ವರಪ್ಪ
ಇತಿಹಾಸ ಪ್ರಾಧ್ಯಾಪಕರು,
ಗುಲ್ಬರ್ಗ ವಿಶ್ವವಿದ್ಯಾನಿಲಯ
ಗುಲ್ಬರ್ಗ.

ಘಟಕಗಳು **38** ರಿಂದ **41**

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 2013

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ
ಕುಲಸಚಿವರು (ಆಡಳಿತ)

# ಇತಿಹಾಸ

# ಕೋರ್ಸ್ ೬ - 2

# ಬ್ಲಾಕ್ - 2

## ಪೀಠಿಕೆ

ಈ ಬ್ಲಾಕಿನಲ್ಲಿ ಒಟ್ಟು ನಾಲ್ಕು ಘಟಗಳಿವೆ. ಘಟಕ 38 ಆರ್ಯರ ಮೂಲ ಹಾಗೂ ಆರ್ಯರ ಭಾರತದಲ್ಲಿ ಹರಡಿದ ಬಗೆ ತಿಳಿಸುತ್ತದೆ. ಇದೇ ಘಟಕದಲ್ಲಿ ಪ್ರಾರಂಭಿಕ ಆರ್ಯರ ಸಂಸ್ಕೃತಿಯ, ಅದನ್ನು ಋಗ್ವೇದದ ಸಂಸ್ಕೃತಿ ಎನ್ನುತ್ತೇವೆ. ವಿವಿಧ ಆಯಾಮಾಗಳನ್ನು ಅಧ್ಯಯನ ಮಾಡುವಿರಿ. ಘಟಕ 39 ರಲ್ಲಿ ಋಗ್ವೇದ ಕಾಲ ಮುಗಿದ ನಂತರ ಬಂದ ಉತ್ತರ ವೈದಿಕ ಕಾಲದ ಇತಿಹಾಸವನ್ನು ಅಧ್ಯಯನ ಮಾಡುವಿರಿ. ಋಗ್ವೇದ ಕಾಲಕ್ಕೂ ಉತ್ತರ ವೈದಿಕ ಕಾಲಕ್ಕೂ ಭಾರತದ ಸಂಸ್ಕೃತಿಯಲ್ಲಿ ಉಂಟಾದ ಮಹತ್ತರ ಬದಲಾವಣೆಗಳನ್ನು ಅರಿಯುವಿರಿ. ಘಟಕ 40 ಮಹಾಕಾವ್ಯಗಳಾದ ರಾಮಾಯಣ ಹಾಗೂ ಮಹಾಭಾರತ ಕಾಲದಲ್ಲಿದ್ದ ಜನ ಜೀವನವನ್ನು ಮತ್ತು ಸಂಸ್ಕೃತಿಯ ಇತರ ಲಕ್ಷಣಗಳನ್ನು ನೀವು ತಿಳಿಯುವಿರಿ. ಘಟಕ 41 ವೈದಿಕ ಧರ್ಮದಲ್ಲಿದ್ದ ನ್ಯೂನತೆಗಳು ಹೊಸ ಧರ್ಮಗಳ ಉದಯಕ್ಕೆ ಹೇಗೆ ಕಾರಣವಾದವು ಎಂಬ ವಿಚಾರವನ್ನು ಕುರಿತಂತೆ ಅಧ್ಯಯನ ಮಾಡುವಿರಿ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

# ಘಟಕ - 38

## ಆರ್ಯರ ಆಗಮನ - ಋಗ್ವೇದ ಸಂಸ್ಕೃತಿ

*ರಚನೆ*


**38.0** ಉದ್ದೇಶಗಳು

**38.1** ಪೀಠಿಕೆ

**38.2** ಆರ್ಯರ ಮೂಲ ಸ್ಥಾನ

- **38.2.1** ಋಗ್ವೇದ ಆರ್ಯರ ಕಾಲ ಮತ್ತು ಭೌಗೋಳಿಕ ವಿಸ್ತಾರ

**38.3** ಋಗ್ವೇದ ಸಂಸ್ಕೃತಿ

**38.4** ಸಮಾಜ

- **38.4.1** ಬುಡಕಟ್ಟು ಸಂಸ್ಕೃತಿ
- **38.4.2** ವರ್ಣವ್ಯವಸ್ಥೆ
- **38.4.3** ಮಹಿಳೆಯರ ಸ್ಥಾನಮಾನ
- **38.4.4** ಆಹಾರ, ಪಾನೀಯ, ಸಂಗೀತ, ನೃತ್ಯ ಮತ್ತು ಅಲಂಕಾರ
- **38.4.5** ವೈದ್ಯಕೀಯ ಹಾಗೂ ಶಿಕ್ಷಣ

**38.5** ಆರ್ಥಿಕತೆ

- **38.5.1** ಕುರುಬರು ಮತ್ತು ಕೃಷಿ
- **38.5.2** ಪಶುಗಳ ತಳಿ ಅಭಿವೃದ್ಧಿ
- **38.5.3** ವ್ಯಾಪಾರ ಮತ್ತು ವಾಣಿಜ್ಯ

**38.6** ಧರ್ಮ

**38.7** ಋಗ್ವೇದ ಕಾಲದ ರಾಜಕಾರಣ

- **38.7.1** ರಾಜಕೀಯ ವ್ಯವಸ್ಥೆ
- **38.7.2** ರಾಜನ ಸ್ಥಾನಮಾನ
- **38.7.3** ಸಭಾ ಮತ್ತು ಸಮಿತಿಗಳು
- **38.7.4** ನ್ಯಾಯಾಡಳಿತ

**38.8** ಸಾರಾಂಶ

**38.9** ಮಾದರಿ ಪ್ರಶ್ನೆಗಳು

**38.10** ಹೆಚ್ಚಿನ ಅಧ್ಯಯನಕ್ಕೆ

## 38.0 ಉದ್ದೇಶಗಳು

ಈ ಘಟಕದ ಅಭ್ಯಾಸದಿಂದ

1. ಆರ್ಯರ ಆಗಮನ ಮತ್ತು ಅವರ ಮೂಲಸ್ಥಾನ
2. ಮೂಲ ಆಕರಗಳಾದ ವೇದಗಳ ಮಹತ್ವ ಮತ್ತು ಋಗ್ವೇದ ಕಾಲದಲ್ಲಿ ಆರ್ಯರ ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಬದುಕು
3. ಪ್ರಭುತ್ವದ ವ್ಯವಸ್ಥೆ, ರಾಜನ ಸ್ಥಾನಮಾನ, ಸಭಾ-ಸಮಿತಿಗಳ ಅಧಿಕಾರ, ಪ್ರಜಾಪತಿ ಮುಂತಾದ ಆರ್ಯರ ರಾಜಕೀಯ ವ್ಯವಸ್ಥೆ ಮುಂತಾದವುಗಳನ್ನು ತಿಳಿದುಕೊಳ್ಳಬಹುದು.

## 38.1 ಪೀಠಿಕೆ

ಹಿಂದಿನ ಘಟಕದಲ್ಲಿ ಶ್ರೀಮಂತವಾದ ಹರಪ್ಪ ಸಂಸ್ಕೃತಿಯ ಬಗ್ಗೆ ತಿಳಿದುಕೊಂಡಿದ್ದೇವೆ. ಅದರ ನಂತರ ಅಸ್ತಿತ್ವಕ್ಕೆ ಬಂದ ಮತ್ತೊಂದು ಸಂಸ್ಕೃತಿಯು ತುಂಬಾ ಭಿನ್ನವಾಗಿತ್ತು. ಈ ಸಂಸ್ಕೃತಿಯನ್ನು ಕಟ್ಟಿದ ಜನರನ್ನು ಆರ್ಯರೆಂದು ಕರೆಯಲಾಗಿದೆ. ಅವರು ಭಾರತವನ್ನು ವಾಯುವ್ಯ ಕಣಿವೆಗಳ ಮೂಲಕ ಪ್ರವೇಶಿಸಿದರು. ಅವರು ಇಂಡೋ-ಯುರೋಪಿಯನ್ ಗುಂಪಿಗೆ ಸೇರಿದ ಜನರಾಗಿದ್ದರು. ಭಾರತದ ಚರಿತ್ರೆಗೆ ಸಂಬಂಧಿಸಿದ ಒಂದು ನಂಬಿಕೆಯೆಂದರೆ ಅದರ ಚರಿತ್ರೆಯೆಂದರೆ ಆರ್ಯರ ಚರಿತ್ರೆಯೇ ಆಗಿದೆ ಎಂಬುದಾಗಿದೆ. ಭಾರತಕ್ಕೆ ಅವರ ಆಗಮನವು ತುಂಬಾ ಮಹತ್ವದ ಘಟನೆಯಾಗಿದೆ. ಅವರುಗಳು ಸುಂದರವಾದ ಮತ್ತು ಆಕರ್ಷಕ ರೂಪವುಳ್ಳವರಾಗಿದ್ದರು. ಉನ್ನತ ನಾಗರಿಕತೆಯನ್ನು ಸಾಧಿಸಿಕೊಂಡಿದ್ದ ಅವರು ಉಳಿದೆಲ್ಲ ಜನಾಂಗಗಳಿಗಿಂತ ಸಂಸ್ಕತಿಯಲ್ಲಿ ತುಂಬಾ ಪ್ರಗತಿ ಸಾಧಿಸಿದ್ದರು. ಈ ಕಾರಣದಿಂದಾಗಿಯೇ, ಇಂದಿಗೂ ಅನೇಕ ಜನಾಂಗಗಳು ತಾವು ಆರ್ಯ ಜನಾಂಗ ಮತ್ತು ಸಂಸ್ಕೃತಿಯ ಉತ್ತರಾಧಿಕಾರಿಗಳೆಂದು ಹೇಳಿಕೊಳ್ಳಲು ಬಯಸುತ್ತಾರೆ.

## 38.2 ಆರ್ಯರ ಮೂಲ ವಾಸಸ್ಥಾನ

ಆರ್ಯರ ಮೂಲ ವಾಸಸ್ಥಾನವನ್ನು ಕುರಿತಂತೆ ಅನೇಕ ಸಿದ್ಧಾಂತಗಳನ್ನು ರೂಪಿಸಲಾಗಿದೆ.

1. ಆಸ್ಟ್ರೋ-ಹಂಗೇರಿಯನ್ ಸಿದ್ಧಾಂತ
2. ಮಧ್ಯಪ್ರಾಚ್ಯ ಸಿದ್ಧಾಂತ
3. ಧೃವ ಪ್ರದೇಶ ಸಿದ್ಧಾಂತ
4. ಟಿಬೆಟಿಯನ್ ಸಿದ್ಧಾಂತ
5. ಸಪ್ತ ಸಿಂಧೂ ಸಿದ್ಧಾಂತ

### *1. ಆಸ್ಟ್ರೋ- ಹಂಗೇರಿಯನ್ ಸಿದ್ಧಾಂತ*

ಡಾ. ಪಿ. ಶಿಲ್ಸ್ ಮತ್ತು ಪ್ರೊ. ಮ್ಯಾಗ್ಡೊನೆಲ್ ಪ್ರಕಾರ ಯುರೋಪಿನ ಆಗ್ನೇಯ ಭಾಗದಲ್ಲಿರುವ ಹಂಗೇರಿ, ಆಸ್ಟ್ರಿಯ ಮತ್ತು ಬೋಹಿಮಿಯಾ ಪ್ರದೇಶವು ಆರ್ಯರ ಮೂಲ ವಾಸಸ್ಥಾನ.

### *2. ಮಧ್ಯಪ್ರಾಚ್ಯ ಸಿದ್ಧಾಂತ*

ಜರ್ಮನಿಯ ತುಲನಾತ್ಮಕ ಭಾಷಾಶಾಸ್ತ್ರಜ್ಞನಾದ ಮ್ಯಾಕ್ಸ್ ಮುಲ್ಲರ್ ಮಧ್ಯಪ್ರಚ್ಯಾಸಿದ್ಧಾಂತದ ಪ್ರತಿಪಾದಕ. ಅವನ ಪ್ರಕಾರ ಏಷ್ಯಾವು ಆರ್ಯರ ಮೂಲ ವಾಸಸ್ಥಾನ.

ಸಂಸ್ಕೃತದ ಪಿತ-ಮಾತಾ, ಪರ್ಷಿಯನ್ ಪಿತರ್-ಮದರ್, ಲ್ಯಾಟಿನ್‌ನ ಪ್ರಾಟರ್-ಮ್ಯಾಟರ್ ಮತ್ತು ಇಂಗ್ಲಿಷ್‌ನ ಫಾದರ್ -ಮದರ್ ಎಂಬ ನುಡಿಗಳಲ್ಲಿನ ಸಾಮಾನ್ಯ ಲಕ್ಷಣಗಳ ಆಧಾರದ ಮೇಲೆ ಮಾಕ್ಸ್ ಮುಲ್ಲರ್ ಆರ್ಯರ ಮೂಲ ವಾಸಸ್ಥಾನ ಮಧ್ಯಪ್ರಾಚ್ಯವೆಂದು ಸಾಧಿಸಿದ್ದಾನೆ. ಆರ್ಯರ ಸಪ್ತಸಿಂಧೂ ಪ್ರದೇಶಕ್ಕೆ ವಲಸೆ ಬರುವ ಮೊದಲು ಈ ನುಡಿಗಳನ್ನು ಮಧ್ಯಪಾಚ್ಯದಿಂದ ಅಳವಡಿಸಿಕೊಂಡಿದ್ದನ್ನು ಅವನು ಗುರುತಿಸಿದ್ದಾನೆ. ಮಧ್ಯ ಏಷ್ಯಾವು ಫಲವತ್ತಾದ ಪ್ರದೇಶವಾಗಿತ್ತು. ಋಗ್ವೇದದಲ್ಲಿ ಉಲ್ಲೇಖಿತವಾಗಿರುವ ಎಲ್ಲ ವಸ್ತುಗಳನ್ನು ಅಲ್ಲಿ ಉತ್ಪಾದಿಸಲಾಗುತ್ತಿತ್ತು. ಮಧ್ಯಪ್ರಾಚ್ಯವು ಏಷ್ಯಾ ಮತ್ತು ಯುರೋಪಿನ ಮಧ್ಯದಲ್ಲಿ ನೆಲೆಗೊಂಡಿದೆ. ಮ್ಯಾಕ್ಸ್ ಮುಲ್ಲರ್‌ನ ಮಧ್ಯ ಪಾಚ್ಯಸಿದ್ಧಾಂತವನ್ನು ಅನೇಕ ಇತಿಹಾಸಜ್ಞರು ಸಮರ್ಥಿಸಿದ್ದಾರೆ. ಏಷ್ಯಾ ಮೈನರ್ ಪ್ರದೇಶದಲ್ಲಿ ದೊರೆತ ಶಾಸನಗಳಲ್ಲಿ ಆರ್ಯರ ದೇವತೆಗಳಾದ ಇಂದ್ರ, ವರುಣ ಮುಂತಾದವರನ್ನು ಪ್ರಾಚೀನ ಕಾಲದಲ್ಲಿ ಮಧ್ಯಪ್ರಾಚ್ಯದಲ್ಲಿ ಪೂಜಿಸಲಾಗುತ್ತಿತ್ತು ಎಂಬುದು ತಿಳಿಯುತ್ತದೆ.

### 3. *ಧೃವ ಪ್ರದೇಶ ಸಿದ್ಧಾಂತ*

ಈ ಸಿದ್ಧಾಂತವನ್ನು ಬಾಲಗಂಗಾಧರ ತಿಲಕರು ತಮ್ಮ ಗ್ರಂಥ "ವೇದಗಳಲ್ಲಿ ಧೃವ ಪ್ರದೇಶ" ಎಂಬುದರಲ್ಲಿ ಪ್ರತಿಪಾದಿಸಿದ್ದಾರೆ. ಧೃವ ಪ್ರದೇಶ ಹಾಗೂ ಅಲ್ಲಿನ ಹವಾಮಾನವು ಆರ್ಯರ ನಾಗರಿಕತೆಯ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿತು ಎಂಬುದು ಅವರ ವಿಚಾರವಾಗಿದೆ.

### 4. *ಟಿಬೆಟ್ ಸಿದ್ಧಾಂತ*

ಸ್ವಾಮಿ ದಯಾನಂದ ಮುಂತಾದವರು ಟಿಬೆಟಿಯನ್ ಪ್ರದೇಶವು ಆರ್ಯರ ಮೂಲಸ್ಥಾನವೆಂದು, ಅಲ್ಲಿಂದ ಆರ್ಯರು ಸಪ್ತಸಿಂಧೂ ಪ್ರದೇಶಕ್ಕೆ ವಲಸೆ ಬಂದರೆಂದೂ ವಾದಿಸಿದ್ದಾರೆ.

### 5. *ಸಪ್ತ ಸಿಂಧೂ ಸಿದ್ಧಾಂತ*

ಬಂಗಾಳಿಯ ಪ್ರಸಿದ್ಧ ವಿದ್ವಾಂಸ ಎ.ಸಿ. ದಾಸ್‌ರವರು ಆರ್ಯರ ಮೂಲ ವಾಸಸ್ಥಾನ ಇಂದಿನ ಆಧುನಿಕ ಪಂಜಾಬ್ ಪ್ರದೇಶವೆಂದೂ, ಅದು ಸಪ್ತಸಿಂಧೂ ಪ್ರದೇಶವೆಂದು ಪ್ರತಿಪಾದಿಸಿದ್ದಾರೆ. ಈ ಪ್ರತಿಪಾದನೆಯನ್ನು ಪ್ರಸಿದ್ಧ ಭಾರತೀಯ ಇತಿಹಾಸಜ್ಞ ಡಾ. ಕೆ. ಎಂ. ಮುನ್ಷಿ ಹಾಗೂ ಗಂಗಾನಾಥ ಜಾ ಅವರು ಸಮರ್ಥಿಸಿದ್ದಾರೆ. ಅವರ ಪ್ರಕಾರ ಋಗ್ವೇದದಲ್ಲಿ ಅದರ ಕರ್ತೃಗಳು ವಿದೇಶಿಯರು ಎಂಬುದರ ಬಗ್ಗೆ ಯಾವುದೇ ಸೂಚನೆಯಿಲ್ಲ ಹಾಗೂ ಋಗ್ವೇದದಲ್ಲಿ ಉಲ್ಲೇಖಗೊಂಡಿರುವ ನದಿಗಳು ಹಾಗೂ ಬುಡಕಟ್ಟುಗಳು ಆರ್ಯರು ಪೂರ್ವದಿಂದ ಪಶ್ಚಿಮಕ್ಕೆ ಸಾಗಿದರು ಎಂಬುದನ್ನು ಸೂಚಿಸುತ್ತವೆ. ಅದರ ಪ್ರಕಾರ ಆರ್ಯರು ಭಾರತದ ಮೂಲ ನಿವಾಸಿಗಳು.

### 38.2.1 *ಋಗ್ವೇದ ಕಾಲದ ಆರ್ಯರ ಕಾಲ ಮತ್ತು ಭೌಗೋಳಿಕ ವಿಸ್ತಾರ*

ಆರ್ಯರ ವಲಸೆಯ ಕಾಲದ ಬಗ್ಗೆಯೂ ವಾದ-ವಿವಾದಗಳಿವೆ. ಮ್ಯಾಕ್ಸ್ ಮುಲ್ಲರ್ ಪ್ರಕಾರ ಆರ್ಯರ ಆಗಮನದ ಕಾಲ ಕ್ರಿ.ಪೂ. ೧೨೦೦. ಆರ್.ಕೆ. ಮುಖರ್ಜಿ ಪ್ರಕಾರ ಅದು ಕ್ರಿ.ಪೂ. ೨೫೦೦. ಋಗ್ವೇದದ ಕಾಲವನ್ನು ಅವರು ಕ್ರಿ.ಪೂ. ೨೫೦೦ ರಿಂದ ೨೦೦೦ ವೆಂದು ಹೇಳುತ್ತಾರೆ. ಆದರೆ ಡಿ.ಎನ್. ಜಾ. ಪ್ರಕಾರ ಋಗ್ವೇದದ ಕಾಲ ಕ್ರಿ.ಪೂ. ೧೫೦೦ ರಿಂದ ೧೦೦೦. ಆರಂಭದಲ್ಲಿ ಆರ್ಯರು ಪಂಜಾಬ್ ಪ್ರದೇಶದಲ್ಲಿ ನೆಲೆಗೊಂಡರು. ನಂತರ ದ್ರಾವಿಡ ಜನಾಂಗದ ಸಂಸ್ಕೃತಿಯ ಪ್ರಭಾವದಿಂದ ಆರ್ಯರು ಉತ್ತರ ಮತ್ತು ದಕ್ಷಿಣ ಭಾಗದಲ್ಲೆಲ್ಲಾ ಪ್ರಸಿರಿಸಿದರು. ಆರ್ಯರ ವಲಸೆಯ ಮೊದಲ ಅಲೆಯು ಸಪ್ತಸಿಂಧೂವಿನಿಂದ ದೆಹಲಿಯವರೆಗೆ ವ್ಯಾಪಿಸಿತು. ಉತ್ತರ ವೈದಿಕ ಕಾಲದಲ್ಲಿ ಅವರು ಗಂಗಾ ಬಯಲು ಪ್ರದೇಶಕ್ಕೆ ವಲಸೆ ಬಂದರು. ಋಗ್ವೇದದ ಮಂತ್ರಗಳಲ್ಲಿ ಕಂಡುಬರುವ ಭೌಗೋಳಿಕ ವಿವರಗಳ ಆಧಾರದ ಮೇಲೆ ಭಾರತದಲ್ಲಿ ಆರ್ಯರು ನೆಲೆಗೊಂಡ

ಪ್ರದೇಶವನ್ನು ಗುರುತಿಸಬಹುದಾಗಿದೆ. ಅವುಗಳಲ್ಲಿ ಪಶ್ಚಿಮ ಉಪನದಿಗಳಾದ ಸಿಂಧೂ, ಗೋಮತಿ, ಕೃಮೂ, ಕುಬಾಗಳ ಉಲ್ಲೇಖವಿದೆ. ಕಾಬೂಲಿನ ಉತ್ತರಕ್ಕೆ ನೆಲೆಗೊಂಡ ನದಿ 'ಸುವಸ್ತು' ಎಂಬುದು ಅಲ್ಲಿ ಲಿಖಿತಗೊಂಡಿದೆ. ಈ ನುಡಿಯು 'ಸೊಗಸಾದ ವಾಸಸ್ಥಾನ' ಎಂಬ ಅರ್ಥವನ್ನು ನೀಡುವುದರಿಂದ ಆರ್ಯರು ಸ್ವಾಟ್ ಕಣಿವೆಯಲ್ಲಿ ನೆಲೆಗೊಂಡಿದ್ದು ಸ್ಪಷ್ಟವಾಗುತ್ತದೆ. ಆದರೆ ಋಗ್ವೇದದಲ್ಲಿ ಗಮನಾರ್ಹವಾಗಿ ಉಲ್ಲೇಖಗೊಂಡಿರುವ ಪ್ರದೇಶಗಳೆಂದರೆ ಪಂಜಾಬ್ ಮತ್ತು ದೆಹಲಿ ಪ್ರದೇಶಗಳು. ಅಲ್ಲಿ ಬಹಳಷ್ಟು ಸಾರಿ ಉಲ್ಲೇಖಿತಗೊಂಡಿರುವ ನದಿಗಳೆಂದರೆ ಸಿಂಧೂ, ಸರಸ್ವತಿ (ಆಧುನಿಕ ಸರುಪತಿ, ಇದು ರಾಜಾಸ್ಥಾನದ ಮರುಭೂಮಿಯಲ್ಲಿ ನಂದಿ ಹೋಗಿದೆ) ದೃಷಾವತಿ (ಗಗ್ಗರ್) ಮತ್ತು 'ಪಂಜಾಬ್' ಎಂಬ ಹೆಸರು ಬರಲು ಕಾರಣವಾದ ಐದು ಉಪನದಿಗಳು. ಈ ಐದು ನದಿಗಳೆಂದರೆ ಶುತುದ್ರಿ (ಸಟ್ಲೆಜ್), ವಿಪಾಸ್ (ಬಿಯಾಸ್), ಪರುಷನಿ (ರಾವಿ), ಅಸಿಕ್‌ನಿ (ಬಿನಾಬ್) ಮತ್ತು ವಿಟಾಸ್ಥ (ಜೀನಾಬ್). ಆದಿ ಋಗ್ವೇದದ ಕಾಲದ ಜನರ ಭೌಗೋಳಿಕ ಮಾಹಿತಿಯು ಯಮುನಾ ನದಿಯಿಂದ ಆಚೆಯಿರಲಿಲ್ಲ. ಇದನ್ನು ಋಗ್ವೇದದಲ್ಲಿ ಉಲ್ಲೇಖಿಸಲಾಗಿದೆ.

ಆದಿಕಾಲದ ಆರ್ಯರು ಸಿಂಧೂ ಮತ್ತು ಅದರ ಉಪನದಿಗಳು ಪ್ರತಿನಿಧಿಸುವ 'ಏಳು ನದಿಗಳ ಪ್ರದೇಶ' (ಸಪ್ತಸಿಂಧು)ವನ್ನು ತಮ್ಮ ವಶಮಾಡಿಕೊಳ್ಳತೊಡಗಿದರು. ಇದರಿಂದಾಗಿ ಅನೇಕ ಆರ್ಯರ ಬುಡಕಟ್ಟುಗಳ ನಡುವೆ ಘರ್ಷಣೆಗಳು ಸಾಮಾನ್ಯವಾಗಿ ಬಿಟ್ಟವು. ಋಗ್ವೇದದಲ್ಲಿ ಉಲ್ಲೇಖವಾಗಿರುವ ಅಂತಹ ಪ್ರಸಿದ್ಧ ಬುಡಕಟ್ಟುಗಳ ನಡುವಣ ಯುದ್ಧವೆಂದರೆ 'ದಶರಾಜನಯುದ್ಧ'. ಪಶ್ಚಿಮ ಪಂಜಾಬ್‌ನಲ್ಲಿ ನೆಲೆಕೊಂಡಿದ್ದ ಭರತ ಬುಡಕಟ್ಟಿಗೆ ಸೇರಿದ ರಾಜನ ಹೆಸರು ಸುರಾಸು. ವಿಶ್ವಾಮಿತ್ರ ಅವನ ರಾಜಗುರು. ಕೆಲ ಕಾಲದ ನಂತರ ಸುದಾಸನು ವಿಶ್ವಾಮಿತ್ರನನ್ನು ರಾಜಗುರುವಿನ ಸ್ಥಾನದಿಂದ ತೆಗೆದುಹಾಕಿ ಪೌರೋಹತ್ಯದ ಬಗ್ಗೆ ಪ್ರಕಾಂಡ ಪಂಡಿತನಾಗಿದ್ದ ವಸಿಷ್ಠನನ್ನು ರಾಜಗುರುವಾಗಿ ನೇಮಿಸಿಕೊಂಡನು. ಪುರುಷನಿ ನದಿಯದಂಡೆಯ ಮೇಲೆ ನಡೆದ ಯುದ್ಧದಲ್ಲಿ ಸುರಾಸನು ವಿಜಯಿಯಾದನು.

## 38.3 ಋಗ್ವೇದ ಸಂಸ್ಕೃತಿ

ಋಗ್ವೇದವು ಅತ್ಯಂತ ಪುರಾತನವಾದ ಒಂದು ಲಿಖಿತ ದಾಖಲೆಯಾಗಿದೆ. ಅದು ಹಿಂದೂಗಳ ನಾಲ್ಕು ವೇದಗಳಲ್ಲಿ ಒಂದಾಗಿದೆ. "ಅದು ಪುಸ್ತಕವಲ್ಲ; ಅದು ಗ್ರಂಥಾಲಯ; ಅದೊಂದು ಸಾಹಿತ್ಯ" ವೆಂದು ಹೇಳಲಾಗಿದೆ. ವೈದಿಕ ಸಾಹಿತ್ಯದಂತಹ ಸಾಹಿತ್ಯವನ್ನು ಪಡೆದ ಪ್ರಥಮ ಭಾರತೀಯರೆಂದರೆ ಆರ್ಯರಾಗಿದ್ದಾರೆ. ವೈದಿಕ ಸಾಹಿತ್ಯದಲ್ಲಿ ನಾಲ್ಕು ವೇದಗಳಿವೆ, ಬ್ರಾಹ್ಮಣಗಳಿವೆ, ಅರಣ್ಯಕಗಳಿವೆ ಮತ್ತು ಉಪನಿಷತ್ತುಗಳಿವೆ. ವೇದವೆಂದರೆ ಜ್ಞಾನ. ದೇವರ ಕೃಪೆಗೆ ಪಾತ್ರರಾಗಿದ್ದ ಋಷಿಗಳು ರಚಿಸಿದ ೧೦೨೮ ಮಂತ್ರಗಳು ಋಗ್ವೇದದಲ್ಲಿವೆ. ವೈದಿಕ ಸಾಹಿತ್ಯವನ್ನು ಸಂಸ್ಕೃತದಲ್ಲಿ ರಚಿಸಲಾಗಿದೆ. ಈ ಎಲ್ಲ ಮಂತ್ರಗಳನ್ನು ೩೩ ದೇವತೆಗಳಿಗೆ ಅರ್ಪಿಸಲಾಗಿದೆ. ಅವುಗಳಲ್ಲಿ ಹೆಚ್ಚಿನವು ಇಂದ್ರನಿಗೆ ಅರ್ಪಿತವಾಗಿವೆ. ಋಗ್ವೇದದಲ್ಲಿರುವ ೧೦೫೮೦ ಶ್ಲೋಕಗಳನ್ನು ೧೦ ಮಂಡಲಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ವೇದದಲ್ಲಿ ಎರಡು ಭಾಗಗಳಿವೆ. ಮೊದಲನೆಯದು ಸಂಹಿತೆ. ಇದರಲ್ಲಿನ ಮಂತ್ರಗಳನ್ನು ಜಪಿಸಲಾಗುತ್ತದೆ. ಎರಡನೆಯದು ಬ್ರಾಹ್ಮಣಕಗಳು. ಇದು ಟೀಕೆಗಳಾಗಿವೆ. ಬ್ರಾಹ್ಮಣಗಳ ನಂತರ ಕೇವಲ ಅರಣ್ಯಗಳಲ್ಲಿ ಮಾತ್ರ ಅಭ್ಯಾಸ ಮಾಡಬೇಕಾದ ಅರಣ್ಯಕಗಳು ಬರುತ್ತವೆ. ಅಂತಿಮವಾಗಿ ಉಪನಿಷತ್ತುಗಳು ಬರುತ್ತವೆ. ಉಪನಿಷತ್ತುಗಳು ಸಂಪೂರ್ಣವಾಗಿ ತತ್ವಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳಾಗಿವೆ. ಆರ್ಯರ ಪ್ರಾಚೀನ ಪವಿತ್ರ ಕೃತಿಗಳನ್ನು ಶೃತಿಗಳೆಂದು ಕರೆಯುತ್ತಾರೆ. ಉತ್ತರ ವೈದಿಕ ಸಾಹಿತ್ಯದಲ್ಲಿ ಸೂತ್ರಗಳು, ವೇದಾಂಗಗಳು, ಉಪವೇದಗಳು, ೧೮ ಪುರಾಣಗಳು, ಮಹಾಕಾವ್ಯಗಳು ಮತ್ತು ಧರ್ಮಶಾಸ್ತ್ರಗಳು ಸೇರುತ್ತವೆ.

ಅದು ಋಗ್ವೇದ ಕಾಲವು ಸರಿಸುಮಾರು ಆರ್ಯರ ಆಗಮನದಿಂದ ಕ್ರಿ.ಪೂ. ೧೫೦೦ ರಿಂದ ಕ್ರಿ.ಪೂ. ೧೦೦೦ ರವರೆಗೆ ವ್ಯಾಪಿಸಿದೆ. ಸಿಂಧೂ ನದಿಯ ಕಣಿವೆಗಳು ಹಾಗೂ ಸರಸ್ವತಿ ಮತ್ತು ದೃಷ್ಟಾವತಿ ನದಿಗಳ ದಂಡೆಯಲ್ಲಿ ಆದಿಕಾಲದ ಆರ್ಯರು ತಮ್ಮ ನೆಲೆಗಳನ್ನು ಭಾರತದಲ್ಲಿ ಸ್ಥಾಪಿಸಿಕೊಂಡರು. ಈ ಪ್ರದೇಶವನ್ನು ಸಪ್ತಸಿಂಧೂ ಪ್ರದೇಶವೆಂದು ಕರೆಯಲಾಗಿದೆ. ಈ ಪ್ರದೇಶದಲ್ಲಿ ನೆಲೆಗೊಂಡ ಮೇಲೆ ಅಲ್ಲಿಯೇ ಋಗ್ವೇದ ಮತ್ತು ಸಂಹಿತೆಗಳನ್ನು ಆರ್ಯರು ರಚಿಸಿದರು ಎನ್ನಲಾಗಿದೆ. ಆರ್ಯರ ಧಾರ್ಮಿಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಜೀವನದ ಬಗ್ಗೆ ಮೇಲೆ ಉಲ್ಲೇಖಿಸಿರುವ ಆಕರಗಳು ಬೆಳಕು ಚೆಲ್ಲುತ್ತವೆ.

## 38.4 ಸಮಾಜ

### *38.4.1 ಬುಡಕಟ್ಟು ಸಂಸ್ಕೃತಿ*

ಆರ್ಯರ ಬುಡಕಟ್ಟು ಸಮಾಜದ ಮೂಲ ಘಟಕವೆಂದರೆ ಪುರುಷ ಪ್ರಧಾನ ಕುಟುಂಬ. ಹಿರಿಯ ಮಗನು ಕುಟುಂಬದ ಮುಖ್ಯಸ್ಥನಾಗಿದ್ದ ಅವಿಭಕ್ತ ಕುಟುಂಬ ಅಂದಿನ ಕ್ರಮಬದ್ಧ ವ್ಯವಸ್ಥೆಯಾಗಿತ್ತು. ಪ್ರಜಾ ಎಂಬುದು ಗಂಡು ಮತ್ತು ಹೆಣ್ಣು ಇಬ್ಬರನ್ನು ಒಳಗೊಂಡಿತ್ತು. ಇಬ್ಬರ ಬಗ್ಗೆಯೂ ವ್ಯಾಮೋಹವಿತ್ತು. ಆದರೆ ಜನರು ಧೈರ್ಯಶಾಲಿಯಾದ, ಯುದ್ಧದಲ್ಲಿ ಹೋರಾಡಬಲ್ಲ ಗಂಡು ಮಗುವನ್ನು ಪಡೆಯಲು ಹೆಚ್ಚು ಆಸಕ್ತಿ ತಳೆದಿದ್ದನ್ನು ಕಾಣಬಹುದು. ಪುರುಷ ಪ್ರಧಾನ ವ್ಯವಸ್ಥೆಯಿದ್ದರೂ, ಅಲ್ಲಿ ಮಹಿಳೆಯರ ಸ್ಥಾನಮಾನವು ಮುಂದೆ ಬರುವ ಕಾಲದಲ್ಲಿದ್ದುದಕ್ಕಿಂತ ಉತ್ತಮವಾಗಿತ್ತು. ಋತುಮತಿಯಾದ ಮೇಲೆ ಮಗಳಿಗೆ ವಿವಾಹ ಮಾಡುತ್ತಿದ್ದರು. ಅವಿವಾಹಿತ ಮಗಳನ್ನು ಪೋಷದಲ್ಲಿ ಬೆಳೆಸುತ್ತಿದ್ದರು ಮತ್ತು ತವರು ಮನೆಯಲ್ಲೇ ತಂದೆ-ತಾಯಿಯರ ಜೊತೆ ಇರುತ್ತಿದ್ದಳು. ಕೆಲವು ಸಂದರ್ಭದಲ್ಲಿ ಯುವತಿಯು ಯುವಕರ ಜೊತೆ ಮುಕ್ತವಾಗಿ ಬೆರೆಯಬಹುದಿತ್ತು. ಕೆಲವು ಮಹಿಳೆಯರು ಋಗ್ವೇದದ ಕೆಲವು ಮಂತ್ರಗಳನ್ನು ರಚಿಸಿದ್ದಾರೆ ಎನ್ನಲಾಗಿದೆ. ಮಕ್ಕಳಿಲ್ಲದ ವಿಧವೆಯು ಗಂಡನ ಸಹೋದರನ ಜೊತೆಯಲ್ಲಿ ಬದುಕಬಹುದಾಗಿತ್ತು. ಮಕ್ಕಳನ್ನು ಪಡೆಯಬಹುದಾಗಿತ್ತು. ಇದನ್ನು ನಿಯೋಗವೆಂದು ಕರೆಯುತ್ತಾರೆ. ಈ ಕಾಲದಲ್ಲಿ ತಾಯಿಯ ಅಧಿಕಾರವನ್ನು ತಂದೆಯ ಅಧಿಕಾರವು ಸಂಪೂರ್ಣವಾಗಿ ಪಲ್ಲಟಗೊಳಿಸಿರಲಿಲ್ಲ. ಆರ್ಯರು ಭಾರತಕ್ಕೆ ಬಂದಾಗ ಅವರಲ್ಲಿ ಮೂರು ವರ್ಗಗಳಿದ್ದವು. ಮೊದಲನೆಯ ವರ್ಗ ಯೋಧರು ಅಥವಾ ಶ್ರೀಮಂತರು, ಎರಡನೆಯ ಗುಂಪು ಪುರೋಹಿತರು. ಮೂರನೆಯದು ಸಾಮಾನ್ಯ ಜನ. ಬುಡಕಟ್ಟು ಯುದ್ಧಗಳಲ್ಲಿ ಅಪಾರ ಸಂಪತ್ತು ಯೋಧವರ್ಗಕ್ಕೆ ಸೇರುತ್ತಿತ್ತು. ಆದಿಕಾಲದಲ್ಲಿ ಬುಡಕಟ್ಟಿನ ಬ್ರಾಹ್ಮಣ ಸದಸ್ಯನಿಗೆ ಸಾಮಾನ್ಯ ಜನರಿಗಿದ್ದ ಎಲ್ಲ ಅಧಿಕಾರಿಗಳಿರುತ್ತಿದ್ದವು. ಈ ಕಾರಣದಿಂದಲೇ ಬ್ರಾಹ್ಮಣನಾಗಿದ್ದ ಬಡ ವಾಮದೇವನು ತನ್ನ ಬಡತನ-ದಾರಿದ್ರ್ಯದ ಬಗ್ಗೆ ಹೀಗೆ ಗೋಳಿಟ್ಟಿದ್ದಾನೆ. "ನಾನು ದೇವರಿಗೆ ವಿನಿಯೋಗ ಸಿದ್ಧಪಡಿಸಬೇಕು. ಆದರೆ ನನಗೆ ರೈತರಿಂದ ಯಾವ ದಕ್ಷಿಣೆಯೂ ಇಲ್ಲ. ನಾನು ಹೆಂಡತಿಯನ್ನು ಸಾಕದವನಾಗಿದ್ದೇನೆ".

ಆರ್ಯ ಜನಾಂಗದೊಂದಿಗೆ ಆರ್ಯೇತರರು ಬೆರೆತು ಹೋದುದರ ಬಗ್ಗೆ ನಮಗೆ ಪುರಾವೆಗಳು ದೊರೆಯುತ್ತವೆ. ಋಗ್ವೇದದ ಒಂದು ಋಕ್ಕುವಿನಲ್ಲಿ ತಿಳಿಸಿರುವಂತೆ ಸುದಾಸನ ರಾಜಗುರುವಾಗಿ ವಿಶ್ವಾಮಿತ್ರನ ಸ್ಥಾನಕ್ಕೆ ಬಂದ ವಸಿಷ್ಠನು ವೈದಿಕ ದೇವತೆಗಳಾದ ಮಿತ್ರ ಮತ್ತು ವರುಣ ಎನ್ನುವ ಎರಡು ಬೀಜಗಳಿಂದ ಯಾವುದೇ ಜೈವಿಕ ಪ್ರಕ್ರಿಯೆಗೆ ಒಳಗಾಗಲೆ ಜನಿಸಿದವನು. ಋಗ್ವೇದದಲ್ಲಿ ಅನೇಕ ಮುನಿಗಳು (ಅಗಸ್ತ್ಯ, ಕಣ್ವ, ಅಂಗೀರಸರ ಇತ್ಯಾದಿ) ಕಪ್ಪಗಿದ್ದರೆಂದು ವರ್ಣಿಸಲಾಗಿದೆ. ಇದರಿಂದ ಆರ್ಯ ಜನಾಂಗವು ಆರ್ಯೇತರ ಜನಾಂಗದೊಂದಿಗೆ ಬೆರೆತು ಹೋಗಿದ್ದುದು ಸ್ಪಷ್ಟವಾಗುತ್ತದೆ.

ಆರ್ಯೇತರರೊಂದಿಗೆ ಬೆರೆತು ಹೋದರೂ ಕೂಡ ಆರ್ಯರು ರಕ್ತಸಂಬಂಧದಲ್ಲಿನ ಪಾವಿತ್ರದ ಬಗ್ಗೆ ಹೆಚ್ಚಿನ ಕಾಳಜಿವಹಿಸಿದ್ದರು ಮತ್ತು ಕಪ್ಪುವರ್ಣದ ಆರ್ಯೇತರರೊಂದಿಗೆ ಬೆರೆತು ಹೋದುದರಿಂದ ಎಲ್ಲಿ ತಮ್ಮ ವಿಶಿಷ್ಟತೆ ಅಳಿಸಿಹೋಗುತ್ತದೋ ಎಂಬ ಭಯ ಅವರನ್ನು ಕಾಡುತ್ತಿತ್ತು. ಬುಡಕಟ್ಟು ಸಮಾಜವು ಹೆಚ್ಚು ಬಿಗಿಯಾದ ರೂಪವನ್ನು ಪಡೆದುಕೊಳ್ಳತೊಡಗಿತು. ಋಗ್ವೇದದ ಅಂತಿಮ ಕಾಲಘಟ್ಟದಲ್ಲಿ ಸಮಾಜವು ನಾಲ್ಕು ಗುಂಪುಗಳಾಗಿ ವರ್ಗೀಕರಣಗೊಂಡಿತು. ಅವುಗಳಾವುವೆಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ. ಕ್ಷತ್ರಿಯರನ್ನು ವೇದಗಳಲ್ಲಿ ರಾಜನೆಂದು ಕರೆಯಲಾಗಿದೆ. ಕೊನೆಯ ಎರಡು ಗುಂಪುಗಳು ಆರ್ಯರ ಸೇವೆಗಾಗಿ ಇದ್ದ ಸಾಮಾನ್ಯ ಜನರಾಗಿದ್ದರು. ಶೂದ್ರ ಎಂಬ ನುಡಿಯು ಆರ್ಯರಿಗೆ ಸೋಮ, ಅವರ ಸಾಮಂತನಾಗಿದ್ದ ಒಬ್ಬನ ಹೆಸರಾಗಿದ್ದಿರಬೇಕು.

### 38.4.2 *ವರ್ಣವ್ಯವಸ್ಥೆ*

ಸಂಸ್ಕೃತದಲ್ಲಿ ವರ್ಗವನ್ನು ವರ್ಣವೆಂಬ ನುಡಿಯಿಂದ ಗುರುತಿಸಲಾಗುತ್ತಿತ್ತು. ಅನ್ಯವರ್ಣದ, ಅನ್ಯಸಂಸ್ಕೃತಿಯ ಜನರೊಂದಿಗೆ ಆರ್ಯರು ಬೆರೆತುದರಿಂದ ಉಂಟಾದ ಮಿಶ್ರಣವನ್ನು, ಅದರಿಂದ ಉಂಟಾದ ನಾಲ್ಕು ಗುಂಪುಗಳನ್ನು ಅದು ಸೂಚಿಸುತ್ತದೆ. ನಾಲ್ಕು ಬಗೆಯ ವರ್ಣಗಳಿಗೆ ಧಾರ್ಮಿಕ ಮನ್ನಣೆ ನೀಡಲಾಯಿತು. ಋಗ್ವೇದದ ೧೦ನೆಯ ಮಂಡಲದಲ್ಲಿನ ಪುರುಷಸೂಕ್ತದಲ್ಲಿ ಬ್ರಾಹ್ಮಣನು ಆದಿ ಪುರುಷನ ಮುಖದಿಂದ, ಕ್ಷತ್ರಿಯನು ತೋಳಿನಿಂದ, ವೈಶ್ಯನು ತೊಡೆಯಿಂದ ಮತ್ತು ಶೂದ್ರನು ಪಾದಗಳಿಂದ ಜನಿಸಿದರು ಎನ್ನಲಾಗಿದೆ. ಆದರೆ ಜಾತಿ ಪದ್ಧತಿಯು ಇನ್ನು ರೂಪುಗೊಂಡಿರುವುದಿಲ್ಲ. ವರ್ಣ ವಿಭಾಗವು ಕರ್ಮವನ್ನು ಆಧರಿಸಿತ್ತೆ ವಿನಾ ಹುಟ್ಟನಲ್ಲ. ಒಂದು ನಿದರ್ಶನದಲ್ಲಿ ತಂದೆಯು ಪುರೋಹಿತನಾಗಿದ್ದ, ತಾಯಿಯು ಅರುಣಿ ಮಾಡುವವಳಾಗಿದ್ದಳು ಮತ್ತು ಮಗನು ವೈದ್ಯನಾಗಿದ್ದ. ಮೂವರು ಒಟ್ಟಿಗೆ ಸುಖವಾಗಿ ಬಾಳುತ್ತಿದ್ದರು. ವೃತ್ತಿಯು ವಂಶಪಾರಂಪರ್ಯವಾಗಿರಲಿಲ್ಲ. ಸಮಾಜದ ವಿವಿಧ ವೃತ್ತಿವರ್ಗಗಳ ನಡುವೆ ಸಹಜೋಡನಕ್ಕಾಗಲಿ ಅಥವಾ ವೈವಾಹಿಕ ಸಂಬಂಧಕ್ಕಾಗಲಿ ಯಾವುದೇ ನಿರ್ಬಂಧಗಳಿರಲಿಲ್ಲ.

### 38.4.3 *ಮಹಿಳೆಯರ ಸ್ಥಾನಮಾನ*

ಮಹಿಳೆಯರಿಗೆ ಸಂಪೂರ್ಣ ಸ್ವಾತಂತ್ರ್ಯವಿತ್ತು. ಅವರ ಸ್ಥಾನಮಾನ ಉತ್ತಮವಾಗಿತ್ತು. ಅವರಿಗೆ ಶೈಕ್ಷಣಿಕ ಅವಕಾಶವನ್ನು ನಿಷೇಧಿಸಿರಲಿಲ್ಲ. ಕೆಲವು ವೈದಿಕ ಮಂತ್ರಗಳನ್ನು ಮಹಿಳೆಯರು ರಚಿಸಿದ್ದಾರೆ. ಅವರಲ್ಲಿ ಕೆಲವರ ಹೆಸರು ಹೀಗಿವೆ. ವಿಶ್ವಧಾರ, ಘೋಶ, ಲೋಪಮುದ್ರೆ, ಅಪಾಲ, ಮುಗ್ದವಾನಿ, ಗಾರ್ಗಿ, ಮೈತ್ರೇಯಿ. ಏಕಪತ್ನಿ ಪದ್ದತಿ ಆಚರಣೆಯಲ್ಲಿತ್ತು. ಬಹುಪತ್ನಿತ್ವ ಇರಲಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಆದರೆ ಬಾಲವಿವಾಹವು ಪ್ರಚಾರದಲ್ಲಿರಲಿಲ್ಲ. ಪಾಲಕರು ವಿವಾಹವನ್ನು ವ್ಯವಸ್ಥೆ ಮಾಡುತ್ತಿದ್ದರು. ಮಹಿಳೆಯರಿಗೆ ಆಸ್ತಿ ಹಕ್ಕು ಇರಲಿಲ್ಲ. ಒಂದು ವೇಳೆ ಮಹಿಳೆಗೆ ಗಂಡು ಮಗು ಆಗದಿದ್ದಾಗ ಆಕೆಯು ತನ್ನ ಮೈದುನನ ಸಂಪರ್ಕದಿಂದ ಗಂಡು ಸಂತಾನ ಪಡೆಯಬಹುದಿತ್ತು.

### 38.4.4 *ಆಹಾರ, ಪಾನೀಯ, ಸಂಗೀತ, ನೃತ್ಯ ಮತ್ತು ಅಲಂಕಾರ*

ವೈದಿಕ ಕಾಲದಲ್ಲಿ ಜನರು ಒಳ್ಳೆಯ ಉಡುಪು ಧರಿಸುತ್ತಿದ್ದರು. ಅವರು ಹತ್ತಿ, ಉಣ್ಣೆ ಮತ್ತು ರೇಶ್ಮೆ ಬಟ್ಟೆ ಬಳಸುತ್ತಿದ್ದರು. ಸಮಾಜದ ಎಲ್ಲ ವರ್ಗದ ಜನರು ಅಲಂಕಾರ ಮತ್ತು ಆಭರಣಗಳಿಗೆ ಹೆಚ್ಚಿನ ಮನ್ನಣೆ ನೀಡುತ್ತಿದ್ದರು. ಗೋಧಿ, ಬಾರ್ಲಿ, ಹಾಲು, ಹಾಲಿನ ಉತ್ಪನ್ನಗಳು, ಹಣ್ಣು, ತರಕಾರಿ ಅವರ ಆಹಾರದ ಪ್ರಧಾನ ವಸ್ತುಗಳಾಗಿದ್ದವು. ಹಸುವು ಪವಿತ್ರ ಪ್ರಾಣಿಯೆಂದು ಪೂಜಿಸಲ್ಪಡುತ್ತಿತ್ತು. ಅದನ್ನು 'ಅವಧ್ಯ'ವೆಂದು ಪರಿಗಣಿಸಲಾಗಿತ್ತು. ಗೋವನ್ನು ಕೊಂದವರಿಗೆ

ಕಲಿಕಾ ಶಿಕ್ಷೆ ನೀಡಲಾಗುತ್ತಿತ್ತು. ಅವರು ಅನೇಕ ಪ್ರಾಣಿಗಳನ್ನು ಸಾಕುತ್ತಿದ್ದರು. ಕುದುರೆ, ಎಮ್ಮೆ, ಒಂಟೆ, ಆಡು, ನಾಯಿಗಳನ್ನು ಅವರು ಸಾಕುತ್ತಿದ್ದರು. ಅವರು ಕುರಿ, ಮೇಕೆ ಮತ್ತು ದನಗಳ ಮಾಂಸವನ್ನು ತಿನ್ನುತ್ತಿದ್ದರು ಹಾಗೂ ಸೋಮರಸವನ್ನು ಕುಡಿಯುತ್ತಿದ್ದರು. ಅವರ ಪ್ರಮುಖ ಕ್ರೀಡೆಗಳೆಂದರೆ ಪಗಡೆ, ಕುದುರೆ ಓಟ ಮತ್ತು ರಥಗಳ ಓಟ. ಅವರಿಗೆ ನರ್ತನ, ನಾಟಕ ಮತ್ತು ಸಂಗೀತದಲ್ಲಿ ಹೆಚ್ಚಿನ ಅಭಿರುಚಿಯಿತ್ತು. ಅವರು ಡೋಲಕ್, ಕೊಳಲು ಮತ್ತು ಖಂಜರಗಳನ್ನು ಬಾರಿಸುತ್ತಿದ್ದರು. ಹತ್ತಿ ಉಣ್ಣೆಯಿಂದ ಮಾಡಿದ ಸರಳ ಉಡುಪನ್ನು ಅವರು ಧರಿಸುತ್ತಿದ್ದರು. ಜಿಂಕೆ ಚರ್ಮವನ್ನು ಅವರು ಬಳಸುತ್ತಿದ್ದರು. ಎರಡು ಬಗೆಯ ಉಡುಪುಗಳಿದ್ದವು. ದೇಹದ ಕೆಳಭಾಗವನ್ನು ಮುಚ್ಚಲು ಧರಿಸುತ್ತಿದ್ದ ಧೋತಿ ಮತ್ತು ಮೇಲ್ಭಾಗವನ್ನು ಮುಚ್ಚಿಕೊಳ್ಳಲು ಅಂಗವಸ್ತ್ರವನ್ನು ಬಳಸುತ್ತಿದ್ದರು. ವಿವಾಹದ ಸಂದರ್ಭದಲ್ಲಿ ವಧುವು ವಿಶೇಷ ಉಡುಪು ಧರಿಸುತ್ತಿದ್ದಳು. ಪ್ರಮುಖ ಆಭರಣಗಳೆಂದರೆ ಕಿವಿಯೋಲೆ, ಕುತ್ತಿಗೆ ಸರಗಳು, ವಕ್ಷಸ್ಥಳವನ್ನು ಅಲಂಕರಿಸಲು ಆಭರಣಗಳಿದ್ದವು.

### *38.4.5 ವೈದ್ಯಕೀಯ ಮತ್ತು ಶಿಕ್ಷಣ*

ಋಗ್ವೇದದಲ್ಲಿ ತುಂಬ ಗೌರವಕ್ಕೆ ಪಾತ್ರರಾಗಿದ್ದ ವೈದ್ಯರ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಋಗ್ವೇದ ಕಾಲದ ಪ್ರಮುಖ ರೋಗವೆಂದರೆ 'ಯಕ್ಷ್ಮಮಾ'. ಗಿಡ ಮೂಲಿಕೆಗಳನ್ನು ಔಷಧಿಯಾಗಿ ಬಳಸಲಾಗುತ್ತಿತ್ತು. ಶಸ್ತ್ರಚಿಕಿತ್ಸೆ ಬಗ್ಗೆಯೂ ಋಗ್ವೇದದಲ್ಲಿ ಉಲ್ಲೇಖವಿದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಋಗ್ವೇದದಲ್ಲಿ ಉಪನಯನ ಮತ್ತು ಸಂಸ್ಕಾರಗಳ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಆದರೆ ಶಿಕ್ಷಣ ಪಡೆಯಲು ಮಕ್ಕಳನ್ನು ಅರಣ್ಯಗಳಲ್ಲಿದ್ದ ಗುರುಗಳ ಬಳಿಗೆ ಕಳುಹಿಸುತ್ತಿದ್ದರು.

## 38.5 ಆರ್ಥಿಕತೆ

### *38.5.1 ಕುರುಬರು ಮತ್ತು ಕೃಷಿ*

ಆರ್ಯರು ಅಲೆಮಾರಿಗಳಾಗಿ ಭಾರತಕ್ಕೆ ಬಂದರು. ಕುರಿಸಾಗಾಣಿಕೆ ಹಾಗೂ ಕೃಷಿ ಅವರ ಮಿಶ್ರ ಕಸುಬುಗಳಾಗಿದ್ದವು. ಪಶುಸಾಗಾಣಿಕೆಯ ಅವರ ಬದುಕಿನಲ್ಲಿ ಪ್ರಮುಖ ಸ್ಥಾನ ಪಡೆದಿತ್ತು. ಪಶುಗಳು ಜನರ ಪ್ರಮುಖ ಆಸ್ತಿಯಾಗಿದ್ದವು. ಅವು ಪ್ರಮುಖ ಸಂಪತ್ತಾಗಿದ್ದವು. ಪಶುಸಂಪತ್ತಿನ ವೃದ್ಧಿಗೆ ಪ್ರಾರ್ಥನೆ ಮಾಡಲಾಗುತ್ತಿತ್ತು. ಯಜ್ಞ-ಯಾಗಗಳನ್ನು ನಡೆಸುತ್ತಿದ್ದವರಿಗೆ ಪಶುಗಳನ್ನು ದಕ್ಷಿಣೆಯಾಗಿ ನೀಡಲಾಗುತ್ತಿತ್ತು. ಹಸುವು ಪ್ರಮುಖ ವಿನಿಮಯ ಮಾಧ್ಯಮದ ಮಾನವಾಗಿತ್ತು. ಅನೇಕ ಸಂದರ್ಭಗಳಲ್ಲಿ ಬುಡಕಟ್ಟುಗಳ ನಡುವಿನ ಯುದ್ಧಗಳಿಗೆ ಪಶುಗಳು ಕಾರಣವಾಗಿದ್ದವು. 'ಗೋವಿಷ್ಟ' ಎಂಬ ನುಡಿಯಿಂದ ಯುದ್ಧವೆಂಬ ನುಡಿ ಬಂದಿದೆಯೆಂದು ಹೇಳಲಾಗಿದೆ. ಗೋವಿಷ್ಟಿಯೆಂದರೆ ಹಸುವೆಂದು ಅರ್ಥ. ಗೋವುಗಳ ಜೊತೆ ಗೋಶಾಲೆಯಲ್ಲಿ ವಾಸಿಸುತ್ತಿದ್ದ ಜನರಿಗೆ ಅದೇ ಗೋತ್ರ ಪ್ರಾಪ್ತವಾಗುತ್ತಿತ್ತು ಎಂಬುದರ ಆರ್ಯರ ಸಾಮಾಜಿಕ ನೀತಿಯಲ್ಲಿ ಪಶುಗಳ ಪ್ರಭಾವ ಪ್ರಧಾನವಾಗಿತ್ತು ಎಂಬುದು ತಿಳಿಯುತ್ತದೆ. ಗೋತ್ರವೆಂಬ ನುಡಿಯು ಪ್ರಾಚೀನ ವಂಶಪಾರಂಪರ್ಯವನ್ನು ತಿಳಿಸುತ್ತಿದೆ. ಮಗಳನ್ನು ದುಹಿತ್ರಿಯೆಂದು ಪರಿಗಣಿಸಲಾಗಿತ್ತು. ದುಹಿತ್ರಿಯೆಂದರೆ ಹಾಲುಕಡೆಯುವವಳು ಎಂದು ಅರ್ಥ. ಋಗ್ವೇದದಲ್ಲಿ ಎರಡು ಕಡೆ ಗೋವನ್ನು ಕೊಲ್ಲಬಾರದೆಂದು ವರ್ಣಿಸಲಾಗಿದೆ. ಇದು ಗೋವುಗಳ ಆರ್ಥಿಕ ಮಹತ್ವವನ್ನು ತೋರಿಸುತ್ತದೆ. ಅದು ಪವಿತ್ರವೆಂದು ಇನ್ನು ಪರಿಗಣಿತವಾಗಿರಲಿಲ್ಲ. ಆಹಾರಕ್ಕಾಗಿ ಗೋವು ಹಾಗೂ ಹೋರಿಗಳನ್ನು ಕಡಿಯಲಾಗುತ್ತಿತ್ತು. ಅತಿಥಿಗಳಿಗೆ ನೀಡುತ್ತಿದ್ದ ಪ್ರಮುಖ ಆಹಾರವೆಂದರೆ ಪಶುಗಳ ಮಾಂಸ. ಅದನ್ನು ಗೋಘ್ನವೆಂದು ಕರೆಯಲಾಗುತ್ತಿತ್ತು. ಅದರ ಅರ್ಥ ಗೋವಿನ ಕಡುಕ. ಗೋವಿನ ಜೊತೆಗೆ ಮೇಕೆ, ಕುರಿ, ಕುದುರೆಗಳ ಮಾಂಸವನ್ನು ಸೇವಿಸುತ್ತಿದ್ದರು. ಪಶುಗಳನ್ನು ಸಾಮಾನ್ಯ ಪಶುಪಾಲಕರು

ಸಾಕುತ್ತಿದ್ದುದರಿಂದ ಬುಡಕಟ್ಟಿನ ಒಟ್ಟಾರೆ ಮಾಲಿಕತ್ವಕ್ಕೆ ಪಶುಗಳು ಒಳಗಾಗಿದ್ದವೆಂದು ಭಾವಿಸಬಹುದು.

### *38.5.2 ಪಶುಗಳ ತಳಿ ಅಭಿವೃದ್ಧಿ*

ಆದಿಕಾಲದ ಆರ್ಯರ ಮುಖ್ಯ ಕಸುಬು ಪಶಸಂಗೋಪನೆ. ಅವರು ಕೃಷಿಯನ್ನು ಕೈಗೊಂಡಿದ್ದರು. ಹರಪ್ಪ ಸಂಸ್ಕೃತಿಯಲ್ಲಿ ನೆಲವನ್ನು ಅಗೆಯುತ್ತಿದ್ದರು. ಆದರೆ ಆರ್ಯರು ಎತ್ತುಗಳ ನೆರವಿನಿಂದ ನೆಲವನ್ನು ನೇಗಿಲಿನಿಂದ ಉಳುವುದನ್ನು ಕಲಿತಿದ್ದರು. ಅವರಿಗೆ ಋತುಗಳ ಜ್ಞಾನವಿತ್ತು. ಇದರಿಂದ ಕೃಷಿ ಅಭಿವೃದ್ಧಿ ಸಾಧ್ಯವಾಯಿತು. ಋಗ್ವೇದದಲ್ಲಿ ಐದು ಋತುಗಳ ಬಗ್ಗೆ ಉಲ್ಲೇಖವಿದೆ. ಆರ್ಯರು ಬೆಂಕಿಯನ್ನು ಬಳಸುತ್ತಿದ್ದುದಕ್ಕೆ ಪುರಾವೆ ನಮಗೆ ದೊರೆಯುತ್ತಿದೆ. ಅವರು ಅರಣ್ಯವನ್ನು ಬೆಂಕಿಯಿಂದ ಸುಟ್ಟು ಕೃಷಿಯೋಗ್ಯ ಭೂಮಿಯನ್ನು ಅಭಿವೃದ್ಧಿ ಪಡಿಸುತ್ತಿದ್ದರು. ಋಗ್ವೇದದ ಉತ್ತರ ಕಾಲದಲ್ಲಿ ಉಳುವೆ, ಬಿತ್ತುವುದು, ಸುಗ್ಗಿ, ಒಕ್ಕಣಿ ಮತ್ತು ಮಾರುವುದರ ಕೊನೆಯ ಘಟ್ಟದ ಹೊತ್ತಿಗೆ ಕೃಷಿ ಆರ್ಥಿಕತೆಯು ಸದೃಢವಾಗಿ ಬೆಳೆಯಿತು. ಈ ಕಾಲದಲ್ಲಿ ಆರ್ಯರು ಬಾರ್ಲಿ ಎಂಬ ಒಂದು ಬೆಳೆಯನ್ನು ಮಾತ್ರ ಬೆಳೆಯಲು ಕಲಿತಿದ್ದರು ಎನ್ನಲಾಗಿದೆ. ಪಶುಗಳ ಮಾಲೀಕತ್ವಕ್ಕೆ ಭಿನ್ನವಾಗಿ ಭೂಮಿಯನ್ನು ಬುಡಕಟ್ಟುವಿನ ಜನರೆಲ್ಲರೂ ಸಾಮೂಹಿಕವಾಗಿ ಮಾಲೀಕತ್ವ ಪಡೆದಿದ್ದುದು ತಿಳಿಯುತ್ತದೆ. ಜಮೀನಿಗೆ ಋಗ್ವೇದದಲ್ಲಿ ಅನೇಕ ನುಡಿಗಳನ್ನು ಬಳಸಲಾಗಿದೆ. ಜಮೀನಿನ ಅಳತೆ ಬಗ್ಗೆಯೂ ವಿವಿಧ ನುಡಿಗಳನ್ನು ಬಳಸಲಾಗಿದೆ. ಆದರೆ ಭೂಮಿಯ ಮಾರಾಟ, ವರ್ಗಾವಣೆ, ಒತ್ತೆಯಿಡುವುದು ಅಥವಾ ದಾನ ಕೊಡುವುದರ ಬಗ್ಗೆ ಉಲ್ಲೇಖಗಳಿಲ್ಲ. ಅಂದರೆ ಭೂಮಿಯ ಖಾಸಗಿ ಮಾಲಿಕತ್ವವು ಇನ್ನೂ ರೂಢಿಗೆ ಬಂದಿರಲಿಲ್ಲ.

ಆರ್ಯರು ಜೀವನೋಪಾಯಕ್ಕೆ ಪಶುಸಂಗೋಪನೆ ಮತ್ತು ಕೃಷಿಯನ್ನು ಅವಲಂಬಿಸಿದ್ದರು. ಗ್ರಾಮದ ಭೂಮಿಯನ್ನು ಸಾಗುವಳಿ ಕ್ಷೇತ್ರ, ಅರಣ್ಯ ಮತ್ತು ಹುಲ್ಲುಗಾವಲಾಗಿ ವರ್ಗೀಕರಿಸಲಾಗುತ್ತಿತ್ತು. ಉಳುಮೆಗೆ ನೇಗಿಲು ಮತ್ತು ಎತ್ತುಗಳನ್ನು ಬಳಸುತ್ತಿದ್ದರು. ಸಾಗುವಳಿ ಭೂಮಿಯು ಖಾಸಗಿ ಮಾಲಿಕತ್ವದಲ್ಲಿತ್ತು. ಅವರು ಭತ್ತ, ಗೋಧಿ, ಬಾರ್ಲಿ, ತರಕಾರಿ ಮತ್ತು ಬೇಳೆಕಾಳುಗಳನ್ನು ಬೆಳೆಯುತ್ತಿದ್ದರು. ಕೆರೆ, ಕಾಲುವೆ-ಕುಂಟೆಗಳಿಂದ ನೀರಾವರಿ ಮಾಡುವುದು ಅವರಿಗೆ ತಿಳಿದಿತ್ತು. ಬಟ್ಟೆ ಮಾಡಲು ಹತ್ತಿ ಮತ್ತು ರೇಷ್ಮೆಯನ್ನು ಅವರು ಬೆಳೆಯುತ್ತಿದ್ದರು. ಅವರು ರೇಷ್ಮೆ, ಹತ್ತಿ ಮತ್ತು ಉಣ್ಣೆ ಬಟ್ಟೆಯನ್ನು ಧರಿಸುತ್ತಿದ್ದರು. ಚರಕದ ಉಲ್ಲೇಖ ಋಗ್ವೇದದಲ್ಲಿ ಸಿಗುತ್ತಿದೆ. ಬೆಳ್ಳಿ, ಚಿನ್ನ ಮತ್ತಾ ತಾಮ್ರ ಲೋಹದ ಬಗ್ಗೆ ಅವರಿಗೆ ತಿಳಿದಿತ್ತು. ಆದರೆ ಕಬ್ಬಿಣದ ಬಳಕೆ ಅವರಿಗೆ ತಿಳಿದಿರಲಿಲ್ಲ. ಋಗ್ವೇದದ ಉತ್ತರ ಕಾಲದಲ್ಲಿ ಮಾತ್ರ ಕಪ್ಪು ಲೋಹವಾದ ಕಬ್ಬಿಣದ ಬಗ್ಗೆ ಉಲ್ಲೇಖ ಸಿಗುತ್ತದೆ.

### *38.5.3 ವ್ಯಾಪಾರ ಮತ್ತು ವಾಣಿಜ್ಯ*

ಋಗ್ವೇದದ ಕಾಲದಲ್ಲಿ ಭೂಮಿ ಮತ್ತು ಅಂತರಾಷ್ಟ್ರೀಯ ವ್ಯಾಪಾರ ಜನಪ್ರಿಯವಾಗಿದ್ದವು. ವ್ಯಾಪಾರಿಗಳನ್ನು 'ಪಾಣಿ'ಯೆಂದು ಕರೆಯುತ್ತಿದ್ದರು. ಸಾಟಿ ವಿನಿಮಯ ಪದ್ಧತಿ ರೂಢಿಯಲ್ಲಿತ್ತು. ಋಗ್ವೇದದಲ್ಲಿ ನಿಷಾಕದ ಉಲ್ಲೇಖ ಬರುವುದರಿಂದ ಅವರಿಗೆ ಚಿನ್ನದ ನಾಣ್ಯದ ಬಳಕೆ ಗೊತ್ತಿತ್ತು ಎಂಬುದು ತಿಳಿಯುತ್ತದೆ. ಹಸುಗಳನ್ನು ವಿನಿಮಯ ಮಾಧ್ಯಮವಾಗಿ ಬಳಸುತ್ತಿದ್ದರು. ಹಸುಗಳ ಮಾಲಿಕತ್ವವನ್ನು ಸಂಪತ್ತಿನ ಮಾಪನವಾಗಿ ಬಳಸುತ್ತಿದ್ದರು. ಹಡಗು ನಿರ್ಮಾಣವು ಅವರಿಗೆ ತಿಳಿದಿತ್ತು. ಸರಕುಗಳ ಸಾಗಾಣಿಕೆಗೆ ಅವರು ಕುದುರೆ ಮತ್ತು ಕತ್ತೆಗಳನ್ನು ಬಳಸುತ್ತಿದ್ದರು. ಚಿನ್ನ, ಬೆಳ್ಳಿ, ಮತ್ತು ತಾಮ್ರದ ನಾಣ್ಯಗಳ ಬಗ್ಗೆ ಋಗ್ವೇದದಲ್ಲಿ ಉಲ್ಲೇಖಗಳು ದೊರೆಯುತ್ತವೆ. ಸಾಲ ಮತ್ತು ಬಟ್ಟೆ ವ್ಯವಹಾರ ಅವರಿಗೆ ತಿಳಿದಿತ್ತು, ದುಬಾರಿ ಬಡ್ಡಿಯನ್ನು ಅಲ್ಲಿ ಟೀಕಿಸಲಾಗಿದೆ.

## 38.6 ಧರ್ಮ

ಋಗ್ವೇದದ ಕಾಲದಲ್ಲಿ ಆರ್ಯಧರ್ಮ ಸರಳವಾಗಿತ್ತು ಮತ್ತು ಸುಲಭವಾಗಿತ್ತು. ಪ್ರಕೃತಿಯ ಅನೇಕ ಶಕ್ತಿಗಳಾದ ಸೂರ್ಯ, ಚಂದ್ರ, ಸೂರ್ಯೋದಯ, ಗುಡುಗು, ಗಾಳಿ ಮುಂತಾದವುಗಳನ್ನು ಅವರು ಪೂಜಿಸುತ್ತಿದ್ದರು. ವೈದಿಕ ದೇವರುಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಬಹುದು. ಭೂ ದೇವತೆಗಳು -ಪೃಥ್ವಿ, ಅಗ್ನಿ ಮತ್ತು ಸೋಮ. ಪ್ರಾಕೃತಿಕ ದೇವತೆಗಳು - ಇಂದ್ರ, ವರುಣ, ವಾಯು. ಮೂರನೆಯದು - ಸ್ವರ್ಗದ ದೇವತೆಗಳು. ಉಷಾ, ಅಶ್ವಿನಿ, ಮಿತ್ರ ಮುಂತಾದವರು. ಆದಿಕಾಲದಲ್ಲಿ ವರುಣನಿಗೆ ಹೆಚ್ಚಿನ ಮಹತ್ವ ನೀಡಲಾಗಿತ್ತು. ತದನಂತರ ವರುಣ ಮೂಲೆಗುಂಪಾದನು. ನಂತರ ಇಂದ್ರನು ಪ್ರಮುಖ ದೇವತೆ ಸ್ಥಾನವನ್ನು ಆಕ್ರಮಿಸಿಕೊಂಡನು. ಋಗ್ವೇದದ ಕಾಲು ಭಾಗದ ಮಂತ್ರಗಳಷ್ಟು ಇಂದ್ರನನ್ನು ಕುರಿತು ಪ್ರಾರ್ಥನೆಗೆ ಮೀಸಲಾಗಿವೆ. ಸೂರ್ಯನನ್ನು ಅನೇಕ ವಿಧಗಳಲ್ಲಿ ಪೂಜಿಸಲಾಗುತ್ತಿತ್ತು. ಅಗ್ನಿಯು ಒಬ್ಬ ಪ್ರಮುಖ ದೇವತೆಯಾಗಿದ್ದ, ಇನ್ನೂ ಅನೇಕ ದೇವತೆಗಳನ್ನು ಅವರು ಆರಾಧಿಸುತ್ತಿದ್ದರು. ವೈದಿಕ ದೇವತೆಗಳಲ್ಲಿ ಶ್ರೇಣೀಕರಣವಿರಲಿಲ್ಲ.

ವೈದಿಕರ ಆಚರಣೆಗಳಲ್ಲಿ ಯಜ್ಞ-ಯಾಗಗಳಿಗೆ ಪ್ರಮುಖ ಸ್ಥಾನವಿತ್ತು. ಆದಿ ವೈದಿಕ ಯುಗದಲ್ಲಿ ಪುರೋಹಿತ ವರ್ಗವಿರಲಿಲ್ಲ. ಪ್ರತಿಯೊಬ್ಬ ಕುಟುಂಬಸ್ಥನು ಯಜ್ಞದ ಅಗ್ನಿಷ್ಟಿಕೆಯನ್ನು ಸದ್ಧಪಡಿಸಿ ತಾನೇ ಮಂತ್ರಗಳನ್ನು ಪಠಿಸುತ್ತಿದ್ದನು. ಯಜ್ಞಗಳಿಗೆ ಸಾಮಾನ್ಯವಾದ ಆಹಾರ ಮತ್ತು ಪಾನೀಯಗಳನ್ನು ಅರ್ಪಿಸುತ್ತಿದ್ದರು. ದೇವತೆಗಳನ್ನು ತಣಿಸುವುದಕ್ಕಾಗಿ ಹವಿಸ್ಸನ್ನು ಅಗ್ನಿಗೆ ಆಹುತಿ ನೀಡುತ್ತಿದ್ದರು. ಹಾಲು, ಧಾನ್ಯ, ತುಪ್ಪ, ಮಾಂಸ ಮುಂತಾದವುಗಳನ್ನು ಅವರು ಅಗ್ನಿಗೆ ಅರ್ಪಿಸುತ್ತಿದ್ದರು. ವೈದಿಕ ಪುರಾಣಗಳಲ್ಲಿ ಉಲ್ಲೇಕಗೊಂಡಿರುವ ಒಂದು ಪ್ರಮುಖ ಪ್ರಾಣಿಯೆಂದರೆ ಗಂಡು ಆನೆ. ವೈದಿಕ ಕಾಲದಲ್ಲಿ ಜನರು ಆಶಾವಾದಿಗಳಾಗಿದ್ದರು. ದೇವತೆಗಳ ಭಯ ಅವರಿಗಿರಲಿಲ್ಲ. ದೇವತೆಗಳನ್ನು ಅವರು ತಮ್ಮ ರಕ್ಷಕರೆಂದು ಮತ್ತು ದೈವಿಶಕ್ತಿ ಪಡೆದಿದ್ದರೆಂದು ಅವರು ಭಾವಿಸಿದ್ದರು.

## 38.7 ಋಗ್ವೇದ ಕಾಲದ ರಾಜಕಾರಣ

### *38.7.1 ರಾಜಕೀಯ ವ್ಯವಸ್ಥೆ*

ಋಗ್ವೇದ ಕಾಲದ ರಾಜಕೀಯವು ಕೆಳಕಂಡ ಗುಂಪುಗಳನ್ನು ಒಳಗೊಂಡಿತ್ತು.

*ಕುಟುಂಬ*

ಋಗ್ವೇದ ಕಾಲದ ಅತ್ಯಂತ ಸಣ್ಣ ರಾಜಕೀಯ ಘಟಕವೆಂದರೆ ಕುಟುಂಬ. ಸಮಾಜದಲ್ಲಿ ಅವಿಭಕ್ತ ಕುಟುಂಬವು ಪ್ರಚಾರದಲ್ಲಿತ್ತು. ಕುಟುಂಬದ ಹಿರಿಯ ಮಗನು ಮುಖ್ಯಸ್ಥನಾಗಿದ್ದನು. ಅವನ ಆದೇಶದಂತೆ ಕುಟುಂಬದ ಸದಸ್ಯರು ನಡೆಯಬೇಕಾಗಿತ್ತು.

*ಗ್ರಾಮ*

ಅನೇಕ ಕುಟುಂಬಗಳ ಸಮೂಹವೇ ಗ್ರಾಮ. ಕುಟುಂಬದ ಮುಖ್ಯಸ್ಥನಿದ್ದಂತೆ ಗ್ರಾಮಗಳಿಗೆ ಗ್ರಾಮಿಣಿ ಎಂಬ ಮುಖ್ಯಸ್ಥನಿರುತ್ತಿದ್ದನು. ಗ್ರಾಮಿಣಿ ಹುದ್ದೆಯು ತುಂಬಾ ಮುಖ್ಯವಾಗಿತ್ತು. ಏಕೆಂದರೆ ಆತನು ಗ್ರಾಮದ ಆಡಳಿತಗಾರನಾಗಿದ್ದನು. ಗ್ರಾಮಿಣಿಯನ್ನು ಚುನಾಯಿಸಲಾಗುತ್ತಿತ್ತು ಎಂಬುದರ ಬಗ್ಗೆ ಋಗ್ವೇದದಲ್ಲಿ ನಮಗೆ ಮಾಹಿತಿ ದೊರೆಯುವುದಿಲ್ಲ.

### ವಿಷಾ

ಅನೇಕ ಗ್ರಾಮಗಳ ಗುಂಪನ್ನು ವಿಷಾ ಎಂದು ಕರೆಯಲಾಗುತ್ತಿತ್ತು. ಅದರ ಮುಖ್ಯಸ್ಥನನ್ನು ವಿಷಾಪತಿಯೆಂದು ಕರೆಯುತ್ತಿದ್ದರು.

### ಜನ

ಅನೇಕ ವಿಷಾಗಳು ಸೇರಿ 'ಜನ' ವಾಗುತ್ತಿತ್ತು. ಜನರ ಮುಖ್ಯ ಆಡಳಿತಗಾರನೆಂದರೆ 'ಗೋಪ'. ಅಂದಿನ ಕಾಲದಲ್ಲಿ ಗೋಪ ತುಂಬಾ ಪ್ರಭಾವಿ ಹುದ್ದೆಯಾಗಿತ್ತು. ಗೋಪ ಸ್ಥಾನವನ್ನು ರಾಜ ಅಲಂಕರಿಸುತ್ತಿದ್ದನು.

### ರಾಷ್ಟ್ರ

ಇಡೀ ದೇಶವನ್ನು ರಾಷ್ಟ್ರವೆಂದು ಕರೆಯುತ್ತಿದ್ದರು. ಒಂದೇ ಸರ್ಕಾರವಿರುತ್ತಿತ್ತು.

## 38.7.2 ರಾಜನ ಸ್ಥಾನಮಾನ

ವೈದಿಕ ಕಾಲದಲ್ಲಿ ಸರ್ಕಾರವೆಂದರೆ ಪ್ರಭುತ್ವ. ಅವನನ್ನು ರಾಜನೆಂದು ಕರೆಯಲಾಗಿತ್ತು. ರಾಜ್ಯದ ಮುಖ್ಯಸ್ಥನಾಗಿ ಅವನು ಆಡಳಿತ ನಡೆಸುತ್ತಿದ್ದನು. ವೈದಿಕ ಕಾಲದಲ್ಲಿ ರಾಜನಿಗೆ ಹೆಚ್ಚಿನ ಅಧಿಕಾರವಿರಲಿಲ್ಲ. ಏಕೆಂದರೆ ಸಭಾ ಮತ್ತು ಸಮಿತಿಗಳು ರಾಜನನ್ನು ತೆಗೆದು ಹಾಕಬಹುದಿತ್ತು. ರಾಜನನ್ನು ಚುನಾಯಿಸಲಾಗುತ್ತಿತ್ತು. ರಾಜನ ಅಧಿಕಾರಗಳು ಧಾರ್ಮಿಕ ಹಾಗೂ ಸಾಂಪ್ರದಾಯಿಕ ಕಟ್ಟಳೆಗಳಿಗೆ ಒಳಪಟ್ಟಿದ್ದ ಕರ್ತವ್ಯದಿಂದ ವಿಮುಖನಾದ ರಾಜನನ್ನು ತೆಗೆದು ಹಾಕಬಹುದಿತ್ತು. ಮುಕ್ತ ಸಭೆಯಲ್ಲಿ ರಾಜನು ಶಾಸನಕ್ಕೆ ವಿಧೇಯನಾಗಿರುತ್ತೇನೆಂದು ಪ್ರಮಾಣ ತೆಗೆದುಕೊಳ್ಳಬೇಕಾಗಿತ್ತು. ಪ್ರಭುತ್ವವು ವಂಶಪಾರಂಪರ್ಯವಾಗುವ ಪದ್ಧತಿ ರೂಢಿಗೆ ಬಂದಿತ್ತು. ಸಾಂಪ್ರದಾಯಿಕ ಕಟ್ಟಳೆಗಳಿಗೆ ಅನುಗುಣವಾಗಿ ರಾಜನು ಆಡಳಿತ ನಡೆಸಬೇಕಾಗಿತ್ತು. ರಾಜ್ಯದ ಆಡಳಿತ ನಡೆಸಲು ರಾಜನಿಗೆ ಅನೇಕ ಅಧಿಕಾರಿಗಳು ನೆರವಾಗುತ್ತಿದ್ದರು. ಅಂತಹ ಅಧಿಕಾರಿಗಳೆಂದರೆ ಪುರೋಹಿತ, ಸೇನಾನಿ ಮತ್ತು ಗ್ರಾಮಿಣಿ. ಅಧಿಕಾರಿಗಳಲ್ಲಿ ಪುರೋಹಿತನಿಗೆ ಪ್ರಧಾನ ಸ್ಥಾನವಿತ್ತು. ಪುರೋಹಿತ ಅಥವಾ ರಾಜಗುರುವು ರಾಜನ ಗೆಳೆಯನಾಗಿ, ಮಾರ್ಗದರ್ಶಕನಾಗಿ ಮತ್ತು ತತ್ವಶಾಸ್ತ್ರಜ್ಞನಾಗಿ ಕೆಲಸ ಮಾಡಬೇಕಾಗಿತ್ತು. ರಾಜನನ್ನು ಮತ್ತು ಅವನ ಸಾಧನೆಗಳನ್ನು ಹೊಗಳಿ ಅವನು ಮಂತ್ರಗಳನ್ನು ರಚಿಸುತ್ತಿದ್ದನು. ರಾಜನ ಜೊತೆಯಲ್ಲಿ ರಣರಂಗಕ್ಕೂ ಹೋಗುತ್ತಿದ್ದ ಪುರೋಹಿತನು ರಾಜನ ವಿಜಯಕ್ಕಾಗಿ ಪ್ರಾರ್ಥನೆ ಮಾಡುತ್ತಿದ್ದನು. ಸೇನಾನಿಯು ರಾಜ್ಯ ನೇಮಕ ಮಾಡಿದ್ದ ರಕ್ಷಣಾದಳದ ಮುಖಂಡನಾಗಿದ್ದ. ಶತ್ರುಗಳ ಆಕ್ರಮಣದಿಂದ ದೇಶವನ್ನು ರಕ್ಷಿಸುವುದು ಮತ್ತು ಬಂಡೆದ್ದ ಬುಡಕಟ್ಟು ಮುಖ್ಯಸ್ಥರ ಮೇಲೆ ಆಕ್ರಮಣ ಮಾಡಿ ಅವರನ್ನು ಸೋಲಿಸುವುದು ಸೇನಾನಿಯ ಮುಖ್ಯ ಕರ್ತವ್ಯಗಳಾಗಿದ್ದವು. ಗ್ರಾಮಿಣಿಯು ಗ್ರಾಮದ ಮುಖ್ಯಸ್ಥ. ಅವನು ಆಡಳಿತದ ಹಾಗೂ ನ್ಯಾಯಾಂಗದ ಮುಖ್ಯಸ್ಥನಾಗಿ ಕೆಲಸ ಮಾಡುತ್ತಿದ್ದನು. ದೂತ ಹಾಗೂ ಬೇಹುಗಾರರ ಬಗ್ಗೆಯೂ ಅಲ್ಲಿ ಉಲ್ಲೇಖಗಳು ದೊರೆಯುತ್ತವೆ.

## 38.7.3 ಸಭಾ ಮತ್ತು ಸಮಿತಿಗಳು

ವೈದಿಕ ರಾಜಕೀಯ ವ್ಯವಸ್ಥೆಯ ಪ್ರಮುಖ ಸಂಸ್ಥೆಗಳೆಂದರೆ ಸಭಾ ಮತ್ತು ಸಮಿತಿ. ಪ್ರಜಾಪತಿಯ ಎರಡು ಸಂತಾನಗಳಿಂದ ಸಭಾ ಮತ್ತು ಸಮಿತಿಗಳ ಬಗ್ಗೆ ಇಲ್ಲಿರುವ ಉಲ್ಲೇಖದಿಂದ ಅವು ಎಷ್ಟು ಪ್ರಾಚೀನವಾದವು ಎಂಬುದು ತಿಳಿಯುತ್ತದೆ. ವೈದಿಕ ರಾಜಕೀಯ ವ್ಯವಸ್ಥೆಯಲ್ಲಿ ಸಭಾ ವಿಶಿಷ್ಟ ಸ್ಥಾನವನ್ನು ಪಡೆದಿತ್ತು. ಸಭಾ ಎಂದರೇನು ಎಂಬುದು ನಿರ್ದಿಷ್ಟವಾಗಿ ತಿಳಿದು ಬಂದಿಲ್ಲ. ದೈನಂದಿನ ಆಡಳಿತವನ್ನು ಕುರಿತು ರಾಜನಿಗೆ ಸಲಹೆ - ಮಾರ್ಗದರ್ಶನ ನೀಡುತ್ತಿದ್ದ ಹಿರಿಯರ ಒಂದು ಮಂಡಳಿ ಅದಾಗಿತ್ತು ಎಂಬುದು ತಿಳಿದು ಬರುತ್ತದೆ. ರಾಜನ ಮೇಲೆ ಸಭಾಕ್ಕೆ ಪೂರ್ಣ

ನಿಯಂತ್ರಣವಿತ್ತು. ರಾಷ್ಟ್ರೀಯ ನ್ಯಾಯಾಂಗವಾಗಿಯೂ ಅದು ಕೆಲಸ ಮಾಡುತ್ತಿತ್ತು. ವೈದಿಕ ರಾಜಕೀಯ ವ್ಯವಸ್ಥೆಯ ಮತ್ತೊಂದು ಅಂಗವೆಂದರೆ ಸಮಿತಿ. ರಾಜನ ನಿರಂಕುಶಾಧಿಕಾರದ ಮೇಲೆ ಸಮಿತಿಗೆ ಅಂಕುಶವಿತ್ತು. ಅದು ರಾಜನನ್ನು ಆಯ್ಕೆ ಮಾಡುತ್ತಿತ್ತು ಮತ್ತು ಆಡಳಿತ ಮತ್ತು ರಕ್ಷಣಾದಳದ ಮೇಲೆ ಸಮಿತಿಗೆ ನಿಯಂತ್ರಣವಿತ್ತು. ರಾಷ್ಟ್ರೀಯ ಮಟ್ಟದ ಉನ್ನತ ಸಂಸ್ಥೆಯಾದ ಸಮಿತಿಯು ರಾಜ್ಯದ ಹಿತದ ಬಗ್ಗೆ ಕಾಳಜಿವಹಿಸುತ್ತಿತ್ತು.

ರಾಜ್ಯದ ಧಾರ್ಮಿಕ ವ್ಯವಹಾರವನ್ನು ಜನಪರ ಸಭೆಯಾದ ವಿಧಾತ ನೋಡಿಕೊಳ್ಳುತ್ತಿತ್ತು. ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಸೇನಾಯಿಯು ಕಾಯ್ದುಕೊಳ್ಳುವ ಕೆಲಸ ಮಾಡುತ್ತಿದ್ದನು. ಆದಿವೈದಿಕ ಕಾಲದ ರಾಜಕೀಯ ವ್ಯವಸ್ಥೆಯು ಬುಡಕಟ್ಟು ಸ್ವರೂಪದಲ್ಲಿತ್ತು.

### *38.7.4* ನ್ಯಾಯಾಡಳಿತ

ನ್ಯಾಯಾಂಗದ ಉನ್ನತ ಅಧಿಕಾರಿಯೆಂದರೆ ರಾಜ. ನ್ಯಾಯ ನಿರ್ವಹಣೆಯಲ್ಲಿ ಪುರೋಹಿತನು ರಾಜನಿಗೆ ನೆರವಾಗುತ್ತಿದ್ದ. ಗ್ರಾಮಗಳಲ್ಲಿನ ನ್ಯಾಯಾಧಿಕಾರಿಗೆ ಗ್ರಾಮವಾದಿನಿ ಎಂದು ಕರೆಯಲಾಗುತ್ತಿತ್ತು. ಋಗ್ವೇದದಲ್ಲಿ ಕಳ್ಳತನ, ಮೋಸ, ದರೋಡೆ, ಡಕಾಯಿತಿ ಮುಂತಾದ ಅಪರಾಧಗಳ ಬಗ್ಗೆ ಉಲ್ಲೇಖವಿದೆ. ಸತ್ಯ ಪರೀಕ್ಷೆಯ ಮೂಲಕ ನ್ಯಾಯವನ್ನು ನೀಡಲಾಗುತ್ತಿತ್ತು. ಕಾಯಿಸಿದ ಕಬ್ಬಿಣದ ಸರಳನ್ನು ಹಿಡಿದುಕೊಳ್ಳುವುದು, ಬೆಂಕಿಯಲ್ಲಿ ಹಾದು ಹೋಗುವುದು, ನೀರಿನಲ್ಲಿ ಮುಳುಗುವುದು ಮುಂತಾದ ಪರೀಕ್ಷೆಗಳನ್ನು ನ್ಯಾಯ ನೀಡುವಾಗ ನಡೆಸಲಾಗುತ್ತಿತ್ತು. ಸಾಲವನ್ನು ಹಿಂತಿರುಗಿಸದ ಸಾಲಗಾರನು ಸಾಲ ನೀಡಿದವನ ಗುಲಾಮನಾಗಿ ಕೆಲಸಮಾಡಬೇಕಾಗಿತ್ತು. ದೇಶದ್ರೋಹಿ ಮತ್ತು ಕೊಲೆಗಾರರಿಗೆ ಮರಣದಂಡನೆ ವಿಧಿಸಲಾಗುತ್ತಿತ್ತು. ಧರ್ಮವು ಕಾನೂನಿನ ಆಧಾರವಾಗಿತ್ತು.

## 38.8 ಸಾರಾಂಶ

ಋಗ್ವೇದದ ಕಾಲದಲ್ಲಿ ಆರ್ಯರು ಉನ್ನತ ಸಂಘಟಿತ ನಾಗರಿಕತೆಯನ್ನು ಅಭಿವೃದ್ಧಿಪಡಿಸಿದ್ದರು. ಅವರದು ಪುರುಷ ಪ್ರಧಾನ ಸಮಾಜವಾಗಿತ್ತು. ಅವರು ಗ್ರಾಮಗಳಲ್ಲಿ ಜೀವಿಸುತ್ತಿದ್ದರು. ಆಶ್ರಮ ಮತ್ತು ವರ್ಣ ಅವರ ಸಮಾಜದ ಬಹು ಮುಖ್ಯ ಲಕ್ಷಣಗಳಾಗಿದ್ದವು. ಆದರೆ ಜಾತಿ ಪದ್ಧತಿಯು ತುಂಬಾ ಕಠೋರವಾಗಿರಲಿಲ್ಲ. ಮಹಿಳೆಯರ ಸ್ಥಾನಮಾನ ಉತ್ತಮವಾಗಿತ್ತು. ಅಲ್ಲಿ ಬುಡಕಟ್ಟು ನಾಯಕರಿದ್ದರು. ರಾಜನ ಸಾಮಂತರಾಗಿ ಅವರು ಆಡಳಿತ ನಡೆಸುತ್ತಿದ್ದರು. ವೈದಿಕ ರಾಜನಿಗೆ ಪುರೋಹಿತ, ಸೇನಾನಿ ಮತ್ತು ಗ್ರಾಮಿಣಿ ಸಹಾಯಕರಾಗಿದ್ದರು. ಪ್ರಜಾಪತಿಯ ಅವಳಿ ಸಂತಾನಗಳಾದ ಸಭಾ ಮತ್ತು ಸಮಿತಿಗಳು ರಾಜಕೀಯ ವ್ಯವಸ್ಥೆಯ ಬಹುಮುಖ್ಯ ಸಂಸ್ಥೆಗಳಾಗಿದ್ದವು. ರಾಜನು ನ್ಯಾಯಾಂಗದ ಮುಖ್ಯಸ್ಥನಾಗಿದ್ದನು. ಆಶ್ರಮಗಳಲ್ಲಿ ವಿದ್ಯಾರ್ಥಿಗಳಿಗೆ ಆಧ್ಯಾತ್ಮಿಕ ಹಾಗೂ ಲೌಕಿಕ ಶಿಕ್ಷಣವನ್ನು ನೀಡಲಾಗುತ್ತಿತ್ತು. ಶಿಕ್ಷಣವು ಪ್ರಧಾನವಾಗಿ ಮೌಲಿಕವಾಗಿತ್ತು.

ರಥಗಳ ಸಾರೋಟು, ಪಗಡೆ, ನರ್ತನ ಮುಂತಾದವು ಮನರಂಜನೆ ಸಾಧನಗಳಾಗಿದ್ದವು. ಕುರಿಸಾಕಣೆಕೆ ಮತ್ತು ಕೃಷಿಯು ಋಗ್ವೇದ ಕಾಲದ ಆರ್ಯರ ಮುಖ್ಯ ಕಸುಬುಗಳಾಗಿದ್ದವು. ಅವು ಅವರ ಜೀವನದ ಆಧಾರಗಳಾಗಿದ್ದವು. ಕುದುರೆ, ಎತ್ತು ಮತ್ತು ಕತ್ತೆಗಳನ್ನು ಸರಕು ಸಾಗಾಣಿಕೆಗೆ ಬಳಸುತ್ತಿದ್ದರು. ಅವರಿಗೆ ಕಬ್ಬಿಣದ ಬಳಕೆ ಗೊತ್ತಿರಲಿಲ್ಲ. ಅವರು ಉತ್ತಮವಾದ ಉಡುಪನ್ನು ಧರಿಸುತ್ತಿದ್ದರು ಮತ್ತು ಆಭರಣಗಳ ಬಗ್ಗೆ ಅವರಿಗೆ ಅತಿಯಾದ ಮೋಹವಿತ್ತು. ಅವರು ಮಾಂಸಾಹಾರಿಗಳಾಗಿದ್ದರು ಮತ್ತು ಸೋಮರಸವನ್ನು ಸೇವಿಸುತ್ತಿದ್ದರು.

ಧರ್ಮವು ಸರಳವಾಗಿತ್ತು ಮತ್ತು ವೈಜ್ಞಾನಿಕವಾಗಿತ್ತು. ಸೂರ್ಯನನ್ನು ಜನರು ಆರಾಧಿಸುತ್ತಿದ್ದರು. ಯಜ್ಞ-ಯಾಗಗಳನ್ನು ಆಚರಿಸುತ್ತಿದ್ದರು ಮತ್ತು ಆರೋಗ್ಯ ಮತ್ತು ಸುಖಕ್ಕಾಗಿ ಅವರು ಮಂತ್ರಗಳನ್ನು ಪಠಿಸುತ್ತಿದ್ದರು ಮತ್ತು ಪ್ರಾರ್ಥನೆ ಸಲ್ಲಿಸುತ್ತಿದ್ದರು.

## 38.9 ಮಾದರಿ ಪ್ರಶ್ನೆಗಳು

1. ಋಗ್ವೇದ ಸಂಸ್ಕೃತಿಯ ಮುಖ್ಯ ಲಕ್ಷಣಗಳನ್ನು ವಿವರಿಸಿ.
2. ಋಗ್ವೇದ ಕಾಲದ ಆರ್ಯನ್ನರ ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಬದುಕನ್ನು ಕುರಿತು ಚರ್ಚಿಸಿರಿ.

## 38.10 ಹೆಚ್ಚಿನ ಅಧ್ಯಾಯನಕ್ಕೆ


1. Altekar .A.S. : **Ancient India**
2. Tripati .R.S. : **Ancient India**
3. Sathianathier .R. : **History of India, Vol I**
4. Mittal .A.K. : **Political and Cultural History of India**
5. Basham .A.L. : **The Wonder that was India**
6. Majumdar .R.C. (Ed) : **The Clasical Age**

## ಟಿಪ್ಪಣಿಗಳು

# ಘಟಕ - 39

# ಉತ್ತರ ವೈದಿಕ ಕಾಲದ ಸಮಾಜ, ಆರ್ಥಿಕತೆ, ಧರ್ಮ ಮತ್ತು ರಾಜಕೀಯ ವ್ಯವಸ್ಥೆ

*ರಚನೆ*


**39.0** ಉದ್ದೇಶಗಳು

**39.1** ಪೀಠಿಕೆ

**39.2** ಆರ್ಯರ ವಿಸ್ತರಣೆ

**39.3** ಸಮಾಜ

- **39.3.1** ಕೌಟುಂಬಿಕ ಜೀವನ
- **39.3.2** ಮನರಂಜನೆ
- **39.3.3** ಆಹಾರ ಮತ್ತು ಪಾನೀಯ
- **39.3.4** ಉಡುಪು ಮತ್ತು ಅಲಂಕಾರ
- **39.3.5** ಶಿಕ್ಷಣ
- **39.3.6** ಜಾತಿಪದ್ಧತಿ
- **39.3.7** ಆಶ್ರಮ ವ್ಯವಸ್ಥೆ
- **39.3.8** ಸಾಹಿತ್ಯ
- **39.3.9** ವಿವಾಹ ಮತ್ತು ಮಹಿಳೆಯರ ಸ್ಥಾನಮಾನ

**39.4** ಆರ್ಥಿಕತೆ

- **39.4.1** ಕೃಷಿ
- **39.4.2** ಪಶುಸಂಗೋಪನೆ
- **39.4.3** ಗುಡಿಕೈಗಾರಿಕೆ ಮತ್ತು ಕಸುಬುಗಳು
- **39.4.4** ವ್ಯಾಪಾರ ಮತ್ತು ವಾಣಿಜ್ಯ

**39.5** ಧರ್ಮ

- **39.5.1** ದೇವರ ಸ್ಥಾನಮಾನ
- **39.5.2** ಯಜ್ಞ-ಯಾಗಗಳು

39.5.3 ತತ್ವಜ್ಞಾನ

39.5.4 ಸಂಸ್ಕಾರಗಳು

39.6 ರಾಜಕೀಯ ವ್ಯವಸ್ಥೆ

39.6.1 ಪ್ರಬಲ ಪ್ರಭುತ್ವಗಳ ಉದಯ

39.6.2 ರಾಜನ ಅಧಿಕಾರ

39.6.3 ಆಡಳಿತಾಧಿಕಾರಿಗಳು

39.7 ಸಾರಾಂಶ

39.8 ಮಾದರಿ ಪ್ರಶ್ನೆಗಳು

39.9 ಹೆಚ್ಚಿನ ಅಧ್ಯಯನಕ್ಕೆ

## 39.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ

1. ಉತ್ತರ ಭಾರತದಲ್ಲಿ ಸಪ್ತಸಿಂಧೂ ಪ್ರದೇಶದ ಆರ್ಯರ ವಿಸ್ತರಣೆ
2. ಬುಡಕಟ್ಟು ಹಂತದಿಂದ ವಿಕಾಸ ಹೊಂದಿದ ಹೊಸ ಪ್ರಭುತ್ವ ಹಾಗೂ ರಾಜನ ಅಧಿಕಾರ
3. ಉತ್ತರ ವೈದಿಕ ಕಾಲದ ಆರ್ಯ ಸಂಸ್ಕೃತಿ ಋಗ್ವೇದ ಕಾಲದ ಆರ್ಯರ ಸಂಸ್ಕೃತಿಗಿಂತ ಎಷ್ಟು ಭಿನ್ನವಾಗಿತ್ತು.
4. ಮಹಿಳೆಯರ ಸ್ಥಾನಮಾನ ಕುಸಿದುದನ್ನು ಮತ್ತು ಉತ್ತರ ವೈದಿಕ ಕಾಲದಲ್ಲಿ ಸಭಾ ಮತ್ತು ಸಮಿತಿಗಳ ಅಧಿಕಾರ ಮುಂತಾದ ಸಂಗತಿಗಳನ್ನು ತಿಳಿದುಕೊಳ್ಳಬಹುದು.

## 39.1 ಪೀಠಿಕೆ

ಋಗ್ವೇದದ ನಂತರದ ಕಾಲವನ್ನು ಉತ್ತರ ವೈದಿಕ ಕಾಲವೆಂದು ಕರೆಯಲಾಗಿದೆ. ಈ ಕಾಲಖಂಡದಲ್ಲಿ ಋಗ್ವೇದದ ನಂತರದ ವೇದಗಳಾದ ಸಾಮವೇದ, ಯಜುರ್ವೇದ ಮತ್ತು ಅಥರ್ವಣವೇದಗಳನ್ನು, ಬ್ರಾಹ್ಮಣಕಗಳು, ಅರಣ್ಯಕಗಳು ಹಾಗೂ ಮಹಾಕಾವ್ಯಗಳಾದ ಮಹಾಭಾರತ ಮತ್ತು ರಾಮಾಯಣಗಳನ್ನು ರಚಿಸಲಾಯಿತು. ಉತ್ತರ ವೈದಿಕ ಕಾಲದಲ್ಲಿ ಆರ್ಯರ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಧಾರ್ಮಿಕ ಜೀವನವು ಅನೇಕ ಬದಲಾವಣೆಗಳನ್ನು ಕಂಡಿತು. ಅದರ ವಿವರಗಳನ್ನು ಈಗ ನೋಡೋಣ.

## 39.2 ಆರ್ಯರ ವಿಸ್ತರಣೆ

ಆರ್ಯರ ಪೂರ್ವಾಭಿಮುಖಿ ವಿಸ್ತರಣೆ ಬಗ್ಗೆ ನಮಗೆ ಪುರಾತತ್ವ ದಾಖಲೆಗಳು ದೊರೆಯುವುದಿಲ್ಲ. ಆದರೆ ಅವರ ವಲಸೆಯ ವಿವರಗಳಿಂದ ಅವರು ಒಂದು ಸ್ಥಳದಲ್ಲಿ ನೆಲೆಗೊಳ್ಳತೊಡಗಿದ್ದುದನ್ನು ತಿಳಿದುಕೊಳ್ಳಬಹುದು. ನೇಗಿಲು ಅವರ ಬದುಕಿನಲ್ಲಿ ತುಂಬಾ ಮಹತ್ವ ಪಡೆದುಕೊಂಡಿತು. ಪಶು ಸಂಗೋಪನೆ ಮೇಲಿನ ಅವಲಂಬನೆ ಕಡಿಮೆಯಾಯಿತು. ಜಾತಿ ಪದ್ಧತಿಯ ರೂಪದಲ್ಲಿ ವರ್ಗಗಳು ರೂಪುಗೊಂಡವು. ಬುಡಕಟ್ಟು ವ್ಯವಸ್ಥೆಯಲ್ಲಿದ್ದುದಕ್ಕಿಂತ ತೀವ್ರತರವಾದ ವರ್ಗವ್ಯವಸ್ಥೆ ಉತ್ತರ ವೈದಿಕ ಕಾಲದಲ್ಲಿ ರೂಪುಗೊಂಡಿತು. ಬ್ರಾಹ್ಮಣರು ಮತ್ತು ಕ್ಷತ್ರಿಯರು ಸಂಘಟಿತರಾಗಿ ರೈತಾಪಿ ಆರ್ಯರನ್ನು, ವೈಶ್ಯರನ್ನು ಮತ್ತು ಆರ್ಯೇತರ ಕೂಲಿಯಾಳುಗಳನ್ನು ಮತ್ತು ಶೂದ್ರರನ್ನು ಶೋಷಿಸತೊಡಗಿದರು. ಆದರೆ ಅದು ಗುಲಾಮಿ ಸಮಾಜವಾಗಿರಲಿಲ್ಲ.

ಲ್ಯಾಟಿನ್ ಭಾಷೆಯಲ್ಲಿ ಟ್ಯಾಸಿಟಸ್ ಬರೆದ ಜರ್ಮೇನಿಯಾ ಎಂಬ ಆಕರದ ಆಧಾರದ ಮೇಲೆ ಡಾ. ಡಿ.ಡಿ. ಕೋಸಂಬಿಯವರು ಆರ್ಯರ ಭಾಷೆ ಮತ್ತು ದೇವತೆಗಳ ಬಗ್ಗೆ ಕುತೂಹಲಕಾರಿ ವಿವರಗಳನ್ನು ನೀಡುತ್ತಾರೆ. ಭೂಮಿಯನ್ನು ಜನರ ಗುಂಪಿಗೆ ವರ್ಗಾವಣೆ ಮಾಡುತ್ತಿದ್ದುದರ ಬಗ್ಗೆ, ಕೆಲವರು ಮಾತ್ರ ಉಳುಮೆ ಮಾಡುತ್ತಿದ್ದ ಬಗ್ಗೆ, ಕಚ್ಚಾ ಸ್ವರೂಪದ ಕೃಷಿ ಬಗ್ಗೆ, ಉಳುಮೆಯ ಜಮೀನಿನ ಬದಲಾವಣೆ ಬಗ್ಗೆ ವಿವರಗಳನ್ನು ಅವರು ಒದಗಿಸುತ್ತಾರೆ. ಉತ್ತರ ಭಾರತ ಹಾಗೂ ವಾಯುವ್ಯ ಭಾಗದ ಸಪ್ತಸಿಂಧೂ ಮತ್ತು ಸರಸ್ವತಿ ನದಿಯ ಪ್ರದೇಶವನ್ನು ಬಿಟ್ಟು ಆರ್ಯರು ಪೂರ್ವದಿಕ್ಕಿಗೆ ವಿಸ್ತರಣೆಯಾಗತೊಡಗಿದರು. ಬಹುಶಃ ಸರಸ್ವತಿ ನದಿಯು ನಿಧಾನವಾಗಿ ಹಿಂಗಿ ಹೋಗುತ್ತಿತ್ತು. ಗಂಗಾ-ಯಮುನಾ ನದಿಗಳ ತಪ್ಪಲು ಪ್ರದೇಶವು ಅವರ ವಾಸಸ್ಥಾನವಾಯಿತು. ಸುಮಾರು ೩೦೦೦ ವರ್ಷಗಳ ಹಿಂದೆ ಮಗಧ, ಆರ್ಯಾವರ್ತಗಳಲ್ಲಿ ಜನರು ಜೀವಿಸುತ್ತಿದ್ದುದರ

ಬಗ್ಗೆ ನಮಗೆ ಪುರಾವೆಗಳು ದೊರೆಯುತ್ತವೆ. ಗಂಗಾ ನದಿಯು ಅತಿಯಾದ ಪಾವಿತ್ರ್ಯವನ್ನು ಪಡೆಯಿತು. ಕುರುಕ್ಷೇತ್ರವು ಆರ್ಯರ ಸಂಸ್ಕೃತಿಯ ಕೇಂದ್ರವಾಯಿತು. ಉತ್ತರ ವೈದಿಕ ಕಾಲದಲ್ಲಿ ಆರ್ಯರು ತಾಮ್ರವನ್ನು ಬಳಸುತ್ತಿದ್ದ ಜನರ ಮೇಲೆ ತಮ್ಮ ಸಂಸ್ಕೃತಿಯನ್ನು ಹೇರಿದರು. ಈ ಪ್ರದೇಶದಲ್ಲಿ ಅವರು ಬಳಸುತ್ತಿದ್ದ ಆಯುಧಗಳ ಅವಶೇಷಗಳು ೧೮ ಸ್ಥಳಗಳಲ್ಲಿ ಕಂಡುಬಂದಿವೆ. ಇವರ ಕಾಲವನ್ನು ಕ್ರಿ.ಪೂ. ೧೭೦೦ ರಿಂದ ಕ್ರಿ.ಪೂ. ೧೦೦೦ ವೆಂದು ನಿಗದಿಪಡಿಸಲಾಗಿದೆ. ಹೀಗೆ ವಿದೇಹ ನಾಡು ಆರ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಯಿತು.

## 39.3 ಸಮಾಜ

ಉತ್ತರ ವೈದಿಕ ಕಾಲದ ಸಾಹಿತ್ಯದಲ್ಲಿ ಅವರ ಸಾಮಾಜಿಕ ಲಕ್ಷಣಗಳ ವಿವರಗಳು ದೊರೆಯುತ್ತವೆ. ಉತ್ತರ ವೈದಿಕ ಕಾಲದಲ್ಲಿನ ಸಾಮಾಜಿಕ ವ್ಯವಸ್ಥೆಯನ್ನು ವಿವಿಧ ಶೀರ್ಷಿಕೆಗಳಲ್ಲಿ ಅಭ್ಯಾಸ ಮಾಡಬಹುದು.

### *39.3.1 ಕೌಟುಂಬಿಕ ಜೀವನ*

ಉತ್ತರ ವೈದಿಕ ಕಾಲದ ಕೌಟುಂಬಿಕ ಜೀವನವು ಪ್ರಧಾನವಾಗಿತ್ತು. ಅದು ಅವಿಭಕ್ತ ಕುಟುಂಬವಾಗಿತ್ತು. ಕುಟುಂಬದ ಸದಸ್ಯರೆಲ್ಲರೂ ಕುಟುಂಬದ ಮುಖ್ಯಸ್ಥನಿಗೆ ಗೌರವ ನೀಡುತ್ತಿದ್ದರು. ಅವನ ಆದೇಶವನ್ನು ಎಲ್ಲ ಸದಸ್ಯರೂ ಪಾಲಿಸುತ್ತಿದ್ದರು. ಕೆಲವು ಕುಟುಂಬಗಳ ಗಾತ್ರ ದೊಡ್ಡದಿರುತ್ತಿತ್ತು. ಮುತ್ತಜ್ಜ, ಮೊಮ್ಮಕ್ಕಳುಗಳಲ್ಲದೆ ಕೆಲವು ಕುಟುಂಬಗಳು ಸಹೋದರರು, ಅವರ ಹೆಂಡಂದಿರು, ಅತ್ತೆ, ಮಾವ, ಸೋದರ ಮಾವ ಮುಂತಾದವರುಗಳನ್ನು ಒಳಗೊಂಡಿದ್ದವು.

### *39.3.2 ಮನರಂಜನೆ*

ನರ್ತನ ಮತ್ತು ಸಂಗೀತ ಇವೆರಡು ವೈದಿಕ ಕಾಲದ ಪ್ರಮುಖ ಮನೋರಂಜನೆಯ ಸಾಧನಗಳಾಗಿದ್ದವು. ಹಾಡುವುದು ಮತ್ತು ನಾಟಕಗಳು ಸಾಮಾನ್ಯವಾಗಿದ್ದವು. ಕೊಳಲು, ತಬಲ ಮುಂತಾದ ವಾದನಗಳನ್ನು ಅಲ್ಲಿ ಬಳಸುತ್ತಿದ್ದರು. ಸಂಗೀತವಲ್ಲದೆ, ರಥಗಳ ಸಾರೋಟು, ಪಗಡೆ ಆಟಗಳು ಜನಪ್ರಿಯ ಮನೋರಂಜನಾ ವಿಧಾನಗಳಾಗಿದ್ದವು.

### *39.3.3 ಆಹಾರ ಮತ್ತು ಪಾನೀಯ*

ಹಾಲು, ಮೊಸರು, ತುಪ್ಪ, ಅಕ್ಕಿ, ಬಾಲಿ, ಬೇಳೆಕಾಳು, ಸಾಸುವೆ ಮುಂತಾದವು ಅವರ ಆಹಾರದ ವಸ್ತುಗಳಾಗಿದ್ದವು. ಋಗ್ವೇದದ ಕಾಲದಲ್ಲಿದ್ದಂತೆ ಉತ್ತರ ವೈದಿಕ ಕಾಲದಲ್ಲೂ ಜನರು ಪ್ರಾಣಿಗಳ ಮಾಂಸವನ್ನು ಸೇವಿಸುತ್ತಿದ್ದರು. ಹಬ್ಬ ಹರಿದಿನಗಳಲ್ಲಿ ದನದ ಮಾಂಸವನ್ನು ತಿನ್ನುತ್ತಿದ್ದರು. ಉತ್ತರ ವೈದಿಕ ಯುಗದಲ್ಲಿ 'ಸುರ' ಎಂಬ ಪಾನೀಯವನ್ನು ಜನರು ಸೇವಿಸುತ್ತಿದ್ದರು.

### *39.3.4 ಉಡುಪು ಮತ್ತು ಅಲಂಕಾರ*

ಉತ್ತರ ವೈದಿಕ ಕಾಲದಲ್ಲಿ ಜನರು ಧರಿಸುತ್ತಿದ್ದ ಉಡುಪಿಗೆ 'ನಿವಿ' ಎಂದು ಕರೆಯುತ್ತಿದ್ದರು. 'ನಿವಿ' ಎಂದರೆ ಒಳ ಉಡುಪು ಎಂಬ ಅರ್ಥ. ವಸವೆಂಬುದು ದೇಹದ ಕೆಳಭಾಗದ ಉಡುಪಾದರೆ ಅಧಿವಸವೆಂಬುದು ದೇಹದ ಮೇಲ್ಭಾಗದ ಉಡುಪು. ರುಮಾಲು ಅಂದು ಹೆಂಗಸರು ಮತ್ತು ಗಂಡಸರು ಧರಿಸುತ್ತಿದ್ದ ಕಲೆ ಗೂದಲನ್ನು ಅಲಂಕರಿಸುವುದು ಅಂದು ಆಚರಣೆಯಲ್ಲಿತ್ತು. ಸುಗಂಧದ್ರವ್ಯವನ್ನು ಅವರು ಬಳಸುತ್ತಿದ್ದರು.

### *39.3.5 ಶಿಕ್ಷಣ*

ಉಪನಯನದ ನಂತರ ಶಿಕ್ಷಣ ಆರಂಭವಾಗುತ್ತಿತ್ತು. ಬ್ರಾಹ್ಮಣರ ಮನೆಯಲ್ಲಿ ಅನೇಕ ವರ್ಷಗಳ ಕಾಲ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲಾಗುತ್ತಿತ್ತು. ಗಣಿತ, ವ್ಯಾಕರಣ ಮತ್ತು

ಛಂದಶ್ಶಾಸ್ತ್ರವಲ್ಲದೆ ವೇದ, ಉಪನಿಷತ್ತುಗಳು, ಜ್ಯೋತಿಷ್ಯ ಶಾಸ್ತ್ರಗಳು ಅಧ್ಯಯನದ ವಿಷಯಗಳಾಗಿದ್ದವು. ವೈದಿಕ ಕಾಲದಲ್ಲಿ ಶಿಕ್ಷಣವು ಮೌಖಿಕವಾಗಿತ್ತು. ಪ್ರತಿಯೊಂದು ಶಬ್ದವನ್ನು ವಿದ್ಯಾರ್ಥಿ ಕಂಠಪಾಠ ಮಾಡಿಕೊಳ್ಳಬೇಕಾಗಿತ್ತು. ಬ್ರಾಹ್ಮಣರು ವಿಶಿಷ್ಟವಾದ ನೆನಪಿಟ್ಟುಕೊಳ್ಳುವ ಪದ್ದತಿಯೊಂದನ್ನು ರೂಪಿಸಿದ್ದರು. ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರಿಗೆ ಮಾತ್ರ ಶಿಕ್ಷಣಕ್ಕೆ ಅವಕಾಶವಿತ್ತು. ಶೂದ್ರರಿಗೆ ಶಿಕ್ಷಣದ ಅವಕಾಶವಿರಲಿಲ್ಲ. ಉತ್ತರ ವೈದಿಕ ಕಾಲದಲ್ಲಿ ಶಿಕ್ಷಣದ ಸ್ವರೂಪ ಬದಲಾಯಿತು. ಶಿಕ್ಷಣದ ಗುರಿ ಬದುಕನ್ನು ಶ್ರೀಮಂತಗೊಳಿಸುವುದು, ಆರಾಮದಾಯಕವನ್ನಾಗಿಸುವುದಾಗಿತ್ತು. ಅಂದು ಶಿಕ್ಷಣವು ಕೇವಲ ಗ್ರಂಥಗಳಿಗೆ ಮಾತ್ರ ಮೀಸಲಾಗಿರಲಿಲ್ಲ. ಲೌಕಿಕ ಬದುಕಿನ ಬಗ್ಗೆಯೂ ಶಿಕ್ಷಣ ನೀಡಲಾಗುತ್ತಿತ್ತು. ಉಪನಯನದ ನಂತರ ವಿದ್ಯಾರ್ಥಿಗಳು ಗುರುವಿನ ಬಳಿಗೆ ಆಶ್ರಮಕ್ಕೆ ಹೋಗಬೇಕಾಗಿತ್ತು. ಆಶ್ರಮದಲ್ಲಿ ಗುರುವಿನ ನೇರಮಾರ್ಗದರ್ಶನದಲ್ಲಿ ಶಿಷ್ಯನು ಕಲಿಯಬೇಕಾಗಿತ್ತು. ಗುರುಗಳು ಸಾಮಾನ್ಯವಾಗಿ ವೇದ, ಉಪನಿಷತ್ತುಗಳು, ವ್ಯಾಕರಣ ಮತ್ತು ಲೌಕಿಕ ಬದುಕಿನ ಬಗ್ಗೆ ಪಾಠ ಹೇಳಿಕೊಡುತ್ತಿದ್ದರು.

### *39.3.6 ಜಾತಿ ಪದ್ಧತಿ*

ಆದಿ ವೈದಿಕ ಯುಗದಲ್ಲಿ ಆರ್ಯರ ಸಾಮಾಜಿಕ ಬದುಕು ಹೆಚ್ಚು ಹೆಚ್ಚು ಸದೃಢಗೊಳ್ಳತೊಡಗಿತು. ಪ್ರಭುತ್ವವೂ ಸದೃಢವಾಗಿ ನೆಲೆಗೊಳ್ಳುತ್ತಿತ್ತು. ಋಗ್ವೇದದ ಕಾಲದಲ್ಲಿ ಕರ್ಮದ ಆಧಾರದ ಮೇಲೆ ಜಾತಿ ನಿರ್ಧಾರವಾಗುತ್ತಿತ್ತು. ಆದರೆ ಉತ್ತರ ವೈದಿಕ ಕಾಲದಲ್ಲಿ ಹುಟ್ಟಿನಿಂದ ಜಾತಿ ನಿರ್ಣಯವಾಗುತ್ತಿತ್ತು. ಧಾರ್ಮಿಕ ವಿಷಯಗಳಲ್ಲಿ ಜ್ಞಾನವಿದ್ದವರು ಬ್ರಾಹ್ಮಣರಾಗಿದ್ದರು. ಯುದ್ಧ, ರಾಜಕಾರಣಗಳಲ್ಲಿ ನಿರತರಾಗಿದ್ದವರು ಕ್ಷತ್ರಿಯರೆನಿಸಿಕೊಂಡರು. ವ್ಯಾಪಾರ ಮತ್ತು ಕೃಷಿಯಲ್ಲಿ ನಿರತರಾಗಿದ್ದವರು ವೈಶ್ಯರು. ಸಮಾಜದ ಅತ್ಯಂತ ಕೆಳಸ್ತರದಲ್ಲಿದ್ದವರು ಶೂದ್ರರು. ಅವರ ಕರ್ತವ್ಯವೆಂದರೆ ಮೇಲಿನ ಮೂರು ವರ್ಣಗಳಿಗೆ ಸೇರಿದ ಜನರ ಸೇವೆ ಮೂಡುವುದಾಗಿತ್ತು. ಅಂದು ಬ್ರಾಹ್ಮಣರು ಮತ್ತು ಕ್ಷತ್ರಿಯರು ಸಮಾಜದಲ್ಲಿ ವೈಶ್ಯರು ಮತ್ತು ಶೂದ್ರರಿಗಿಂತ ಉನ್ನತ ಸ್ಥಾನ ಪಡೆದಿದ್ದರು. ಪಣಿಕ್ಕರ್ ಪ್ರಕಾರ ಉತ್ತರ ವೈದಿಕ ಯುಗದಲ್ಲಿ ಜಾತಿ ಬದಲಾವಣೆ ಸಾಧ್ಯವಿತ್ತು ಮತ್ತು ಅಂತರ್ ಜಾತಿ ವಿವಾಹಗಳಿಗೆ ಅವಕಾಶವಿತ್ತು. ಡಾ. ಮುಖರ್ಜಿ ಪ್ರಕಾರ ಪಣಿಕ್ಕರ್ ರವರ ಅಭಿಪ್ರಾಯ ಸರಿಯಿದ್ದರೂ ವೈದಿಕ ಸಾಹಿತ್ಯದಲ್ಲಿ ವೈಶ್ಯರು ಕ್ಷತ್ರಿಯರಾಗಿದ್ದುದರ ಬಗ್ಗೆ ಅಥವಾ ಬ್ರಾಹ್ಮಣರಾದುದರ ಬಗ್ಗೆ ನಮಗೆ ಪುರಾವೆ ದೊರೆಯುವುದಿಲ್ಲ ಎನ್ನುತ್ತಾರೆ. ಉನ್ನತ ಸ್ಥಾನದಲ್ಲಿದ್ದ ಬ್ರಾಹ್ಮಣರು ಮತ್ತು ಕ್ಷತ್ರಿಯರ ನಡುವೆ ಮಾತ್ರ ಸೌಹಾರ್ದಯುತ ಸಂಬಂಧ ಸಾಧ್ಯವಿತ್ತು. ಒಂದು ಸಂಗತಿಯೆಂದರೆ ಉತ್ತರ ವೈದಿಕ ಕಾಲದಲ್ಲಿ ಜಾತಿ ವ್ಯವಸ್ಥೆಯು ಮುಂದೆ ಪಡೆದುಕೊಂಡಂತೆ ಕಟ್ಟುನಿಟ್ಟಿನ ರೂಪ ಪಡೆದುಕೊಂಡಿರಲಿಲ್ಲ.

### *39.3.7 ಆಶ್ರಮ ವ್ಯವಸ್ಥೆ*

ಜಾತಿ ಪದ್ಧತಿಯ ಜೊತೆಗೆ ಉತ್ತರ ವೈದಿಕ ಕಾಲದಲ್ಲಿ ಆಶ್ರಮ ವ್ಯವಸ್ಥೆಯು ಅಸ್ತಿತ್ವಕ್ಕೆ ಬಂದಿತು. ವ್ಯಕ್ತಿಯ ವೈಯುಕ್ತಿಕ ಬೆಳವಣಿಗೆ ಹಾಗೂ ಚಾರಿತ್ರ್ಯಕ್ಕೆ ಆಶ್ರಮ ವ್ಯವಸ್ಥೆಯು ಸಂಬಂಧಿಸಿದೆ. ವಿದ್ವಾಂಸರಾಗಿದ್ದ ಆರ್ಯರು ಬದುಕನ್ನು ನಾಲ್ಕು ಆಶ್ರಮಗಳಾಗಿ ವಿಂಗಡಿಸಿದ್ದರು. ಅವುಗಳು ಹೀಗಿವೆ.

1. ಬ್ರಹ್ಮಚರ್ಯಾಶ್ರಮ: ತನ್ನ ೨೫ನೆಯ ವಯಸ್ಸಿನವರೆಗೆ ವಿದ್ಯಾರ್ಥಿಯು ಆಶ್ರಮದಲ್ಲಿದ್ದು ಗುರುವಿನ ಬಳಿ ಜ್ಞಾನವನ್ನು ಸಂಪಾದಿಸಬೇಕು. ಇದು ಬ್ರಹ್ಮಚರ್ಯಾಶ್ರಮ.

2. ಗೃಹಸ್ಥಾಶ್ರಮ: ಬ್ರಹ್ಮಚರ್ಯಾಶ್ರಮದ ನಂತರ ಮನುಷ್ಯನು ಗೃಹಸ್ಥಾಶ್ರಮಕ್ಕೆ ಪ್ರವೇಶಿಸಬೇಕು. ಇಲ್ಲಿ ಅವನು ಅನೇಕ ಧಾರ್ಮಿಕ ಹಾಗೂ ಸಾಮಾಜಿಕ ಕರ್ತವ್ಯಗಳನ್ನು ಪಾಲಿಸಬೇಕು. ಈ ಆಶ್ರಮದಲ್ಲಿ ಮನುಷ್ಯನು ೨೫ ವರ್ಷಗಳು ಬದುಕಬೇಕು.

3. ವಾನಪ್ರಸ್ಥಾಶ್ರಮ: ಈ ಆಶ್ರಮದಲ್ಲಿ ಮನುಷ್ಯನು ಎಲ್ಲ ಕೌಟುಂಬಿಕ ಚಟುವಟಿಕೆಗಳಿಂದ ದೂರವಾಗಬೇಕು. ತ್ಯಾಗ ಮತ್ತು ಧ್ಯಾನದಲ್ಲಿ ಸಮಯ ಕಳೆಯಬೇಕು.

4. ಸನ್ಯಾಸಾಶ್ರಮ: ಈ ಆಶ್ರಮದಲ್ಲಿ ಮಾನವನು ಎಲ್ಲ ಬಗೆಯ ಲೌಕಿಕ ಬಂಧನಗಳಿಂದ ಮುಕ್ತನಾಗಬೇಕು. ಬ್ರಹ್ಮನನ್ನು ಕುರಿತು ಆರಾಧನೆ ಮಾಡಬೇಕು. ಮುಕ್ತಿ ಪ್ರಾಪ್ತಿಗಾಗಿ ಪರಿಶ್ರಮ ಪಡಬೇಕು.

### *39.3.8 ಸಾಹಿತ್ಯ*

ವೇದಗಳು, ಅರಣ್ಯಕಗಳು, ಉಪನಿಷತ್ತುಗಳು, ಪುರಾಣಗಳು, ಸೂತ್ರಗಳು, ವೇದಾಂಗಗಳು ಮತ್ತು ಮಹಾಕಾವ್ಯಗಳ ರಚನೆಯು ಉತ್ತರ ವೈದಿಕ ಕಾಲದ ಸಾಹಿತ್ಯದ ಬೆಳವಣಿಗೆಯ ಸೂಚಿಗಳಾಗಿವೆ. ವೈದಿಕ ಕಾಲದ ನಂತರ ಸಂಸ್ಕೃತ ಭಾಷೆಯು ಅನೇಕ ಪರಿಷ್ಕಾರಗಳನ್ನು ಮತ್ತು ವಿಕಾಸವನ್ನು ಹೊಂದಿತು. ಅಪಾರ ಸಾಹಿತ್ಯವು ಸಂಸ್ಕೃತ ಭಾಷೆಯಲ್ಲಿ ರಚಿತಗೊಂಡಿತು. ಸಂಸ್ಕೃತ ಭಾಷೆಯು ಕಂಪ್ಯೂಟರ್‌ಗೆ ಸರಿಹೊಂದುವ ಭಾಷೆಯಾಗಿದೆ. ಅದರಲ್ಲಿ ಅಪಾರ ಶಬ್ದಭಂಡಾರವಿದೆ. ಈ ಕಾಲದಲ್ಲಿ ಸಂಸ್ಕೃತದಲ್ಲಿ ರಾಮಾಯಣ ಮತ್ತು ಮಹಾಭಾರತ ಎಂಬ ಎರಡು ಮಹಾಕಾವ್ಯಗಳು ರಚಿತಗೊಂಡವು. ರಾಮಾಯಣದ ಕರ್ತೃ ವಾಲ್ಮೀಕಿಯಾದರೆ ಮಹಾಭಾರತದ ಕರ್ತೃ ಮಹರ್ಷಿವ್ಯಾಸ. ಸಂಸ್ಕೃತ ಭಾಷೆಯಲ್ಲಿ ಪಾಣಿನಿಯು ರಚಿಸಿದ 'ಅಷ್ಟುಧ್ಯಾಯಿ' ಕೃತಿಯು ವ್ಯಾಕಾರಣದ ಉನ್ನತ ಕೃತಿಯಾಗಿದೆ. ಯೋಗವು ವೈದಿಕ ಸಂಸ್ಕೃತಿಯ ಮಹತ್ವದ ಕಾಣಿಕೆಯಾಗಿದೆ. ಯೋಗವನ್ನು ಕುರಿತ ನಿಯಮಗಳ ಚರ್ಚೆಯು ಪತಂಜಲಿಯ ಯೋಗಸೂತ್ರದಲ್ಲಿ ಅಡಕವಾಗಿವೆ. ಯಕ್ಷನ್ ರಚಿಸಿದ 'ನಿರುಕ್ತಿ' ಕೃತಿಯು ಭಾಷಾಶಾಸ್ತ್ರವನ್ನು ಕುರಿತಂತೆ ಹಾಗೂ ನುಡಿಯ ವ್ಯುತ್ಪತ್ತಿ ಕುರಿತಂತೆ ಚರ್ಚೆ ಮಾಡಿರುವ ಕೃತಿಯಾಗಿದೆ.

### *39.3.9 ವಿವಾಹ ಮತ್ತು ಮಹಿಳೆಯರ ಸ್ಥಾನಮಾನ*

ಉತ್ತರ ವೈದಿಕ ಕಾಲದಲ್ಲಿ ವಿವಾಹವು ಒಂದು ಪವಿತ್ರ ಆಚರಣೆಯ ರೂಪ ತಳೆಯಿತು. ವಿವಾಹದ ಎಂಟು ವಿಧಗಳು ಇನ್ನೂ ಬೆಳವಣಿಗೆಯಾಗಿರಲಿಲ್ಲ. ಋತುಮತಿಯಾದ ನಂತರವೇ ಹೆಣ್ಣಿಗೆ ವಿವಾಹ ಮಾಡಲಾಗುತ್ತಿತ್ತು. ಬಾಲ್ಯ ವಿವಾಹವು ಅಂದು ಆಚರಣೆಯಲ್ಲಿರಲಿಲ್ಲ. ರಾಜ ಮನೆತನದಲ್ಲಿ ಮಾತ್ರ ಬಹುಪತ್ನಿತ್ವವು ಆಚರಣೆಯಲ್ಲಿತ್ತು. ವಧುವಿನ ತಂದೆಯು ವರದಕ್ಷಿಣೆ ನೀಡುತ್ತಿದ್ದನು. ಉತ್ತರ ವೈದಿಕ ಕಾಲದಲ್ಲಿ ವಿಧವಾ ವಿವಾಹದ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಅಂತರ್ ಜಾತಿ ವಿವಾಹಗಳು ಕ್ವಚಿತ್ತವಾಗಿ ನಡೆಯುತ್ತಿದ್ದರೂ ಸಾಮಾನ್ಯವಾಗಿ ಜಾತಿಗಳ ಒಳಗೆ ವಿವಾಹಗಳು ನಡೆಯುತ್ತಿದ್ದವು. ಸತಿಪದ್ಧತಿಯು ರೂಢಿಯಲ್ಲಿರಲಿಲ್ಲ.

ಮಹಿಳೆಯರ ಸ್ಥಿತಿಗತಿಗಳಲ್ಲಿ ತೀವ್ರ ಬದಲಾವಣೆಗಳಾದವು. ಮಹಿಳೆಯರ ಸ್ಥಾನಮಾನವು ಶಿಥಿಲಗೊಂಡಿತು. ಅವರ ಅಪಮೌಲ್ಯೀಕರಣ ಎಲ್ಲಿಯವರೆಗೆ ಹೋಯಿತೆಂದರೆ ಅವರನ್ನು ಜೂಜು ಮತ್ತು ಮದ್ಯದ ನಂತರದ ಮೂರನೆಯ ದುಷ್ಟ ಹವ್ಯಾಸವಾಗಿ ಪರಿಗಣಿಸಲಾಗಿತ್ತು. ಸಾರ್ವಜನಿಕ ಸಭೆಗಳಲ್ಲಿ ಮತ್ತು ಸಮಾರಂಭಗಳಲ್ಲಿ ಮಹಿಳೆಯರು ಭಾಗವಹಿಸುವುದನ್ನು ನಿಷೇಧಿಸಲಾಯಿತು. ಋಗ್ವೇದದ ಕಾಲದಲ್ಲಿದ್ದಂತೆ ಉತ್ತರ ವೈದಿಕ ಕಾಲದಲ್ಲಿ ಧಾರ್ಮಿಕ ವಿಧಿ-ಆಚರಣೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯು ಕಡ್ಡಾಯವಿರಲಿಲ್ಲ. ಹೆಣ್ಣು ಮಗುವಿನ ಜನನವನ್ನು ಕೀಳಾಗಿ ಕಾಣಲಾಗುತ್ತಿತ್ತು. ಮಹಿಳೆಯರ ಶಿಕ್ಷಣಕ್ಕೆ ಅವಕಾಶವಿತ್ತು. ಉಪನಿಷತ್ತುಗಳಲ್ಲಿ ಅನೇಕ ಸುಶಿಕ್ಷಿತ ಮಹಿಳೆಯರ ಉಲ್ಲೇಖಗಳು ದೊರೆಯುತ್ತವೆ. ಈ ಕಾಲದ ಮಹಾ ಮಹಿಳಾ ವಿದ್ವಾಂಸರೆಂದರೆ ಗಾರ್ಗಿ ಮತ್ತು ಮೈತ್ರೇಯಿ.

## 39.4 ಆರ್ಥಿಕತೆ

ಆರ್ಥಿಕತೆಗೆ ಸಂಬಂಧಿಸಿದಂತೆ ಉತ್ತರ ವೈದಿಕ ಕಾಲದಲ್ಲಿ ಅನೇಕ ಬದಲಾವಣೆಗಳುಂಟಾದವು.

### *39.4.1 ಕೃಷಿ*

ಉತ್ತರ ವೈದಿಕ ಕಾಲದ ಜನರ ಪ್ರಧಾನ ಕಸುಬು ಕೃಷಿಯಾಗಿತ್ತು. ಋಗ್ವೇದ ಕಾಲಕ್ಕೆ ಹೋಲಿಸಿದರೆ ಉತ್ತರ ವೈದಿಕ ಕಾಲದಲ್ಲಿ ಕೃಷಿಗೆ ಸಂಬಂಧಿಸಿದಂತೆ ತೀವ್ರ ಬದಲಾವಣೆಗಳಾದವು. ವಿವಿಧ ಬಗೆಯ ಬೇಸಾಯ ಪದ್ಧತಿ ರೂಢಿಗೆ ಬಂದಿತು. ವಿವಿಧ ನಮೂನೆಯ ಬೀಜ ಮತ್ತು ಬೆಳೆಗಳು ಅಭಿವೃದ್ಧಿಗೊಂಡವು. ನೇಗಿಲನ್ನು ಉಳುಮೆಗೆ ಬಳಸಲಾಗುತ್ತಿತ್ತು. ಉಳುಮೆಗೆ ಬಳಸುತ್ತಿದ್ದ ನೇಗಿಲು ಎಷ್ಟು ದೊಡ್ಡದಿರುತ್ತಿದ್ದೆಂದರೆ ಅದನ್ನು ೨೦ ಎತ್ತುಗಳನ್ನು ಕಟ್ಟಿ ಎಳೆಯಬೇಕಾಗಿತ್ತು. ಗೊಬ್ಬರವನ್ನು ಅಲ್ಲಿ ಬಳಸುತ್ತಿದ್ದರು. ಗೋಧಿ, ಭತ್ತ ಮತ್ತು ಬಾರ್ಲಿ ಅವರ ಪ್ರಧಾನ ಬೆಳೆಗಳಾಗಿದ್ದವು. ಡಾ. ರಾಜ್ ಬಲಿಪಾಂಡೆಯವರು ಅಂದಿನ ಕೃಷಿ ವ್ಯವಸ್ಥೆ ಬಗ್ಗೆ ಹೀಗೆ ಬರೆದಿದ್ದಾರೆ. ಆರ್ಯರು ಸಾಮಾನ್ಯವಾಗಿ ಗಂಗಾ ಮತ್ತು ಸಿಂಧೂ ನದಿಯ ದಂಡೆಗಳಲ್ಲಿ ನೆಲೆಗೊಳ್ಳುತ್ತಿದ್ದರು. ಅಲ್ಲಿ ಫಲವತ್ತಾದ ಭೂಮಿಯಿತ್ತು. ಇದರಿಂದ ಕೃಷಿ ತೀವ್ರ ಬೆಳವಣಿಗೆ ಕಂಡಿತು. ಆರ್ಯರು ಅಪಾರ ಸಂಪತ್ತನ್ನು ಸಂಪಾದಿಸಿದರು.

### *39.4.2 ಪಶುಸಂಗೋಪನೆ*

ಉತ್ತರ ವೈದಿಕ ಕಾಲದ ಆರ್ಥಿಕತೆಯ ಮೂಲಾಧಾರ ಪಶುಸಂಗೋಪನೆಯಾಗಿತ್ತು. ಯಾರು ಅತಿ ಹೆಚ್ಚು ಹಸುಗಳನ್ನು ಹೊಂದಿರುತ್ತಾರೋ ಅವರು ಶ್ರೀಮಂತರೆನಿಸಿಕೊಳ್ಳುತ್ತಿದ್ದರು.

### *39.4.3 ಗುಡಿಕೈಗಾರಿಕೆ ಮತ್ತು ಕಸುಬುಗಳು*

ಉತ್ತರ ವೈದಿಕ ಕಾಲದಲ್ಲಿ ಕೃಷಿ ಮತ್ತು ಪಶುಸಂಗೋಪನೆಯಲ್ಲದೆ ಇತರೆ ಕಸುಬುಗಳನ್ನು ಅಭಿವೃದ್ಧಿ ಪಡಿಸಲಾಯಿತು. ಅಂದಿನ ಸಮಕಾಲೀನ ಸಾಹಿತ್ಯದಲ್ಲಿ ಹೆಣಿಕೆ ಮಾಡುವವರು, ಚಿನ್ನ-ಬೆಳ್ಳಿ ಕೆಲಸಗಾರರು, ಕಬ್ಬಿಣ ಕೆಲಸ ಮಾಡುವವರು, ರಥಗಳನ್ನು ಮಾಡುವ ರಥಕಾರರು, ಬಡಗಿಗಳು, ಬೆಸ್ತರು ಮತ್ತು ವರ್ತಕರ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಇವರಲ್ಲದೆ ಅಂದು ವೈದ್ಯರು, ಜ್ಯೋತಿಷಿಗಳು, ಕ್ಷೌರಿಕರು ಮುಂತಾದವರ ಬಗ್ಗೆಯೂ ಅಲ್ಲಿ ವಿವರಗಳು ದೊರೆಯುತ್ತವೆ. ಆದರೆ ಈ ಕಸುಬುಗಳನ್ನು ಕೀಳಾಗಿ ಕಾಣಲಾಗುತ್ತಿತ್ತು. ಉತ್ತರ ವೈದಿಕ ಕಾಲದಲ್ಲಿ ಜನರಿಗೆ ಲೋಹದ ಬಳಕೆ ಗೊತ್ತಿತ್ತು. ಇದರಿಂದಾಗಿ ಅವರ ಜೀವನ ಸಮೃದ್ಧವಾಗಿತ್ತು. ಈ ಕಾಲದಲ್ಲಿ ಚಿನ್ನವಲ್ಲದೆ ಆರ್ಯರಿಗೆ ಕಬ್ಬಿಣ, ಬೆಳ್ಳಿ, ತಾಮ್ರ ಮತ್ತು ಕಂಚಿನ ಬಳಕೆಯೂ ಗೊತ್ತಿತ್ತು. ಇವೆಲ್ಲವನ್ನು ಅವರು ಬಳಸುತ್ತಿದ್ದರು. ಉಪಕರಣಗಳು, ಆಯುಧಗಳು ಮತ್ತು ಆಭರಣಗಳನ್ನು ಮಾಡಲು ಲೋಹಗಳನ್ನು ಬಳಸುತ್ತಿದ್ದರು.

### *39.4.4 ವ್ಯಾಪಾರ ಮತ್ತು ವಾಣಿಜ್ಯ*

ಒಳನಾಡ ವ್ಯಾಪಾರ ಮತ್ತು ಹೊರನಾಡ ವ್ಯಾಪಾರ ಅಂದು ಬೆಳವಣಿಗೆ ಕಂಡವು. ವ್ಯಾಪಾರಗಾರರ ಸಂಘಗಳ ಬಗ್ಗೆ ಅಲ್ಲಿ ಉಲ್ಲೇಖಗಳು ದೊರೆಯುತ್ತಿವೆ. ಸಾಮಾನ್ಯವಾಗಿ ವ್ಯಾಪಾರವನ್ನು ವಿನಿಮಯ ಮಾಧ್ಯಮದ ಮೂಲಕ ನಡೆಸುತ್ತಿದ್ದರು. ಷಟ್‌ಮನ್ ಮತ್ತು ಕೃಷ್ಣಾ ಎಂಬ ನಾಣ್ಯಗಳು ಅಂದು ಚಲಾವಣೆಯಲ್ಲಿದ್ದವು. ಹಡಗು ವ್ಯಾಪಾರವೂ ಅಂದು ರೂಢಿಯಲ್ಲಿತ್ತು. ಬೆಬಿಲೋನಿಯನ್ನರ ಜೊತೆ ಆರ್ಯರು ಹಡಗು ವ್ಯಾಪಾರ ನಡೆಸಿದ್ದರ ಬಗ್ಗೆ ಪುರಾವೆಗಳು ದೊರೆಯುತ್ತವೆ. ಸರಕುಗಳನ್ನು ಬಂಡಿ ಮತ್ತು ದೋಣಿಗಳಲ್ಲಿ ಸಾಗಿಸುತ್ತಿದ್ದರು. ಒಳನಾಡ ವ್ಯಾಪಾರದ ಅಭಿವೃದ್ಧಿಯು ಸಾರಿಗೆ ಅಭಿವೃದ್ಧಿಗೆ ದಾರಿಮಾಡಿಕೊಟ್ಟಿತು.

*ತೆರಿಗೆಗಳು*

ಪ್ರಭುತ್ವಗಳು ತಮ್ಮ ಸಾಮ್ರಾಜ್ಯದಲ್ಲಿ ತೆರಿಗೆಗಳನ್ನು ಸಂಗ್ರಹಿಸುತ್ತಿದ್ದವು. ತೆರಿಗೆಗಳು ಅವುಗಳ ಪ್ರಧಾನ ಆದಾಯದ ಮೂಲವಾಗಿದ್ದವು. ತೆರಿಗೆ ಪದ್ಧತಿ ಅಂದು ಪ್ರಾರಂಭಗೊಂಡಿತು. ಜನರು ನೆಲೆ ನಿಂತಿದ್ದರಿಂದ ಹಾಗೂ ಕೃಷಿಯ ಸದೃಢ ಬೆಳವಣಿಗೆಯಿಂದಾಗಿ ಅಂದು ಅಧಿಕ ಉತ್ಪಾದನೆ ಸಾಧ್ಯವಾಯಿತು. ಈ ಅಧಿಕ ಉತ್ಪನ್ನವನ್ನು ರಾಜನು ತೆರಿಗೆ ರೂಪದಲ್ಲಿ ಸಂಗ್ರಹಿಸಿಕೊಳ್ಳುತ್ತಿದ್ದ. ಶತಪಥ ಬ್ರಾಹ್ಮಣರಲ್ಲಿ ರಾಜನು ಕಲ್ಯಾಣ ರಾಜ್ಯ ಸ್ಥಾಪಿಸಲು ಪ್ರಯತ್ನಿಸುತ್ತಿದ್ದುದರ ಬಗ್ಗೆ ವಿವರಗಳು ದೊರೆಯುತ್ತವೆ. ತೆರಿಗೆ ಮೂಲಕ ಸಂಗ್ರಹಿಸಿದ ಕಂದಾಯವನ್ನು ಜನರ ಕಲ್ಯಾಣಕ್ಕಾಗಿ ವ್ಯಯಿಸಲಾಗುತ್ತಿತ್ತು. ಉತ್ತರ ವೈದಿಕ ಕಾಲದ ಪಠ್ಯಗಳಲ್ಲಿ ರಾಜನಿಗಾಗಿ ಅಧಿಕ ಉತ್ಪನ್ನವನ್ನು ಪ್ರಜೆಗಳಿಂದ ಸಂಗ್ರಹಿಸುತ್ತಿದ್ದ 'ಭಾಗದುಗ' ಎಂಬ ಅಧಿಕಾರಿಯ ಬಗ್ಗೆ ಉಲ್ಲೇಖ ಸಿಗುತ್ತದೆ.

ತೆರಿಗೆ ರೂಪದಲ್ಲಿ ನಿಯಮಿತ ಆದಾಯ ರಾಜನಿಗೆ ಬರುತ್ತಿದ್ದುದರಿಂದ ಆತನು ಅನೇಕ ಅಧಿಕಾರಿಗಳನ್ನು ನೇಮಕ ಮಾಡಬಹುದಿತ್ತು. ನಮಗೆ ಧಾರ್ಮಿಕ ಮತ್ತು ಆಡಳಿತ ವ್ಯವಹಾರ ನೋಡಿಕೊಳ್ಳಲು ಅಗತ್ಯವಾದ ಹಣವನ್ನು ರತ್ನಗಳನ್ನು ಹೊಂದಿದವರ ಮೇಲಿನ ತೆರಿಗೆ ಮೂಲಕ ಸಂಗ್ರಹಿಸಲಾಗುತ್ತಿತ್ತು. ವರಮಾನವನ್ನು ಒದಗಿಸುತ್ತಿದ್ದ ವೃತ್ತಿಗಳಾದ ಲೋಹದ ಕೆಲಸಗಾರರು, ರಥಗಾರರು, ಹಸುಗಳು ಮಾರಾಟಗಾರರು ಕೃಷಿ ಮುಂತಾದವುಗಳ ಮೇಲೆ ತೆರಿಗೆ ವಿಧಿಸಲಾಗುತ್ತಿತ್ತು.

## 39.5 ಧರ್ಮ

### 39.5.1 ದೇವರ ಸ್ಥಾನಮಾನ

ದೇವ-ದೇವತೆಗಳ ಸ್ಥಾನಮಾನಗಳು ಉತ್ತರ ವೈದಿಕ ಕಾಲದಲ್ಲಿ ಬದಲಾವಣೆಗಳಾದವು. ಹಿಂದೆ ಇದ್ದ ಇಂದ್ರ, ವರುಣ, ಸೂರ್ಯ ಮುಂತಾದ ದೇವರ ಸ್ಥಳದಲ್ಲಿ ಹೊಸ ದೇವತೆಗಳು ಅಸ್ತಿತ್ವಕ್ಕೆ ಬಂದವು. ಹೊಸದಾಗಿ ಅಸ್ತಿತ್ವ ಪಡೆದುಕೊಂಡ ದೇವತೆಗಳೆಂದರೆ ವಿಷ್ಣು, ಶಿವ, ರುದ್ರ ಮತ್ತು ಪ್ರಜಾಪತಿ. ದೇವತಾ ಪೂಜೆಯು ಹೆಚ್ಚು ಜನಪ್ರಿಯತೆ ಗಳಿಸಿಕೊಂಡಿತು. ಎಲ್ಲ ಯಜ್ಞಗಳ ದೇವತೆಯಾಗಿ ಪ್ರಜಾಪತಿಗೆ ಮನ್ನಣೆ ನೀಡಲಾಯಿತು. ವಿಷ್ಣುವನ್ನು ಯಜ್ಞ ಪುರುಷನೆಂದು ಗುರುತಿಸಲಾಯಿತು. ಶಿವನನ್ನು ಅಂದು ಶಿವ, ಪ್ರಜಾಪತಿ, ಮಹಾದೇವನೆಂಬ ಹೆಸರುಗಳಿಂದ ಪೂಜಿಸಲಾಗುತ್ತಿತ್ತು.

### 39.5.2 ಯಜ್ಞ-ಯಾಗಗಳು

ಋಗ್ವೇದ ಕಾಲದಲ್ಲಿ ಜನರ ಬದುಕು ಸರಳವಾಗಿತ್ತು. ಜನರ ಧಾರ್ಮಿಕ ಬದುಕು ತೀವ್ರ ಬದಲಾವಣೆಗೆ ಒಳಗಾಯಿತು. ಮಂತ್ರದ ಮೂಲಕ ದೇವ-ದೇವತೆಗಳನ್ನು ತಮ್ಮ ವಶಪಡಿಸಿಕೊಳ್ಳಲು ಜನರು ಪ್ರಯತ್ನಿಸುತ್ತಿದ್ದರು. ಇದರಿಂದಾಗಿ ಮಂತ್ರಗಳ ಮಹತ್ವ ಅತಿಯಾಯಿತು. ಯಜ್ಞ-ಯಾಗಗಳ ಮಹತ್ವವು ಹೆಚ್ಚಾಯಿತು. ಪುರೋಹಿತರ ಸಂಖ್ಯೆ ಅಧಿಕಗೊಂಡಿತು. ಅಶ್ವಮೇಧ, ರಾಜಸೂಯಾಗ, ವಾಜಪೇಯಿ ಮುಂತಾದ ಮುಂತಾದ ಯಜ್ಞಗಳು ಜನಪ್ರಿಯವಾಗಿದ್ದವು.

### 39.5.3 ತತ್ವಜ್ಞಾನ

ಸಂಕೀರ್ಣವಾದ ಕರ್ಮಕಾಂಡ ಮತ್ತು ಅತಿಯಾದ ಯಜ್ಞಗಳ ಆಚರಣೆಗಳು ವಿವಿಧ ರೀತಿಯ ಪರಿಣಾಮಗಳನ್ನು ಉಂಟು ಮಾಡಿದವು. ಬುದ್ದಿಜೀವಿ ವರ್ಗವು ಧಾರ್ಮಿಕ ವಿಷಯಗಳಲ್ಲಿಆಸಕ್ತಿ ಕಳೆದುಕೊಂಡಿತು. ಕ್ಷತ್ರಿಯ ಮತ್ತು ಬ್ರಾಹ್ಮಣ ವರ್ಗಗಳಿಗೆ ಸೇರಿದ ಕೆಲವು ವ್ಯಕ್ತಿಗಳು ದೇವರನ್ನು ಹುಡುಕಿಕೊಂಡು ಹೊರಟರು. ಅನೇಕ ಋಷಿಗಳು ಜ್ಞಾನದ ಸಂಪಾದನೆಯಲ್ಲಿ ತೊಡಗಿದರು. ಉಪನಿಷತ್ತುಗಳಲ್ಲಿ ತತ್ವ ಜಿಜ್ಞಾಸೆ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. "ಈ ಜಗತ್ತೆ ಬ್ರಹ್ಮ,

ಆತ್ಮವೇ ಬ್ರಹ್ಮ, ಆತ್ಮವೇ ಬ್ರಹ್ಮ" ಎಂಬ ಸತ್ಯ ಅನೇಕರಿಗೆ ತಿಳಿದಿತ್ತು. ದೇವರನ್ನು ಇಲ್ಲಿ 'ಪರಬ್ರಹ್ಮ'ನೆಂದು ಸಂಬೋಧಿಸಲಾಗುತ್ತಿತ್ತು. ಈ ಕಾಲದಲ್ಲಿನ ಒಂದು ವಿಶಿಷ್ಟ ಬೆಳವಣಿಗೆಯೆಂದರೆ ಮುಕ್ತಿ, ಮಾಯಾ, ಕರ್ಮ, ಆತ್ಮ ಸಾಕ್ಷಾತ್ಕಾರಗಳನ್ನು ಕುರಿತ ಪರಿಭಾಷೆ ಬದಲಾಯಿತು. ಜಗತ್ತು ಮಿಥ್ಯೆಯೆಂಬ ಭಾವನೆ ಬೆಳೆಯಿತು. ಅಂತಿಮ ಸತ್ಯವೆಂದರೆ ಬ್ರಹ್ಮ, ಬ್ರಹ್ಮನೇ ದೇವರು. ಪರಬ್ರಹ್ಮನನ್ನು ಸೇರುವುದೆಂದರೆ ಮುಕ್ತಿಯನ್ನು ಪಡೆಯುವುದೆಂದೇ ಅರ್ಥ. ಅಲ್ಲಿ ಚರ್ಚೆಗೆ ಜಿಜ್ಞಾಸೆಗೆ ಮುಕ್ತ ಅವಕಾಶವಿತ್ತು. ಜ್ಞಾನ ಸಂಪಾದನೆ ಬಗ್ಗೆ ಎಷ್ಟೊಂದು ಒತ್ತಡವಿತ್ತು ಎಂಬುದು ನಚಿಕೇತ ಮತ್ತು ಸತ್ಯಕಾಮರ ಕತೆಗಳಿಂದ ತಿಳಿದುಬರುತ್ತದೆ. ವೈದಿಕ ಜ್ಞಾನದ ಸಾರಸಂಗ್ರಹವೇ ಉಪನಿಷತ್ತುಗಳು. ತತ್ವಜ್ಞಾನವನ್ನು ಕುರಿತಂತೆ ವಿಶ್ವಕ್ಕೆ ಭಾರತ ನೀಡಿದ ಮಹಾನ್ ಕೊಡುಗೆಯೆಂದರೆ ಉಪನಿಷತ್ತುಗಳು.

ವೈದಿಕ ಜ್ಞಾನದ ಸಾರಸಂಗ್ರಹವನ್ನು ವೇದಾಂತವೆಂದು ಕರೆಯಬಹುದು. ವೇದಾಂತದಲ್ಲಿ ಯಜ್ಞ-ಯಾಗಗಳಿಗೆ ಯಾವುದೇ ಮಹತ್ವದ ಸ್ಥಾನವಿಲ್ಲ. ವೇದಾಂತದಲ್ಲಿ ಅಡಗಿರುವ ತಾತ್ವಿಕ ಜಿಜ್ಞಾಸೆಯನ್ನು ಮತ್ತು ಪರಬ್ರಹ್ಮನನ್ನು ಕುರಿತ ಜ್ಞಾನವನ್ನು ಉಪನಿಷತ್ತುಗಳು ಎತ್ತಿ ಹಿಡಿದಿವೆ. ಮಂಡಕೋಪನಿಷತ್ತಿನಲ್ಲಿ 'ಸತ್ಯಮೇವ ಜಯತೆ' ಎಂಬ ನುಡಿ ದೊರೆಯುತ್ತದೆ. ಇದು ನಮ್ಮ ದೇಶದ ರಾಷ್ಟ್ರೀಯ ಲಾಂಛನವಾಗಿದೆ.

### 39.5.4 *ಸಂಸ್ಕಾರಗಳು*

ಮನುಷ್ಯನ ಚೇತನವು ಅನೇಕ ಸಂಸ್ಕಾರಗಳಿಂದ ಕೂಡಿದೆ. ಹುಟ್ಟಿನಿಂದ ಸಾಯುವವರೆಗೆ ಮನುಷ್ಯನು ಅನೇಕ ಸಂಸ್ಕಾರಗಳನ್ನು ಪಾಲಿಸಬೇಕಾಗುತ್ತದೆ. ಸುಮಾರು ನಲವತ್ತು ಸಂಸ್ಕಾರಗಳಿವೆ. ಮುಖ್ಯವಾದ ಕೆಲವು ಸಂಸ್ಕಾರಗಳೆಂದರೆ ನಾಮಕರಣ, ಉಪನಯನ, ಚೂಡಕರ್ಮ, ಗೃಹಸ್ಥಾಶ್ರಮ, ಗರ್ಭದಾನ, ಸೀಮಂತನ, ಜಾತಕರ್ಮ, ಶ್ರಾದ್ಧಕರ್ಮ ಇತ್ಯಾದಿ. ಇವೆಲ್ಲ ಧಾರ್ಮಿಕ ಜೀವನದ ಅಂಶಗಳಾಗಿದ್ದವು.

## 39.6 ರಾಜಕೀಯ ವ್ಯವಸ್ಥೆ

ಉತ್ತರ ವೈದಿಕ ಕಾಲದ ರಾಜಕೀಯ ವ್ಯವಸ್ಥೆಯ ಸ್ವರೂಪವನ್ನು ಇಲ್ಲಿ ಚರ್ಚಿಸಲಾಗಿದೆ.

### 39.6.1 *ಪ್ರಬಲ ಪ್ರಭುತ್ವಗಳ ಉದಯ*

ಅನೇಕ ಪ್ರಬಲ ಪ್ರಭುತ್ವಗಳಾದ ಕುರುಪಾಂಚಾಲ, ಕಾಶಿ, ಕೋಶಲ ಮತ್ತು ವಿದೇಹಗಳು ಅಸ್ತಿತ್ವಕ್ಕೆ ಬಂದವು. ಬುಡಕಟ್ಟು ಸಾಮಂತರು ನಶಿಸಿಹೋದರು. ಇದರಿಂದ ಸಾಮ್ರಾಜ್ಯಗಳು ಹುಟ್ಟುವುದು ಸಾಧ್ಯವಾಯಿತು. ಐತ್ತರೇಯ ಬ್ರಾಹ್ಮಣರಲ್ಲಿ ಸ್ವರಾಜ್ಯ, ಬೋಜಿಯ, ಪರಮೇಶ್ವರ, ರಾಜ್ಯ, ಮಹಾರಾಜ್ಯ, ಅಧಿಪತಿ, ಸಾರ್ವಭೌಮ ಮುಂತಾದ ಪರಿಭಾಷೆ ಕಂಡುಬರುತ್ತದೆ. ಸಣ್ಣ-ಪುಟ್ಟ ಪ್ರಭುತ್ವಗಳು ರಾಜ್ಯಗಳಾಗಿದ್ದರೆ ದೊಡ್ಡವು ಸಾಮ್ರಾಜ್ಯಗಳೆನಿಸಿಕೊಂಡವು.

### 39.6.2 *ರಾಜನ ಅಧಿಕಾರ*

ಐತ್ತರೇಯ ಬ್ರಾಹ್ಮಣರಲ್ಲಿ ಯುದ್ಧಗಳಲ್ಲಿ ವಿಜಯ ಸಂಪಾದಿಸುವುದೇ ರಾಜನ ಕರ್ತವ್ಯವೆಂದು ಹೇಳಲಾಗಿದೆ. ವಂಶಪಾರಂಪರ್ಯವಾಗಿ ರಾಜರು ಅಧಿಕಾರಕ್ಕೆ ಬರುತ್ತಿದ್ದರೂ ಸಹ ಕೆಲವೊಮ್ಮೆ ರಾಜನನ್ನು ಜನರು ಆಯ್ಕೆ ಮಾಡುತ್ತಿದ್ದ ಪದ್ಧತಿಯೂ ರೂಢಿಯಲ್ಲಿತ್ತು. ಜನರು ಮತ್ತು ರಾಜನ ನಡುವೆ ಒಂದು ಒಪ್ಪಂದವೇರ್ಪಟ್ಟಿತ್ತು. ಅದರ ಪ್ರಕಾರ ಜನರಿಗೆ ಭದ್ರತೆ ಒದಗಿಸುವುದು ರಾಜನ ಜವಾಬ್ದಾರಿ. ಜನರಿಗೆ ರಾಜನಲ್ಲಿ ವಿಶ್ವಾಸ ಮೂಡತೊಡಗಿತು. ಕಾಲಕ್ರಮೇಣ

ಪ್ರಭುತ್ವವು ವಂಶಪಾರಂಪರ್ಯವಾಗಿ ಬಿಟ್ಟಿತು. ಬೃಹತ್ ಸಾಮ್ರಾಜ್ಯಗಳು ಅಸ್ತಿತ್ವಕ್ಕೆ ಬಂದ ಮೇಲೆ ರಾಜರು ಪ್ರಬಲರಾಗಿಬಿಟ್ಟರು. ರಾಜ್ಯಾಭಿಷೇಕವೆಂಬ ಆಚರಣೆಯಿಂದ ಇದು ತಿಳಿದು ಬರುತ್ತದೆ.

ಋಗ್ವೇದದ ಕಾಲದಲ್ಲಿ ಪಟ್ಟಾಭಿಷೇಕದ ಸಂದರ್ಭದಲ್ಲಿ ಕೆಲವೇ ಕೆಲವು ಜನರು ಸೇರುತ್ತಿದ್ದರು. ಉತ್ತರ ವೈದಿಕ ಕಾಲದಲ್ಲಿ ಅಪಾರ ಜನಸಮೂಹವು ಭಾಗವಹಿಸತೊಡಗಿತು. ಪ್ರಭುತ್ವದ ಮೇಲೆ ಅಂಕುಶವಿಟ್ಟುಕೊಂಡಿದ್ದ 'ಸಭಾ-ಸಮಿತಿ' ಎಂಬ ಸಂಸ್ಥೆಗಳು ಅಸ್ತಿತ್ವದಲ್ಲಿದ್ದರೂ ಸಾಮ್ರಾಜ್ಯಗಳು ಪ್ರಬಲಗೊಂಡ ಮೇಲೆ ಅವುಗಳು ಸಭೆ ಸೇರುವುದು ಕಷ್ಟವಾಯಿತು. ಇದರಿಂದಾಗಿ ಪ್ರಭುತ್ವದ ಮೇಲೆ ಸಭಾ ಮತ್ತು ಸಮಿತಿಗಳ ನಿಯಂತ್ರಣ ತಪ್ಪಿ ಹೋಯಿತು. ಇದರ ಪರಿಣಾಮವಾಗಿ ರಾಜನು ನಿರಂಕುಶಾಧಿಕಾರಿಯಾಗಿದ್ದನೆಂದು ತಿಳಿಯಬಾರದು. ಸಭಾ ಮತ್ತು ಸಮಿತಿಗಳು ಪ್ರಭುತ್ವಕ್ಕೆ ಸಲಹೆ-ಮಾರ್ಗದರ್ಶನ ನೀಡುವ ಸಂಸ್ಥೆಗಳಾದವು.

### 39.6.3 *ಆಡಳಿತಾಧಿಕಾರಿಗಳು*

ಉತ್ತರ ವೈದಿಕ ಕಾಲದಲ್ಲಿ ಆಡಳಿತಾಧಿಕಾರಿಗಳ ಸಂಖ್ಯೆ ಋಗ್ವೇದ ಕಾಲದಲ್ಲಿದ್ದದಕ್ಕಿಂತ ಹೆಚ್ಚಿದವು. ಪ್ರಭುತ್ವಗಳ ವಿಸ್ತರಣೆಯಿಂದಾಗಿ ಇದು ಸಹಜವಾಗಿತ್ತು. ಅನೇಕ ಇಲಾಖೆಗಳನ್ನು ರಚಿಸಲಾಯಿತು. ಆಡಳಿತವನ್ನು ಚುರುಕುಗೊಳಿಸಲು ಇದು ಅಗತ್ಯವಾಗಿತ್ತು. ಹೀಗೆ ಅಸ್ತಿತ್ವಕ್ಕೆ ಬಂದ ಇಲಾಖೆಗಳೆಂದರೆ ಹಣಕಾಸು ಇಲಾಖೆ, ಮೇಲ್ವಿಚಾರಣಾ ಇಲಾಖೆ, ರಕ್ಷಣಾ ಇಲಾಖೆ, ಸ್ಥಳೀಯ ಆಡಳಿತ ಇಲಾಖೆ ಇತ್ಯಾದಿ. ಮಂತ್ರಿಗಳ ನೆರವಿನಿಂದ ರಾಜನು ಆಡಳಿತ ನಡೆಸುತ್ತಿದ್ದನು. ಮಂತ್ರಿಗಳ ಸ್ಥಾನವು ಸಾಂಪ್ರದಾಯಿಕವಾಗಿತ್ತು ಮತ್ತು ಅವರಿಗೆ ಜನರ ಮನ್ನಣೆಯ ಅಗತ್ಯವಿತ್ತು. ಅವರನ್ನು 'ರತ್ನ'ಗಳೆಂದು ಸಂಬೋಧಿಸಲಾಗುತ್ತಿತ್ತು. ಅಂತಹ ಕೆಲವು ರತ್ನಗಳು ಹೀಗಿದ್ದವು. ಪುರೋಹಿತ, ರಾಜನ್ಯ, ವಾವತ, ಯುವರಾಜ, ಸೇನಾನಿ, ಗ್ರಾಮಿಣಿ, ಭಾಗದೂತ ಇತ್ಯಾದಿ.

*ನ್ಯಾಯದಾನ*

ನ್ಯಾಯಾಂಗ ವ್ಯವಸ್ಥೆಯ ಉನ್ನತ ಅಧಿಕಾರಿಯೆಂದರೆ ರಾಜ. ರಾಜನಿಗೆ ನ್ಯಾಯದಾನದಲ್ಲಿ ನೆರವು ನೀಡಲು ಕೆಲವು ಅಧಿಕಾರಿಗಳಿದ್ದರು. ನ್ಯಾಯಾಧೀಶರನ್ನು ಸ್ಥಪತಿಗಳೆಂದು ಕರೆಯಲಾಗುತ್ತಿತ್ತು. ಆ ಕಾಲದಲ್ಲಿನ ಮುಖ್ಯ ಅಪರಾಧಗಳೆಂದರೆ ಕಳ್ಳತನ, ದರೋಡೆ, ವ್ಯಭಿಚಾರ, ಕೊಲೆ, ಮೋಸ ಇತ್ಯಾದಿ. ಸಣ್ಣ-ಪುಟ್ಟ ಅಪರಾಧಗಳನ್ನು ಗ್ರಾಮವಾದಿನಿಯು ಬಗೆಹರಿಸುತ್ತಿದ್ದರು. ಕೊಲೆಗಾರರಿಗೆ ಶಿಕ್ಷೆಯೆಂದರೆ ೧೦೦ ಹಸುಗಳ ದಂಡ. ಕೊಲೆಯಾದ ವ್ಯಕ್ತಿಯ ಸಂಬಂಧಿಕರಿಗೆ ಅವುಗಳನ್ನು ನೀಡುತ್ತಿದ್ದರು. ದಿವ್ಯ ಪರೀಕ್ಷೆ ರೂಢಿಯಲ್ಲಿತ್ತು. ಉತ್ತರ ವೈದಿಕ ಕಾಲದಲ್ಲಿ ಜನರಿಗೆ ನ್ಯಾಯದ ಬಗ್ಗೆ ತುಂಬಾ ಕಾಳಜಿಯಿತ್ತು.

## 39.7 ಸಾರಂಶ

ಸಾಮಾಜಿಕ ವ್ಯವಸ್ಥೆ, ರಾಜಕೀಯ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ ಹಾಗೂ ಧಾರ್ಮಿಕ ವ್ಯವಸ್ಥೆಗಳನ್ನು ಕುರಿತಂತೆ ಆರ್ಯರ ಬದುಕಿನಲ್ಲಿ ಅನೇಕ ಬದಲಾವಣೆಗಳುಂಟಾದವು. ಸಪ್ತ ಸಿಂಧುವನ್ನು ಬಿಟ್ಟು ಆರ್ಯರು ವಿಸ್ತರಣೆಗೊಂಡಿದ್ದು ಉತ್ತರ ವೈದಿಕ ಕಾಲದ ಒಂದು ವಿಶಿಷ್ಟತೆಯಾಗಿದೆ. ಉತ್ತರ ವೈದಿಕ ಕಾಲದಲ್ಲಿ ಅನೇಕ ಹೊಸ ಸಾಮ್ರಾಜ್ಯಗಳಾದ ಕುರುಪಾಂಚಾಲ, ಕೋಶಲ ಕಾಶಿ ಮುಂತಾದವು ಅಸ್ತಿತ್ವಕ್ಕೆ ಬಂದವು. ಬುಡಕಟ್ಟುಗಳೆಲ್ಲ ಸಾಮ್ರಾಜ್ಯಗಳಾಗಿ ಪರಿವರ್ತನೆಗೊಂಡವು. ರಾಜನ ಕರ್ತವ್ಯಗಳನ್ನು ಖಚಿತವಾಗಿ ನಿರ್ಧರಿಸಲಾಗಿತ್ತು. ಪ್ರಭುತ್ವವು ವಂಶಪಾರಂಪರ್ಯವಾಗಿತ್ತು. ರಾಜನಿಗೆ ಸಲಹೆ-ಮಾರ್ಗದರ್ಶನ ನೀಡಲು ಮಂತ್ರಿ ಪರಿಷತ್ತು ಇರುತ್ತಿತ್ತು. ಇದಲ್ಲದೆ ಸಭಾ ಮತ್ತು ಸಮಿತಿಗಳು ಇದ್ದವು. ಆದರೆ ಸಭಾ ಮತ್ತು ಸಮಿತಿಗಳ

ಅಧಿಕಾರ ಕಡಿಮೆಯಾಗಿತ್ತು. ಜನಪ್ರಿಯತೆ, ಅಧಿಕಾರ ಮತ್ತು ಶ್ರೀಮಂತಿಕೆಯನ್ನು ತೋರಿಸಲು ಯಜ್ಞ-ಯಾಗಗಳನ್ನು ಆಚರಿಸಲಾಗುತ್ತಿತ್ತು. ರಾಜನು ನ್ಯಾಯಾಂಗದ ಉನ್ನತ ಅಧಿಕಾರಿಯಾಗಿದ್ದನು. ಧರ್ಮನೀತಿಯ ನ್ಯಾಯದಾನದ ಆಧಾರವಾಗಿತ್ತು.

ವರ್ಣಾಶ್ರಮ ಮತ್ತು ಜಾತಿಪದ್ಧತಿ ಅಸ್ತಿತ್ವಕ್ಕೆ ಬಂದವು. ಬ್ರಾಹ್ಮಣರು ಮತ್ತು ಕ್ಷತ್ರಿಯರು ಉನ್ನತ ಅಧಿಕಾರ ಮತ್ತು ಸ್ಥಾನಮಾನ ಪಡೆದಿದ್ದರು. ಬಹುಪತ್ನಿತ್ವ ಹಾಗೂ ಅನೇಕ ಗಂಡಂದಿರುಗಳಿರುವ ಪದ್ಧತಿ ರೂಢಿಗೆ ಬಂದಿದ್ದರಿಂದ ಮಹಿಳೆಯರ ಸ್ಥಾನಮಾನವು ಕೆಳಮಟ್ಟಕ್ಕಿಳಿಯಿತು. ಗುರುಕುಲ ವ್ಯವಸ್ಥೆ ಹೆಚ್ಚು ಪ್ರಚಾರಕ್ಕೆ ಬಂದಿತು. ಅಲ್ಲಿ ಧರ್ಮಶಾಸ್ತ್ರ, ತತ್ವಜ್ಞಾನ, ವೇದ, ಉಪನಿಷತ್ತುಗಳು ಮತ್ತು ಅರಣ್ಯಕಗಳ ಬೋಧನೆಗೆ ವಿಶೇಷ ಒತ್ತು ನೀಡಲಾಗಿತ್ತು. ಕೃಷಿ, ಪಶುಸಂಗೋಪನೆ, ವ್ಯಾಪಾರ, ವಾಣಿಜ್ಯಗಳನ್ನು ಚಲಾವಣೆಗೆ ತರಲಾಯಿತು. ಪ್ರಕೃತಿ ಆರಾಧನೆಯ ಸ್ಥಳದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರ ಆರಾಧನೆಯು ಅಸ್ತಿತ್ವಕ್ಕೆ ಬಂದಿತು. ಉತ್ತರ ವೈದಿಕ ಕಾಲದಲ್ಲಿ ಪರಬ್ರಹ್ಮ, ಮಾಯಾ, ಕರ್ಮ, ಮತ್ತು ಮುಂತಾದ ಧಾರ್ಮಿಕ ಆಚರಣೆಗಳು ಮಹತ್ವ ಪಡೆದುಕೊಂಡವು.

## 39.8 ಮಾದರಿ ಪ್ರಶ್ನೆಗಳು

1. ಉತ್ತರ ವೈದಿಕ ಕಾಲದ ಆರ್ಯರ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ವಿವರಿಸಿ.
2. ಉತ್ತರ ವೈದಿಕ ಕಾಲದಲ್ಲಿ ಆರ್ಯರ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಬದುಕನ್ನು ಕುರಿತು ಬರೆಯಿರಿ.

## 39.9 ಹೆಚ್ಚಿನ ಅಧ್ಯಯನಕ್ಕೆ


1. Altekar .A.S. : **Ancient India**
2. Basham .A.L. : **The Wonder that was India**
3. Majumdar .R.C. (Ed) : **The Clasical Age**
4. Rangaswamy .C.V. : **Studies in Indian Culture**
5. Mittal .A.K. : **Political and Cultural History of India**
6. Will Durant : **Our Orient Heritage**

## ಟಿಪ್ಪಣಿಗಳು

# ಘಟಕ - 40

# ಮಹಾಕಾವ್ಯಗಳ ಕಾಲದಲ್ಲಿ ಜೀವನ

*ರಚನೆ*

**40.0** ಉದ್ದೇಶಗಳು

**40.1** ಪೀಠಿಕೆ

**40.2** ರಾಮಾಯಣ

**40.3** ಮಹಾಭಾರತ

**40.4** ಭಗವದ್ಗೀತೆ

**40.5** ಮಹಾಕಾವ್ಯಗಳ ಐತಿಹಾಸಿಕ ಮಹತ್ವ

- **40.5.1** ಸಾಹಿತ್ಯ ಮತ್ತು ತಾತ್ವಿಕ ಮಹತ್ವ
- **40.5.2** ನೈತಿಕ ಮತ್ತು ಸಾಂಸ್ಕೃತಿಕ ಮಹತ್ವ

**40.6** ಮಹಾಕಾವ್ಯಗಳ ಕಾಲದ ಸ್ಥಿತಿಗತಿಗಳು

- **40.6.1** ರಾಜಕೀಯ ಸ್ಥಿತಿಗತಿಗಳು
- **40.6.2** ಸಾಮಾಜಿಕ ಸ್ಥಿತಿಗತಿಗಳು
- **40.6.3** ಧಾರ್ಮಿಕ ಸ್ಥಿತಿಗತಿಗಳು
- **40.6.4** ವ್ಯಾಪಾರಿ ಸಂಘಗಳು ಮತ್ತು ಹಣಕಾಸು

**40.7** ಸಾರಾಂಶ

**40.8** ಮಾದರಿ ಪ್ರಶ್ನೆಗಳು

**40.9** ಅಧ್ಯಯನಕ್ಕೆ ಗ್ರಂಥಗಳು

## 40.0 ಉದ್ದೇಶಗಳು

ಹಿಂದಿನ ಘಟಕಗಳಲ್ಲಿ ವೇದಗಳ ಕಾಲದ ಆರ್ಯರ ವಿಸ್ತರಣೆ ಮತ್ತು ಅವರ ಜೀವನದ ವಿವಿಧ ಆಯಾಮಾಗಳನ್ನು ತಿಳಿದುಕೊಂಡಿದ್ದೇವೆ. ಈ ಘಟಕದ ಅಧ್ಯಯನ ಉದ್ದೇಶಗಳೆಂದರೆ :

1. ಕಥಾ ರೂಪದ ಮಹಾಕಾವ್ಯಗಳನ್ನು - ರಾಮಾಯಣ, ಮಹಾಭಾರತ ಮತ್ತು ಭಗವದ್ಗೀತೆಯಲ್ಲಿನ ಸಾಹಿತ್ಯ ನಿರೂಪಣೆಯನ್ನು ಆ ಕಾಲದ ಜೀವನ ಮತ್ತು ಸಂಸ್ಕೃತಿ ತಿಳಿಯಲು 'ಆಕರ ಗ್ರಂಥಗಳನ್ನಾಗಿ' ಹೇಗೆ ಉಪಯೋಗಿಸಿಕೊಳ್ಳಬೇಕೆನ್ನುವ ವಿಷಯ ತಿಳಿಯುವುದು.

2. ಈ ಕಾಲದ ರಾಜನೀತಿ ಮತ್ತು ರಾಜತಾಂತ್ರಿಕ ಬೆಳವಣಿಗೆಯನ್ನು ಗುರುತಿಸುವುದು.

3. ಮಹಾಕಾವ್ಯಗಳಲ್ಲಿ ಪ್ರತಿಬಿಂಬಿತವಾದ ಜೀವನ ಮೌಲ್ಯಗಳನ್ನು ಅರ್ಥಮಾಡಿಕೊಳ್ಳುವುದು.

4. ಭಾರತೀಯ ತತ್ವಜ್ಞಾನ ಮತ್ತು ಆಧ್ಯಾತ್ಮ ಚಿಂತನೆಯ ಬೆಳವಣಿಗೆಯ ಅಧ್ಯಯನಕ್ಕೆ ಮಹಾಕಾವ್ಯಗಳು ಹೇಗೆ ಅಡಿಗಲ್ಲಾಗಿವೆ ಎನ್ನುವ ಅಂಶವನ್ನು ವಿಶ್ಲೇಷಿಸುವುದಾಗಿದೆ.

## 40.1 ಪೀಠಿಕೆ

ಭಾರತದ ಎರಡು ಮಹಾಕಾವ್ಯಗಳೆಂದರೆ ರಾಮಾಯಣ ಮತ್ತು ಮಹಾಭಾರತ. ಇವೆರಡೂ ಸುದೀರ್ಘ ಕಾವ್ಯಗಳಾಗಿದ್ದಾವೆ. ಮಹಾಕಾವ್ಯಗಳ ಮೂಲವನ್ನು ಗತಕಾಲದ ಅಖ್ಯಾಯಿಕೆಗಳಲ್ಲಿ ಕಾಣಬಹುದು. ಪ್ರಾಚೀನ ಕಾಲದ ನಾಯಕರು ಮತ್ತು ನಾಯಕಿಯರ ವಿರೋಧಾತ್ತ ಐತಿಹ್ಯಗಳನ್ನು ಮಹಾಕಾವ್ಯಗಳು ಒಳಗೊಂಡಿದ್ದಾವೆ. ಅವುಗಳ ವಿಷಯ ವಸ್ತು ಮತ್ತು ಶೈಲಿ ಮಹತ್ತಾಗಿರುತ್ತದೆ. ಈ ಕೃತಿಗಳಲ್ಲಿ ನಾವು ಧರ್ಮ, ರಾಜಕಾರಣ, ಚರಿತ್ರೆ, ಸಮಾಜಶಾಸ್ತ್ರ, ತತ್ವಶಾಸ್ತ್ರ ಮತ್ತು ನೀತಿಶಾಸ್ತ್ರಗಳ ವಿಚಾರಗಳನ್ನು ಕಾಣಬಹುದಾಗಿದೆ. ಎರಡೂ ಮಹಾಕಾವ್ಯಗಳು ಕ್ಷತ್ರಿಯ ರಾಜಕುಮಾರರ ವೈಭವಭೂತ ಸಾಧನೆಗಳನ್ನು ವೈಭವಯುತವಾಗಿ ಚಿತ್ರಿಸಿವೆ. ಅವುಗಳನ್ನು ಸಾಮಾನ್ಯ ಜನರ ವೇದಗಳೆಂದು ಗುಣಗಾನ ಮಾಡಲಾಗಿದೆ. ಜನರು ತಮ್ಮ ದುಃಖದ ಸಂದರ್ಭದಲ್ಲಿ, ಸಂತೋಷದ ಸಂದರ್ಭದಲ್ಲಿ, ದೈನಂದಿನ ತೊಳಲಾಟದಲ್ಲಿ ಒಂದು ರೀತಿಯ ಸಮಾಧಾನವನ್ನು ಮತ್ತು ಮಾರ್ಗದರ್ಶನವನ್ನು ಅವುಗಳಿಂದ ಪಡೆಯುತ್ತಾರೆ. ಎಲ್ಲ ಬಗೆಯ ಜನರಿಗೂ ಅವು ಮಹಾ ಪ್ರೇರಣೆಯ ಚಿಲುಮೆಗಳಾಗಿದ್ದಾವೆ. ಸಂಗೀತಗಾರರು, ನೃತ್ಯಗಾರರು, ಶಿಲ್ಪಿಗಳು, ಕಲಾವಿದರು ಮತ್ತು ಕವಿಗಳು ಇವೆರಡೂ ಮಹಾಕಾವ್ಯಗಳಿಂದ ಯಾವಾಗಲೂ ಸ್ಫೂರ್ತಿಯನ್ನು ಪಡೆಯುತ್ತಾ ಬಂದಿದ್ದಾರೆ. ಯುಗ ಯುಗಾಂತರಗಳಿಂದ ಅವೆರಡೂ ಜನರ ಬದುಕಿನ ಮೇಲೆ ಪ್ರಭಾವ ಬೀರುತ್ತಾ ಬಂದಿವೆ. ರಾಮಾಯಣವನ್ನು ವಾಲ್ಮೀಕಿ ಎಂಬ ಋಷಿ ರಚಿಸಿದನೆಂದು ಹೇಳಲಾಗಿದೆ. ಮಹಾಭಾರತವು ಮಹರ್ಷಿವ್ಯಾಸನ ರಚನೆಯೆಂದು ಹೇಳಲಾಗಿದೆ. ವಾಸ್ತವವಾಗಿ ಇಂದು ನಮ್ಮ ಮುಂದಿರುವ ಮಹಾಕಾವ್ಯಗಳು ಯಾವುದೋ ಒಂದು ಯುಗದಲ್ಲಿ ಅಥವಾ ಯಾರೋ ಒಬ್ಬ ಕವಿಯಿಂದ ರಚಿತವಾದವು ಎಂದು ಹೇಳಲು ಸಾಧ್ಯವಿಲ್ಲ. ಕಾಲ ಕಾಲಕ್ಕೆ ಅನೇಕ ಪರಿಷ್ಕರಣಕ್ಕೆ ಒಳಗಾಗಿ ಅವು ಇಂದಿನ ರೂಪ ಪಡೆದುಕೊಂಡಿವೆ. ಅನೇಕ ಭಾಗಗಳನ್ನು ಹೊಸದಾಗಿ ಸೇರಿಸಲಾಗಿದೆ. ನಾವು ಇಂದು ಕಾಣುತ್ತಿರುವ ರೂಪವನ್ನು ರಾಮಾಯಣವು ಕ್ರಿ.ಶ. ೨೦೦ ರಲ್ಲಿ ಪರಿಷ್ಕರಣ ಪಡೆದುಕೊಂಡಿದೆ. ಮಹಾಭಾರತವು ಕ್ರಿ.ಶ. ೨೦೦ ರರ ನಂತರದ ಕಾಲದಲ್ಲಿ ಪರಿಷ್ಕರಣ ಪಡೆದುಕೊಂಡಿತು.

ವಿಂಟರ್‌ನೂಯಿಟ್ಜ್ ಪ್ರಕಾರ ರಾಮಾಯಣವು ರಚಿತವಾದ ಕಾಲ ಸುಮಾರು ಕ್ರಿ.ಪೂ. ನಾಲ್ಕನೆಯ ಶತಮಾನವೆಂದು ಗುರುತಿಸಲಾಗಿದೆ. ಸುಮಾರು ಕ್ರಿ.ಪೂ. ಎರಡನೆಯ ಶತಮಾನದ

ವೇಳೆಗೆ ಅವುಗಳು ರಚನೆ ಮುಗಿದಿದ್ದಿರಬೇಕು. ಅವುಗಳು ರಚನೆಯಾದ ಕಾಲಕ್ಕೆ ಪೂರ್ವದ ಘಟನಾವಳಿ ಬಗ್ಗೆ ಕಾವ್ಯಗಳ ಕಥೆ ಹೇಳುತ್ತದೆ. ಇವೆರಡೂ ಮಹಾಕಾವ್ಯಗಳು ಕವಿಯೊಬ್ಬನ ಕಲ್ಪನೆಯ ಕೂಸುಗಳಲ್ಲ. ಅವು ಪುರಾಣಗಳೂ ಅಲ್ಲ ಹಾಗೂ ರೂಪಕವೂ ಅಲ್ಲ. ಆದರೆ ಇವೆರಡೂ ಮಹಾಕಾವ್ಯಗಳು ರೂಪಕ, ಕಥನ ಮತ್ತು ವಾಸ್ತವಿಕ ಸಂಗತಿಗಳ ಮಿಶ್ರಣವಾಗಿವೆ. ಇವೆರಡೂ ಮಹಾಕಾವ್ಯಗಳ ಮೂಲವನ್ನು ಗತಕಾಲದ ವೀರಗಾಥೆಯಲ್ಲಿ ಗುರುತಿಸಬಹುದಾಗಿದೆ. ಧಾರ್ಮಿಕ ಕ್ರಿಯಾಚರಣೆ ಮತ್ತು ಮಹಾಭೋಜನಗಳ ಸಂದರ್ಭದಲ್ಲಿ ರಾಜನ ಆಸ್ಥಾನದಲ್ಲಿ ವೀರಾಧಿವೀರರ ಸಾಹಸಗಳನ್ನು ಕುರಿತಂತೆ ಜಾನಪದ ಕಲಾವಿದರು ಹಾಡಿದ ಹಾಡುಗಳು ಇವೆರಡೂ ಮಹಾಕಾವ್ಯಗಳ ಮೂಲವಾಗಿರಲು ಸಾಕು. ಈ ಬಗೆಯ ವೀರೋಚಿತ ಹಾಡುಗಳ ಕೆಲಭಾಗಗಳೂ ಮಹಾಕಾವ್ಯಗಳಲ್ಲಿ ಇಂದಿಗೂ ಉಳಿದುಕೊಂಡು ಬಂದಿರುವುದನ್ನು ನೋಡಬಹುದಾಗಿದೆ. ರಾಮಾಯಣ ಮಹಾಕಾವ್ಯವು ಆರ್ಯರು ದಕ್ಷಿಣ ಭಾರತವನ್ನು ತಮ್ಮದಾಗಿಸಿಕೊಂಡ ಚರಿತ್ರೆಯನ್ನು ಹೇಳುತ್ತದೆ. ಸಣ್ಣಪುಟ್ಟ ರಾಜಮನೆತನಗಳ ನಡುವಿನ ಘರ್ಷಣೆಯ ಮುಂದೆ ಆರ್ಯಬುಡಕಟ್ಟುಗಳ ನಡುವಿನ ಸುಧೀರ್ಘ ಹೋರಾಟಕ್ಕೆ ಕಾರಣವಾದ ಕಥೆಯನ್ನು ಮಹಾಭಾರತವು ನಿರೂಪಿಸುತ್ತದೆ.

## 40.2 ರಾಮಾಯಣ

ರಾಮಾಯಣವನ್ನು ಆದಿಕಾವ್ಯವೆಂದು ಕರೆಯಲಾಗಿದೆ. ಅದರಲ್ಲಿ ೨೪೦೦೦ ಪದ್ಯಗಳಿವೆ. ಅಯೋಧ್ಯೆಯ ರಾಜನಾಗಿದ್ದ ದಶರಥನಿಗೆ ನಾಲ್ಕು ಗಂಡು ಮಕ್ಕಳು ಹಾಗೂ ಮೂವರು ರಾಣಿಯರಿದ್ದರು. ವೃದ್ಧಾಪ್ಯದಲ್ಲಿ ರಾಜನು ತನ್ನ ಹಿರಿಯ ಮಗ ರಾಮನನ್ನು ಸಿಂಹಾಸನಕ್ಕೆ ಉತ್ತರಾಧಿಕಾರಿಯೆಂದು ಘೋಷಿಸಿದನು. ರಾಮನ ಮಲತಾಯಿ ರಾಣಿ ಕೈಕೇಯಿಯು ಇದನ್ನು ವಿರೋಧಿಸಿದಳು. ತನ್ನ ಮಗನಾದ ಭರತನನ್ನು ಉತ್ತರಾಧಿಕಾರಿಯಾಗಿ ಘೋಷಿಸುವ ಹಾಗೂ ರಾಮನನ್ನು ಹದಿನಾಲ್ಕು ವರ್ಷ ವನವಾಸಕ್ಕಟ್ಟುವ ಪ್ರಮಾಣವನ್ನು ರಾಣಿ ಕೈಕೇಯಿ ತನ್ನ ಗಂಡನಿಂದ ಪಡೆದುಕೊಳ್ಳುವಲ್ಲಿ ಯಶಸ್ವಿಯಾದಳು. ತನ್ನ ಪಾಲಕರ ಬಯಕೆಯಂತೆ ರಾಮನು ತನ್ನ ಹೆಂಡತಿ ಸೀತೆ ಹಾಗೂ ಸಹೋದರ ಲಕ್ಷ್ಮಣನೊಂದಿಗೆ ವನವಾಸಕ್ಕೆ ತೆರಳಿದನು. ಇದರಿಂದ ಆಘಾತಗೊಂಡ ದಶರಥನು ಮರಣವನ್ನಪ್ಪಿದನು. ಭರತನು ಚಕ್ರವರ್ತಿಯಾಗಲು ಒಪ್ಪಲಿಲ್ಲ. ರಾಮನ ಗೈರುಹಾಜರಿಯಲ್ಲಿ ಅವನ ಪ್ರತಿನಿಧಿಯಾಗಿ ಮಾತ್ರ ಆಡಳಿತ ನಡೆಸಲು ಅವನು ಒಪ್ಪಿದನು.

ಅರಣ್ಯದಲ್ಲಿ ಸುತ್ತಾಡುವಾಗ ರಾಮ, ಸೀತೆ ಮತ್ತು ಲಕ್ಷ್ಮಣ ಪಂಚವಟಿಯಲ್ಲಿ ತಂಗಿದ್ದರು. ರಾಮನು ಕುಟೀರದಲ್ಲಿ ಇಲ್ಲದ ಸಂದರ್ಭದಲ್ಲಿ ಲಂಕೆಯ ಚಕ್ರವರ್ತಿಯಾದ ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋಗುತ್ತಾನೆ. ಕೊನೆಯಲ್ಲಿ ರಾವಣನನ್ನು ಕೊಂದು ಸೀತೆಯನ್ನು ಬಿಡಿಸಕೊಂಡು ಬರಲಾಗುತ್ತದೆ. ಕೆಲವು ಜನರು ಸೀತೆಯ ಪಾತಿವ್ರತ್ಯದ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಾರೆ. ರಾಮನು ಆಕೆಯನ್ನು ಕಾಡಿಗಟ್ಟುತ್ತಾನೆ. ಆಕೆಯು ಋಷಿ ವಾಲ್ಮೀಕಿಯ ಆಶ್ರಮದಲ್ಲಿ ಆಶ್ರಯ ಪಡೆಯುತ್ತಾಳೆ. ಅಲ್ಲಿ ಅವಳು ಲವ ಮತ್ತು ಕುಶ ಎಂಬ ಇಬ್ಬರು ಮಕ್ಕಳಿಗೆ ಜನ್ಮ ನೀಡುತ್ತಾಳೆ. ಮುಂದೆ ಸೀತೆಯ ಪಾತಿವ್ರತ್ಯವು ಅನುಮಾನ ರಹಿತವಾಗಿ ಸಿದ್ಧವಾಗುತ್ತದೆ. ಮತ್ತು ಲವ ಕುಶ ಇಬ್ಬರೂ ರಾಮನ ಉತ್ತರಾಧಿಕಾರಿಗಳಾಗುತ್ತಾರೆ.

## 40.3 ಮಹಾಭಾರತ

ಮಹಾಭಾರತ ಕಾವ್ಯದಲ್ಲಿ ೧೦೦,೦೦೦ ಪದ್ಯಗಳಿವೆ. ಇದರ ಮುಖ್ಯಕಥಾ ವಸ್ತುವೆಂದರೆ ಕೌರವ ಮತ್ತು ಪಾಂಡವರ ನಡುವಿನ ಮಹಾಯುದ್ಧ. ಚಕ್ರವರ್ತಿ ಪಾಂಡು ತನ್ನ ಅಪ್ರಾಪ್ತ ವಯಸ್ಸಿನ ಐವರು ಮಕ್ಕಳಾದ ಪಾಂಡವರನ್ನು ಬಿಟ್ಟು ಮರಣವನ್ನಪ್ಪುತ್ತಾನೆ. ಅವನ ನಂತರ ಅವನ ಸಹೋದರನಾದ ಧೃತರಾಷ್ಟ್ರನು ಪಟ್ಟಕ್ಕೆ ಬರುತ್ತಾನೆ. ಅವನಿಗೆ ಕೌರವರೆಂಬ ಮಕ್ಕಳಿರುತ್ತಾರೆ

ಪಾಂಡವರು ಮತ್ತು ಕೌರವರಿಗೆ ಜೊತೆಯಲ್ಲಿ ಶಿಕ್ಷಣ ನೀಡಲಾಗುತ್ತದೆ. ಕೌರವರಲ್ಲಿ ಹಿರಿಯವನಾದ ದುರ್ಯೋಧನನು ಪಾಂಡವರನ್ನು ಮುಗಿಸುವ ಸಲುವಾಗಿ ಅನೇಕ ಪಿತೂರಿಗಳನ್ನು ನಡೆಸುತ್ತಾನೆ. ಆದರೆ ಅವನು ಯಶಸ್ವಿಯಾಗಲಿಲ್ಲ. ಕೌರವರ ದಿಶೆಯಿಂದಾಗಿ ಪಾಂಡವರು ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಹದಿಮೂರು ವರ್ಷಗಳ ವನವಾಸ ಶಿಕ್ಷೆಯನ್ನು ಎದುರಿಸಬೇಕಾಗುತ್ತದೆ. ಅಂತಿಮವಾಗಿ ಪಾಂಡವರು ರಾಜ್ಯದಲ್ಲಿ ತಮ್ಮ ಭಾಗವನ್ನು ನೀಡಲು ಒತ್ತಾಯಿಸುತ್ತಾರೆ. ಆದರೆ ದುರ್ಯೋಧನನು ಅದಕ್ಕೆ ಒಪ್ಪುವುದಿಲ್ಲ. ಈ ಸಂಧಾನವು ಮುರಿದು ಬಿದ್ದ ಪರಿಣಾಮವಾಗಿ ಕುರುಕ್ಷೇತ್ರ ಎಂಬ ಸ್ಥಳದಲ್ಲಿ ೧೮ ದಿನಗಳ ಮಹಾಯುದ್ಧ ನಡೆದು ಹೋಗುತ್ತದೆ. ಯುದ್ಧದಲ್ಲಿ ದುರ್ಯೋಧನನು ಸೇರಿಕೊಂಡು ನೂರು ಜನ ಕೌರವರು ಮತ್ತು ಅವನ ಸಾವಿರಾರು ಅನುಯಾಯಿಗಳು ಹತರಾದರು. ಪಾಂಡವರಲ್ಲಿ ಹಿರಿಯನಾದ ಯುಧಿಷ್ಠರನು ಹಸ್ತಿನಾಪುರದ ಸಿಂಹಾಸನವನ್ನೇರುತ್ತಾನೆ. ಅನೇಕ ವರ್ಷಗಳ ನಂತರ ಪಾಂಡವರು ಸನ್ಯಾಸಾಶ್ರಮವನ್ನು ಸ್ವೀಕರಿಸಿ ಅರ್ಜುನನ ಮೊಮ್ಮಗನಾದ ಪರೀಕ್ಷಿತನಿಗೆ ಪಟ್ಟಾಭಿಷೇಕ ಮಾಡಿ ಕಾಡಿಗೆ ತೆರಳುತ್ತಾರೆ.

## 40.4 ಭಗವದ್ಗೀತೆ

ಕುರುಕ್ಷೇತ್ರದಲ್ಲಿ ಕೌರವ ಮತ್ತು ಪಾಂಡವರ ಸೇನೆಗಳು ಯುದ್ಧಕ್ಕಾಗಿ ಎದುರುಬದುರು ನಿಂತಾಗ, ತನ್ನ ರಕ್ತ ಸಂಬಂಧಿಗಳು-ಸಹೋದರರ ವಿರುದ್ಧ ಯುದ್ಧ ಮಾಡಲು ಅರ್ಜುನ ಹಿಂಜರಿಯುತ್ತಾನೆ. ಅಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಪವಿತ್ರ ಸಂದೇಶ ನೀಡುತ್ತಾನೆ. ಈ ದಿವ್ಯಗೀತೆಯನ್ನು ಮಹಾಭಾರತ ಕಾವ್ಯದಲ್ಲಿ ಸೇರಿಸಲಾಗಿದೆ. ಮಹಾಭಾರತ ಕಾವ್ಯದ ಭೀಷ್ಮ ಪರ್ವತದಲ್ಲಿ ಗೀತೆ ಬರುತ್ತದೆ. ತನ್ನ ಬಂಧು ಬಾಂದವರನ್ನೆಲ್ಲಾ ಕೊಂದು ಪಡೆದುಕೊಳ್ಳುವ ಸಾಮ್ರಾಜ್ಯಕ್ಕೆ ಯಾವುದೇ ಅರ್ಥವೂ ಇಲ್ಲ ಎಂದು ಅರ್ಜುನ ಯುದ್ಧ ಮಾಡಲು ಹಿಂತೆಗೆಯುತ್ತಾನೆ. ಈ ಸಂದರ್ಭದಲ್ಲಿ ಶ್ರೀ ಕೃಷ್ಣನು ಸಂದರ್ಭವನ್ನು ವಿವರಿಸುತ್ತಾ ನೀನೊಬ್ಬ ಕ್ಷತ್ರಿಯ ಮತ್ತು ಕ್ಷತ್ರಿಯನ ಧರ್ಮವೆಂದರೆ ಯುದ್ಧ ಮಾಡುವುದು ಎಂಬುದನ್ನು ನೆನಪಿಸುತ್ತಾನೆ. ಯುದ್ಧದಲ್ಲಿ ತನ್ನ ಬಂದು ಬಾಂಧವರನ್ನು ಕೊಲ್ಲುತ್ತೇನೆ ಎಂಬ ಅರ್ಜುನನ ನಂಬಿಕೆ ಅರ್ಥವಿಲ್ಲದ್ದು ಎಂಬುದನ್ನು ಶ್ರೀಕೃಷ್ಣ ತಿಳಿಸಿಕೊಡುತ್ತಾನೆ. ಅರ್ಜುನನ ಅಸಮಾಧಾನ ಭ್ರಾಂತಿಯನ್ನು ನಿವಾರಿಸುತ್ತಾನೆ. ಆತ್ಮ ಶಾಶ್ವತವಾದುದು ಎಂಬುದನ್ನು ಅರ್ಜುನನಿಗೆ ತಿಳಿಸಿಕೊಡುತ್ತಾನೆ. ಖಡ್ಗವಾಗಲಿ, ಬೆಂಕಿಯಾಗಲಿ, ಬಿರುಗಾಳಿಯಾಗಲಿ ಅಥವಾ ಜಲಪ್ರಳಯವಾಗಲಿ ಆತ್ಮವನ್ನು ನಾಶ ಮಾಡಲು ಸಾಧ್ಯವಿಲ್ಲ. ಅದು ಮುಕ್ತವೂ, ಅವಿನಾಶಿಯೂ, ಸುರಕ್ಷಿತವೂ ಆದುದಾಗಿದೆ. ಅಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ತನ್ನ ಮಹಾ ಸಂದೇಶವನ್ನು ನೀಡುತ್ತಾನೆ. ಅನಾಸಕ್ತಿಯನ್ನು ತಳೆದ ಅರ್ಜುನನಿಗೆ ಸರಿಯಾದ ದಾರಿಯನ್ನು ಕೃಷ್ಣನು ತೋರಿಸುತ್ತಾನೆ. ಅರ್ಜುನನ ಅನಾಸಕ್ತಿಯು ಹೇಗೆ ಅವನ ಕರ್ತವ್ಯಕ್ಕೆ ವಿರುದ್ಧವಾಗಿದೆ ಎಂಬುದನ್ನು ಶ್ರೀಕೃಷ್ಣನು ತೋರಿಸಿಕೊಡುತ್ತಾನೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಫಲಾಪೇಕ್ಷೆಗೆ ಪ್ರತಿಯಾಗಿ ಕರ್ತವ್ಯದ ಬಗ್ಗೆ ತಿಳಿಸಿಕೊಡುತ್ತಾನೆ. ವಿಧಿಯ ನಿಯಮದಂತೆ ನಾವು ನಮ್ಮ ಕರ್ತವ್ಯ ನಿಭಾಯಿಸಬೇಕಾಗಿರುತ್ತದೆ. ಅದೇ ನಾವು ದೇವರಿಗೆ ಸಲ್ಲಿಸಬಹುದಾದ ಕಾಣಿಕೆ. ನಿಷ್ಕಾಮ ಕರ್ಮಮಾಡುವುದು ಪ್ರತಿಯೊಬ್ಬನ ಕರ್ತವ್ಯ. ಅದು ಪರಮ ಮೌಲ್ಯ. ಅದರಿಂದ ಮೋಕ್ಷವನ್ನು ಸಾಧಿಸಿಕೊಳ್ಳಬಹುದು ಮತ್ತು ದೇವರನ್ನು ಸೇರಬಹುದು. ಅಂತಿಮ ಗುರಿಯೆಂದರೆ ಪರಬ್ರಹ್ಮನ ಸಾಕ್ಷಾತ್ಕಾರ. ಪರಬ್ರಹ್ಮನೇ ಸರ್ವಶಕ್ತ. ಜಗತ್ತನ್ನಾಳುವವನು ಅವನೆ. ಅವನು ಉಹಾತೀತನು, ಪ್ರಜ್ಞಾತೀತನು. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ತನ್ನನ್ನು ತಾನು ಪರಬ್ರಹ್ಮನೆಂದು ಗುರುತಿಸಿಕೊಳ್ಳುತ್ತಾನೆ. ತಾನೇ ಪರಮಾತ್ಮನ ಅವತಾರವೆಂಬುದನ್ನು ತೋರಿಸಿಕೊಡುತ್ತಾನೆ. ಅವತಾರಗಳ ಸಿದ್ಧಾಂತವನ್ನು ಅಲ್ಲಿ ಪ್ರತಿಪಾದಿಸುತ್ತಾನೆ. ಗೀತೆಯಲ್ಲಿ ಅವನ ಪರಮ ಸಂದೇಶ ಹೀಗಿದೆ.

"ಧರ್ಮವು ಕ್ಷೀಣಿಸಲು ತೊಡಗಿದಾಗ
ಅಧರ್ಮವು ಮೆರೆಯುವಾಗ ನಾನು
ಅವತಾರವೆತ್ತಿ ಬಂದು ದುಷ್ಟರನ್ನು
ಶಿಕ್ಷಿಸಿ ಶಿಷ್ಟರನ್ನು ರಕ್ಷಿಸುತ್ತೇನೆ"

ಪರಮಾತ್ಮನು ಭೂಮಿಯಲ್ಲಿ ಮನುಷ್ಯನಾಗಿ ಹುಟ್ಟುವುದನ್ನು ಅವತಾರವೆಂದು ಕರೆಯಲಾಗಿದೆ. ಮಾನವ ಕಲ್ಯಾಣಕ್ಕಾಗಿ ಸಾಮಾಜಿಕ ಹಿತವನ್ನು ಕಾಪಾಡುವುದು ದೈವದ ಕರ್ತವ್ಯವೆಂದು ಶ್ರೀಕೃಷ್ಣ ತಿಳಿಸುತ್ತಾನೆ.

ಭಗವದ್ಗೀತೆಯ ಪ್ರಕಾರ ಬ್ರಹ್ಮಜ್ಞಾನವೇ ನಿಜವಾದ ಜ್ಞಾನ. ಅದೇ ಮಾನವ ಮತ್ತು ದೈವದ ನಡುವಿನ ಸಂಬಂಧ. ಮಾನವ ಮತ್ತು ಜಗತ್ತಿನ ನಡುವಿನ ಸಂಬಂಧವೇ ಜ್ಞಾನ.

ಜೀವಾತ್ಮ ಮತ್ತು ಪರಮಾತ್ಮಗಳ ಐಕ್ಯತೆಯನ್ನು ಗೀತೆ ಬೋಧಿಸುತ್ತದೆ. ಇದನ್ನು ಕರ್ಮ, ಜ್ಞಾನ ಅಥವಾ ಭಕ್ತ ಮಾರ್ಗಗಳಿಂದ ಸಾಧಿಸಿಕೊಳ್ಳಬಹುದು. ಭಗವದ್ಗೀತೆಯಲ್ಲಿ ಮೂರು ಮುಕ್ತಿ ಮಾರ್ಗಗಳಾದ ಭಕ್ತ, ಜ್ಞಾನ ಮತ್ತು ಕರ್ಮ ಮಾರ್ಗಗಳನ್ನು ಸಂಯೋಜಿಸುವ ಕೆಲಸ ಮಾಡಲಾಗಿದೆ. ಕರ್ಮಯೋಗದ ಸಾರವೆಂದರೆ ಪ್ರಪಂಚದ ಎಲ್ಲ ಸಂಕೋಲೆಗಳಿಂದ ಆತ್ಮನನ್ನು ಬಿಡಿಸಿಕೊಳ್ಳಲು ಪ್ರಯತ್ನಿಸುವುದು, ಫಲಾಪೇಕ್ಷೆಯಿಲ್ಲದೆ ಕರ್ಮ ಮಾಡುವುದು, ಮತ್ತು ನಿಷ್ಕಾಮಕರ್ಮ ಮಾಡುವುದು.

ಪರಮಾತ್ಮನಿಗೆ ನಮ್ಮ ಕರ್ಮವನ್ನು ಸಲ್ಲಿಸಬೇಕು. ಕರ್ಮಯೋಗದ ಜೊತೆಗೆ ಭಗವದ್ಗೀತೆಯಲ್ಲಿ ಜ್ಞಾನಯೋಗ ಮತ್ತು ಭಕ್ತಿಯೋಗಗಳ ಬಗ್ಗೆಯೂ ಚರ್ಚೆಯಿದೆ. ಅತ್ಯಂತ ಸರಳವಾದ ಭಕ್ತಿಮಾರ್ಗವನ್ನು ಎಲ್ಲರೂ ಅನುಸರಿಸಬಹುದು. ಜ್ಞಾನಯೋಗವನ್ನು ಸಾಧಿಸಿಕೊಳ್ಳುವುದು ಕಷ್ಟ. ಅದನ್ನು ಪರಮ ಜ್ಞಾನಿಗಳು ಮಾತ್ರ ಅನುಸರಿಸಬಹುದು.

ಗೀತೆಯು ಪರಮಾತ್ಮನ ಅವತಾರ ಮತ್ತು ಅಹಿಂಸೆಯನ್ನು ಬೋಧಿಸುತ್ತದೆ. ಗೀತೆಯ ಪ್ರಕಾರ ದೃಷ್ಟಶಕ್ತಿಯ ನಿರೋಧವೇ ಅಹಿಂಸೆ. ದುಷ್ಟಶಕ್ತಿಯ ನಿಗ್ರಹಕ್ಕೆ ಹಿಂಸೆ ಅಥವಾ ಅಹಿಂಸೆಯ ಮಾರ್ಗವನ್ನು ಅನುಸರಿಸಬಹುದು. ಭಗವದ್ಗೀತೆಯ ಧರ್ಮಯಾವುದೆಂದರೆ ಬ್ರಹ್ಮಜ್ಞಾನ. ದೇವರಲ್ಲಿ ತನ್ನನ್ನು ತಾನು ಸಮರ್ಪಿಸಿಕೊಳ್ಳುವುದು. ಕರ್ಮ ಮಾಡುವುದು. ಮುಕ್ತಿಯನ್ನು ಸಂಪಾದಿಸುವುದು. ಗೀತೆಯ ಸಾರಸತ್ವವೆಂದರೆ ಜೀವನ ಬೋಧೆ. ಗೀತೆಯ ಪ್ರಕಾರ ಕಷ್ಟನಷ್ಟಗಳು ಸಾರ್ವತ್ರಿಕ. ಗೀತೆಯು ಭಾರತೀಯ ತತ್ವಜ್ಞಾನದ ಆಕರ ಗ್ರಂಥವಾಗಿದೆ. ಧಾರ್ಮಿಕ ಚಿಂತನೆಯ ಅಧಿಕೃತ ಕೃತಿಯೆಂದರೆ ಭಗವದ್ಗೀತೆ. ಜ್ಞಾನ ಮತ್ತು ಕ್ರಿಯೆ ಅಥವಾ ವಿಚಾರ ಮತ್ತು ಆಚಾರ ಎರಡರ ಮೇಲೂ ಪ್ರಭಾವ ಬೀರಿರುವ ಭಗವದ್ಗೀತೆಯು ತಾತ್ವಿಕ ಹಾಗೂ ಶೈಕ್ಷಣಿಕ ಮಹತ್ವವನ್ನು ಪಡೆದಿದೆ. ಭಾರತದ ರಾಷ್ಟ್ರೀಯ ಪುನರುತ್ಥಾನದಲ್ಲಿ ಗೀತೆಯ ಸಂದೇಶದ ಪಾತ್ರ ನಿರ್ಣಯಕವಾದುದಾಗಿದೆ. ಭಾರತದಲ್ಲಿ ಅದಕ್ಕೆ ಪವಿತ್ರ ಸ್ಥಾನ ನೀಡಲಾಗಿದೆ. ಜಾಗತಿಕ ಸಾಹಿತ್ಯದಲ್ಲಿ ಅದಕ್ಕೆ ಉನ್ನತ ಸ್ಥಾನವಿದೆ. ಬೈಬಲ್ಲಿಗೆ ಸಮನಾದ ಕೃತಿ ಗೀತೆ.

## 40.5 ಮಹಾಕಾವ್ಯಗಳ ಐತಿಹಾಸಿಕ ಮಹತ್ವ

ರಾಮಾಯಣ ಮತ್ತು ಮಹಾಭಾರತ ಇವೆರಡೂ ಭಾರತದ ಮಹತ್ವದ ಪವಿತ್ರ ಕಾವ್ಯಗಳು. ಭಾರತೀಯ ಜೀವನದ ಮೇಲೆ ಇವೆರಡೂ ಮಹಾಕಾವ್ಯಗಳು ಉಂಟು ಮಾಡಿರುವ ಪರಿಣಾಮ-ಪ್ರಭಾವವನ್ನು ಮತ್ತಾವುದೇ ಸಾಹಿತ್ಯ ಕೃತಿ-ಲೌಕಿಕ ಕೃತಿ ಉಂಟು ಮಾಡಿಲ್ಲ. ಇವೆರಡೂ ಮಹಾಕಾವ್ಯಗಳು ಚರಿತ್ರೆಯ ವಿದ್ಯಾರ್ಥಿಗಳಿಗೆ ತುಂಬಾ ಮಹತ್ವದ್ದಾಗಿದೆ. ಮಹಾಕಾವ್ಯಗಳ ಕಾಲದ

ರಾಜಕೀಯ ಸಂಸ್ಥೆಗಳ ಬಗ್ಗೆ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘಟನೆ ಬಗ್ಗೆ ಅವು ಅಮೂಲ್ಯವಾದ ಮಾಹಿತಿಯನ್ನು ಒದಗಿಸುವ ಆಕರಗಳಾಗಿವೆ. ರಾಮಾಯಣ ಕಾವ್ಯವು ದಕ್ಷಿಣ ಭಾರತದ ಆರ್ಯೀಕರಣ ಪ್ರಕ್ರಿಯೆಯ ಚರಿತ್ರೆಯನ್ನು ಹೇಳುತ್ತದೆ. ಆರ್ಯರ ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ಧಾರ್ಮಿಕ ಭಾವನೆಯಿಂದ ಹಾಗೂ ಸೈನ್ಯದ ನೆರವಿನಿಂದ ದಕ್ಷಿಣ ಭಾರತದಲ್ಲಿ ನೆಲೆಗೊಳಿಸಲಾಯಿತು. ಆರ್ಯೇತರನಾಡನ್ನು, ಆರ್ಯೇತರರನ್ನು ಆರ್ಯೀಕರಣಕ್ಕೆ ಒಳಪಡಿಸುವ ದಿಶೆಯಲ್ಲಿ ಆರ್ಯರು ಉಗ್ರ ಧಾರ್ಮಿಕ ಮನೋಭಾವದಿಂದ, ಸೈನಿಕ ನೆರವಿನಿಂದ, ವೀರಾವೇಶದಿಂದ, ಯಾವುದೇ ವಿರೋಧವನ್ನು ಲೆಕ್ಕಿಸದೆ ಸತತ ಪ್ರಯತ್ನ ನಡೆಸಿದರು. ಈ ಕೃತಿಯು ಆರ್ಯೇತರರ ಭೌತಿಕ ಪ್ರಗತಿ, ಉನ್ನತ ನೈತಿಕ ಗುಣಗಳನ್ನು ವಿವರವಾಗಿ ವರ್ಣಿಸಿದೆ. ರಾವಣನ ರಾಜ್ಯವಾದ ಲಂಕೆಯ ಲೌಕಿಕ ಶ್ರೀಮಂತಿಕೆ ಹಾಗೂ ದಕ್ಷಿಣ ಆರ್ಯಾವರ್ತದ ಭೌತಿಕ ಪ್ರಗತಿಯು ಯಾವುದೇ ದೃಷ್ಟಿಯಿಂದ ಆರ್ಯರಿಗಿಂತ ಕಡಿಮೆಯಿರಲಿಲ್ಲ.

ಮಹಾಭಾರತವು ತನ್ನ ಕಾಲದ ಭಾರತದ ಚರಿತ್ರೆಯ ಮುಖ್ಯ ಲಕ್ಷಣಗಳನ್ನು ವಿವರಿಸುತ್ತದೆ. ಹೀಗೆ ಸಣ್ಣ ಪುಟ್ಟ ಸಾಮ್ರಾಜ್ಯಗಳು ಸಾರ್ವಭೌಮತ್ವಕ್ಕಾಗಿ ಹೇಗೆ ಹೋರಾಟ ನಡೆಸಿದವು ಮತ್ತು ಮಹಾ ಸಾಮ್ರಾಜ್ಯ ಹೇಗೆ ವಿಕಾಸ ಹೊಂದಿತು ಎಂಬ ಸಂಗತಿಯನ್ನು ಮಹಾಭಾರತ ಕಾವ್ಯವು ತಿಳಿಸುತ್ತದೆ. ಮಹಾಭಾರತವು ದುಷ್ಟ ಮತ್ತು ಶಿಷ್ಟ ಶಕ್ತಿಗಳ ನಡುವಿನ ಯುದ್ಧವನ್ನು ಚಿತ್ರಿಸುತ್ತದೆ. ಮಹಾಯುದ್ಧದಲ್ಲಿ ಶಿಷ್ಟಶಕ್ತಿ-ಧರ್ಮ ಹೇಗೆ ಜಯವನ್ನು ಸಾಧಿಸಿಕೊಂಡಿತು ಎಂಬುದನ್ನು ವಿವರಿಸುತ್ತದೆ.

ಇವೆರಡೂ ಮಹಾಕಾವ್ಯಗಳು ಭಾರತದ ನಿಜ ಚರಿತ್ರೆಯನ್ನು ತಿಳಿಸುವ ಆಕರಗಳಾಗಿವೆ. ಅವು ರಾಜಕೀಯ ಚರಿತ್ರೆಯನ್ನು ತಿಳಿಸುವುದಿಲ್ಲ. ಆದರೆ ಜನರ ಹಾಗೂ ರಾಷ್ಟ್ರದ ಆಸೆ ಆಕಾಂಕ್ಷೆಗಳು, ಪ್ರಯತ್ನ ಗುರಿಗಳ ಬಗ್ಗೆ ಅದು ವಿವರಗಳನ್ನೊದಗಿಸುತ್ತದೆ. ಅವು ವಿಶ್ವಕೋಶ ಸದೃಶ್ಯವಾಗಿವೆ. ಭಾರತದ ವಿಸ್ತೀರ್ಣದ ಬಹುಭಾಗವನ್ನು ಇವು ಒಳಗೊಂಡಿವೆ.

### 40.5.1 *ಸಾಹಿತ್ಯಿಕ ಮತ್ತು ತಾತ್ವಿಕ ಮಹತ್ವ*

ಚಾರಿತ್ರಿಕ ಮಹತ್ವದ ಜೊತೆಗೆ ಇವೆರಡೂ ಮಹಾಕಾವ್ಯಗಳು ಸಾಹಿತ್ಯಿಕ ಮತ್ತು ತತ್ವಶಾಸ್ತ್ರೀಯ ಮಹತ್ವವನ್ನು ಪಡೆದಿವೆ. ಅವು ಭಾರತೀಯ ಸಾಹಿತ್ಯದ ಅತ್ಯುತ್ತಮ ನಮೂನೆಗಳಾಗಿವೆ. ವಿಶ್ವದ ಮಹಾಕಾವ್ಯಗಳಲ್ಲಿ ಮಹಾಭಾರತವು ಮಹೋನ್ನತವೆಂಬ ಕೀರ್ತಿಗೆ ಭಾಜನವಾಗಿದೆ. ಧಾರ್ಮಿಕ ಹಾಗೂ ಲೌಕಿಕ -ಎರಡೂ ಬಗೆಯ ಭಾರತೀಯತೆಯ ನಿಜವಾದ ನಿಕ್ಷೇಪ ಇವೆರಡೂ ಮಹಾಕಾವ್ಯಗಳಾಗಿವೆ. ಇವೆರಡೂ ಮಹಾಕಾವ್ಯಗಳು ಶ್ರೀಮಂತ ಭಾಷೆಯಲ್ಲಿ ಜನರ ಭಾವನೆಗಳನ್ನು, ಪ್ರಸಂಗಗಳನ್ನು, ಪುರಾಣವನ್ನು, ತತ್ವಜ್ಞಾನವನ್ನು ವರ್ಣಿಸುತ್ತವೆ. ಇವೆರಡೂ ಮಹಾಕಾವ್ಯಗಳು ಆಧುನಿಕ ಭಾರತೀಯ ಭಾಷೆಗಳಲ್ಲಿ ರಚಿತಗೊಂಡ ಅನೇಕ ಸಾಹಿತ್ಯ ಕೃತಿಗಳಿಗೆ ಕಥಾವಸ್ತುವನ್ನು ಒದಗಿಸಿಕೊಟ್ಟಿವೆ. ಆಧುನಿಕ ಭಾರತೀಯ ಭಾಷೆಗಳ ವಿಕಾಸ ಮತ್ತು ವಿನ್ಯಾಸವನ್ನು ಅವು ರೂಪಿಸಿವೆ.

### 40.5.2 *ನೈತಿಕ ಮತ್ತು ಸಾಂಸ್ಕೃತಿಕ ಮಹತ್ವ*

ಚಾರಿತ್ರಿಕ ಮತ್ತು ಸಾಹಿತ್ಯಿಕ ಮಹತ್ವವಲ್ಲದೆ ಇವೆರಡೂ ಮಹಾಕಾವ್ಯಗಳು ಎಲ್ಲ ಬಗೆಯ ವಿಷಯಗಳನ್ನು ತುಂಬಿಕೊಂಡಿರುವ ಅಕ್ಷಯ ಪಾತ್ರೆಯೋಪಾದಿಯ ಮಹಾಭಂಡಾರಗಳಾಗಿವೆ. ಅವು ನೈತಿಕತೆಯ ಹಾಗೂ ಕಾನೂನುಗಳ ಕೈಪಿಡಿಗಳಾಗಿವೆ. ಭಾರತೀಯ ಚಿಂತನೆ ಮತ್ತು ಪರಂಪರೆಯಲ್ಲಿ ಆಳವಾಗಿ ಬೇರೂರಿರುವ ಕೌಟುಂಬಿಕ ಜೀವನದ ಮೌಲ್ಯ-ಆದರ್ಶಗಳನ್ನು ಅವು ಪ್ರತಿನಿಧಿಸುತ್ತವೆ. ಈ ಕಾವ್ಯಗಳಲ್ಲಿನ ಪಾತ್ರಗಳು ತಲೆತಲಾಂತರಗಳಿಂದ ಹಿಂದೂಗಳಿಗೆ ನೈತಿಕ ನಿದರ್ಶನಗಳಾಗಿ ಪಾತ್ರ ನಿರ್ವಹಿಸುತ್ತಿವೆ. ಶ್ರೀರಾಮನನ್ನು ಇಂದಿಗೂ ಪಿತೃವಾಕ್ಯಪರಿಪಾಲಕ ಮಗನಾಗಿ, ವಾತ್ಸಲ್ಯಮಯಿ

ಸಹೋದರನಾಗಿ, ಪ್ರೀತಿಯ ಪತಿಯಾಗಿ, ಉಗ್ರ ಹಾಗೂ ಅವಿಶ್ರಾಂತ ನಾಯಕನಾಗಿ ಮತ್ತು ಆದರ್ಶ ಚಕ್ರವರ್ತಿಯಾಗಿ ಪರಿಗಣಿಸಲಾಗಿದೆ. ಅವನು ತನ್ನ ಪ್ರಜೆಗಳ ಕಲ್ಯಾಣವನ್ನು ತನ್ನ ಸ್ವಂತ ಹಿತಾಸಕ್ತಿಗಿಂತ ಉನ್ನತವಾದುದು ಮತ್ತು ಮುಖ್ಯವಾದುದು ಎಂದು ಪರಿಗಣಿಸಿದ್ದನು. ಪಾವಿತ್ರತೆ ಹಾಗೂ ಪಾತಿವ್ರತ್ಯಗಳಿಗೆ ಭಾರತೀಯ ನಾರಿಗೆ ಇಂದಿಗೂ ಆದರ್ಶನಾರಿಯೆಂದು ಅಂದರೆ ಸೀತೆ. ಆಕೆಯ ಪಾತಿವ್ರತ್ಯ, ರಾಮನ ಬಗೆಗಿನ ಅವಳ ಮಹಾಭಕ್ತಿ, ಪ್ರೀತಿಗಳು ಇಂದಿಗೂ ತಮ್ಮ ಜೀವನದಲ್ಲಿ ಭಾರತೀಯ ಮಹಿಳೆಯರು ಸಾಧಿಸಿಕೊಳ್ಳಬೇಕಾದ ಆದರ್ಶಗಳಾಗಿ ಉಳಿದುಕೊಂಡಿವೆ. ಲಕ್ಷ್ಮಣನನ್ನು ಇಂದಿಗೂ ಪ್ರೀತಿಪಾತ್ರನಾದ ಸಹೋದರನಿಗೆ ಆದರ್ಶವಾಗಿ ಪರಿಗಣಿಸಲಾಗಿದೆ. ಇದೇ ರೀತಿ ಯುದಿಷ್ಠಿರನನ್ನು ಸತ್ಯದ ಪ್ರತಿಮೂರ್ತಿಯಾಗಿ, ನೀತಿ ಮೌಲ್ಯಗಳ ಉಗ್ರ ಉಪಾಸಕನಾಗಿ ನೋಡಲಾಗುತ್ತಿದೆ. ಪಾಂಡವ ಸಹೋದರರನ್ನು ಸಹೋದರತ್ವದ ಸಂಕೇತವಾಗಿ ಪರಿಗಣಿಸಲಾಗಿದೆ. ಅರ್ಜುನ ಮತ್ತು ದ್ರೌಪದಿಯರು ಭಾರತೀಯ ಸಂಸ್ಕೃತಿಯ ಅತ್ಯುತ್ತಮ ಹಾಗೂ ಉನ್ನತ ಗುಣಗಳ ಸಂಕೇತಗಳಾಗಿದ್ದಾರೆ. ಸತ್ಯದ ಮಹಾಪ್ರತಿಪಾದಕನಾದ ಭೀಷ್ಮನನ್ನು ನಾವು ಅಲ್ಲಿ ನೋಡಬಹುದು. ಕರ್ತವ್ಯಪ್ರಜ್ಞೆ, ಪೌರುಷ ಹಾಗೂ ಪುತ್ರ ವಾತ್ಸಲ್ಯಕ್ಕೆ ಅವನು ಹೆಸರಾಗಿದ್ದನು. ಶ್ರೀಕೃಷ್ಣನನ್ನು ವಿಷ್ಣುವಿನ ಅವತಾರವೆಂದು ಪರಿಗಣಿಸಲಾಗಿದೆ. ಪರಾಕ್ರಮದ ಪ್ರತಿಮೂರ್ತಿಯೂ, ಉನ್ನತ ತವಜ್ಞಾನದ ಮೂಲಾಧಾರವೂ ಮತ್ತು ರಾಜಕೀಯ ಮುತ್ಸದ್ದಿತನಕ್ಕೆ ಹೆಸರಾದ ಶ್ರೀ ಕೃಷ್ಣನು ಅಲ್ಲಿದ್ದಾನೆ. ಚೈತನ್ಯದ ಬುಗ್ಗೆಯಾದ, ಸದ್ಗುಣಗಳ ಗಣಿಯಾಗಿದ್ದ, ಪ್ರತಿಭಟನೆಯ ಜ್ವಾಲಾಮುಖಿಯಾಗಿದ್ದ ದ್ರೌಪದಿ ಇಲ್ಲಿದ್ದಾಳೆ. ಇವರಿಬ್ಬರು ಪ್ರತಿನಿಧಿಸಿದ್ದ ಆದರ್ಶಗಳು ಪ್ರಾಚೀನ ಭಾರತಕ್ಕೆ ಗೌರವ ತಂದುಕೊಟ್ಟಿವೆ. ಶತಶತಮಾನಗಳಿಂದ ಭಾರತೀಯರು ದೈನಂದಿನ ಕಷ್ಟಕೋಟಲೆಗಳಿಂದ, ದುಃಖಿದುಮ್ಮಾನಗಳಿಂದ ಶಮನ ಹಾಗೂ ಶಾಂತಿಯನ್ನು ಮಹಾಕಾವ್ಯಗಳಿಂದ ಪಡೆದುಕೊಳ್ಳುತ್ತಿದ್ದಾರೆ. ಈ ದೃಷ್ಟಿಯಿಂದ ಅವು ರಾಷ್ಟ್ರೀಯ ಆಸ್ತಿಯಾಗಿ ಪರಿಣಮಿಸಿವೆ. ಸಹಸ್ರಾರು ವರ್ಷಗಳಿಂದ ಅನೈಕ್ಯತೆ, ದಾರಿದ್ರ್ಯ, ಕಲಹಗಳ ನಡುವೆ ಐಕ್ಯತೆ ಮತ್ತು ಭ್ರಾತೃತ್ವದ ಪರಂಪರೆಯನ್ನು ಅವು ಉಳಿಸಿಕೊಂಡು ಬಂದಿವೆ. ಅವು ಭಾರತೀಯರ ಸುಭದ್ರತೆಯ ಆಕರಗಳಾಗಿವೆ. ಅವುಗಳಿಂದ ಭಾರತೀಯರು ಸ್ಫೂರ್ತಿಯನ್ನು ಪಡೆದುಕೊಳ್ಳುತ್ತಾ ಬಂದಿದ್ದಾರೆ. ಅವುಗಳಿಂದ ರಾಜಕೀಯ, ಸಾಮಾಜಿಕ, ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಬದುಕಿಗೆ ಶ್ರೀಮಂತಿಕೆ ಬಂದಿದೆ. ಇವೆರಡೂ ಮಹಾಕಾವ್ಯಗಳ ಸಂದೇಶವು ಜನರ ಮನಸ್ಸನ್ನು ಉನ್ನತಮಟ್ಟಕ್ಕೊಯ್ದಿದೆ ಮತ್ತು ಸದಾ ಚೈತನ್ಯಶೀಲವನ್ನಾಗಿ ಮಾಡಿವೆ.

## 40.6 ಮಹಾಕಾವ್ಯಗಳ ಕಾಲದ ಸ್ಥಿತಿಗತಿಗಳು

ಮಹಾಕಾವ್ಯಗಳ ಕಾಲದಲ್ಲಿದ್ದ ಹಿಂದೂಗಳ ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಜೀವನವು ವೈದಿಕ ಕಾಲದಲ್ಲಿದ್ದುದಕ್ಕಿಂತ ಭಿನ್ನವಾಗಿತ್ತು. ಅವುಗಳ ಸಂಕ್ಷಿಪ್ತ ಸಮೀಕ್ಷೆಯನ್ನು ಇಲ್ಲಿ ನೀಡಲಾಗಿದೆ.

### *40.6.1 ರಾಜಕೀಯ ಸ್ಥಿತಿಗತಿಗಳು*

ಮಹಾಕಾವ್ಯಗಳ ಕಾಲದಲ್ಲಿದ್ದ ಹಿಂದೂಗಳ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು ವೈದಿಕ ಕಾಲದಲ್ಲಿದ್ದುದಕ್ಕಿಂತ ಭಿನ್ನವಾಗಿದ್ದವು. ಮಗಧ ಮತ್ತು ಅಂಗ ಸಾಮ್ರಾಜ್ಯಗಳ ಬಗೆಗಿನ ಉಲ್ಲೇಖದ ಆಧಾರದ ಮೇಲೆ ಆರ್ಯರು ಪೂರ್ವಭಾಗಕ್ಕೆ ತಮ್ಮ ನಾಡನ್ನು ವಿಸ್ತರಿಸಿಕೊಂಡಿದ್ದರೆಂಬುದು ತಿಳಿಯುತ್ತದೆ. ಆರ್ಯರು ಅತ್ಯಂತ ಪ್ರಬಲವಾದ ಪಾಂಚಾಲ, ಕಾಶಿ, ಕೋಶಲ ಮುಂತಾದ ಸಾಮ್ರಾಜ್ಯಗಳನ್ನು ಕಟ್ಟಿಕೊಂಡಿದ್ದರು. ಉತ್ತರ ವೈದಿಕ ಕಾಲಾವಧಿಯಲ್ಲಿ ಅನೇಕ ರಾಜಕೀಯ ಬದಲಾವಣೆಗಳು ಸಂಭವಿಸಿದವು. ವೇದಗಳ ಕಾಲದ ಸಣ್ಣಪುಟ್ಟ ಬುಡಕಟ್ಟು ಸಾಮ್ರಾಜ್ಯಗಳು ಮರೆಯಾಗಿಬಿಟ್ಟವು. ಅವುಗಳ ಸ್ಥಳಗಳಲ್ಲಿ ಪ್ರಬಲವಾದ ಸಾಮ್ರಾಜ್ಯಗಳು ಅಸ್ತಿತ್ವಕ್ಕೆ

ಬಂದವು. ರಾಮಾಯಣ ಮಹಾಕಾವ್ಯಗಳಲ್ಲಿ ಕಾಶಿ, ಕೋಶಲ ಮತ್ತು ವಿದೇಹ ಸಾಮ್ರಾಜ್ಯಗಳು ಅಸ್ತಿತ್ವಕ್ಕೆ ಬಂದವು. ರಾಮಾಯಣ ಮಹಾಕಾವ್ಯಗಳಲ್ಲಿ ಕಾಶಿ, ಕೋಶಲ ಮತ್ತು ವಿದೇಹ ಸಾಮ್ರಾಜ್ಯಗಳು ಪ್ರಮುಖ ಸ್ಥಾನವನ್ನು ಪಡೆದುಕೊಂಡಿದ್ದವು. ಕಾಶಿಯನ್ನು ಬ್ರಹ್ಮದತ್ತ ಮನೆತನದ ರಾಜರು ಆಳುತ್ತಿದ್ದರು. ಇಕ್ಷ್ವಾಕು ಮನೆತನದವರು ಕೋಶಲವನ್ನು ಆಳುತ್ತಿದ್ದರು. ಜನಕ ಚಕ್ರವರ್ತಿಯ ಮನೆತನದವರು ವಿದೇಹವನ್ನು ಆಳುತ್ತಿದ್ದರು. ಇಲ್ಲಿಯವರೆವಿಗೂ ಕಾಣದಿದ್ದ ಪ್ರದೇಶದವರೆಗೆ ಆರ್ಯರ ರಾಜಕೀಯ ಗಡಿಯು ವಿಸ್ತರಿಸಿತು. ಜಾಗತಿಕ ಸ್ವರೂಪವನ್ನು ಅವರ ನಾಗರೀಕತೆ ಪಡೆದುಕೊಂಡುಬಿಟ್ಟಿತು. ಬ್ರಾಹ್ಮಣಗಳಲ್ಲಿ ಉಲ್ಲೇಖಿಸಿದ್ದ ಸಾಮ್ರಾಟ ಸಾಮ್ರಾಜ್ಯ ಎಂಬ ನುಡಿಗಳು ಮಹಾಕಾವ್ಯಗಳ ಕಾಲದಲ್ಲಿ ಸ್ಪಷ್ಟರೂಪ ಪಡೆದುಕೊಂಡವು. ಸಣ್ಣಪುಟ್ಟ ರಾಜರು ಗಳನ್ನು ಸೋಲಿಸಿದ ಚಕ್ರವರ್ತಿಯನ್ನು ಸಾಮ್ರಾಟನೆಂದು ಕರೆಯಲಾಗುತ್ತಿತ್ತು. ದಿಗ್ವಿಜಯ ಅಥವಾ ಸಿಮೋಲ್ಲಂಘನೆಯು ರಾಜಕೀಯ ಸಾರ್ವಭೌಮತ್ವದ ಸೂಚಿಯಾಗಿತ್ತು. ಸಾಮ್ರಾಜ್ಯಗಳನ್ನು ಅತಿಕ್ರಮಣ ಮಾಡಿಕೊಳ್ಳಲೇ ಬೇಕೆಂದಿರಲಿಲ್ಲ. ಸೋತ ರಾಜನು ಗೆದ್ದ ರಾಜನ ಸಾರ್ವಭೌಮತ್ವವನ್ನು ಒಪ್ಪಿಕೊಂಡರೆ ಸಾಕಾಗಿತ್ತು. ಸಾಮ್ರಾಟನೆಂಬ ಕೀರ್ತಿಗೆ ಪಾತ್ರನಾಗಬೇಕಾದರೆ ರಾಜರಿಗೆ ಪ್ರತಿಷ್ಠೆ ಮತ್ತು ಶಕ್ತಿಯ ಮೂಲವಾಗಿದ್ದ ರಾಜಸೂಯ ಅಶ್ವಮೇಧ ಯಾಗಗಳನ್ನು ಮಾಡಬೇಕಾಗಿತ್ತು. ಸಾಮಂತ ಅರಸರು ಇಂತಹ ಸಂದರ್ಭದಲ್ಲಿ ಭಾಗವಹಿಸಿ ತನ್ನ ಕಾಣಿಕೆಯನ್ನು ಸಾಮ್ರಾಟನಿಗೆ ಸಲ್ಲಿಸಬೇಕಾಗಿತ್ತು. ಮಧ್ಯಯುಗದಲ್ಲಿ ಭಾರತದ ರಾಜಕೀಯ ಹಾಗೂ ಸರ್ಕಾರದ ಮಟ್ಟದಲ್ಲಿ ಊಳಿಗಮಾನ್ಯ ಪದ್ಧತಿಯು ಮಹತ್ವದ ಪಾತ್ರನಿರ್ವಹಿಸಿದ್ದನ್ನು ಮಹಾಕಾವ್ಯಗಳು ಸಿದ್ಧಮಾಡಿ ತೋರಿಸುತ್ತವೆ.

ಸಾಮ್ರಾಜ್ಯದ ಎಲ್ಲ ಅಧಿಕಾರಿಗಳೂ ಸಾಮ್ರಾಟನ ವಶದಲ್ಲಿರುತ್ತಿದ್ದವು. ತಾತ್ವಿಕವಾಗಿ ಅವನು ಸರ್ವಾಧಿಕಾರಿ. ಆದರೆ ಆಚರಣೆಯಲ್ಲಿ ಅವನಿಗೆ ಸಾರ್ವಭೌಮ ಅಧಿಕಾರಗಳಿರಲಿಲ್ಲ. ಅವನು ಕಲ್ಯಾಣವಾದಿ ಸಾಮ್ರಾಟನಾಗಿದ್ದ. ಅವನು ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಬೇಕಾಗಿತ್ತು. ಜನರನ್ನು ರಕ್ಷಿಸಬೇಕಾಗಿತ್ತು. ದುಷ್ಟರನ್ನು ಶಿಕ್ಷಿಸಬೇಕಾಗಿತ್ತು. ಜನರ ಕಲ್ಯಾಣಕ್ಕಾಗಿ ಮತ್ತು ಸಾಮ್ರಾಜ್ಯದ ಹಿತಕ್ಕಾಗಿ ಅವನು ದುಡಿಯಬೇಕಾಗಿತ್ತು. ಅವನಿಗೆ ಸಲಹೆ ಮಾರ್ಗದರ್ಶನ ನೀಡಲು ಮಂತ್ರಿ ಮಂಡಲವಿರುತ್ತಿತ್ತು. ಇದರಿಂದ ಆಡಳಿತ ಸುಸೂತ್ರವಾಗಿ ನಡೆಯುತ್ತಿತ್ತು. ರಾಜನ ಅಧಿಕಾರವನ್ನು ನಿಯಂತ್ರಿಸಲು ಅಲ್ಲಿ ಸಭಾ-ಸಮಿತಿ ಎಂಬ ಸಂಸ್ಥೆಗಳಿರಲಿಲ್ಲ. ಆಡಳಿತ ಜವಬ್ದಾರಿ ನಿರ್ವಹಿಸಲು ಅಪಾರ ಸಂಖ್ಯೆಯ ಕೆಳದರ್ಜೆ ಅಧಿಕಾರಗಳಿರುತ್ತಿದ್ದರು. ಮಹಾಕಾವ್ಯಗಳ ಕಾಲದ ರಾಜರು ವೈಭವದ ಮತ್ತು ಆಡಂಬರದ ಜೀವನ ನಡೆಸುತ್ತಿದ್ದರು. ಜೂಜು, ಸಂಗೀತ, ಬೇಟೆ, ಕುಸ್ತಿ, ಮದ್ಯಸೇವನೆ ಮುಂತಾದವು ರಾಜನ ಸಾಮಾನ್ಯ ಹವ್ಯಾಸಗಳಾಗಿದ್ದವು. ಪಟ್ಟಾಧಿಕಾರವು ವಂಶಪಾರಂಪರ್ಯವಾಗಿತ್ತು. ತಂದೆಯ ಮರಣದ ನಂತರ ಹಿರಿಯ ಮಗನು ಪಟ್ಟಕ್ಕೆ ಏರುತ್ತಿದ್ದನು. ಕೆಲವು ಸಂದರ್ಭದಲ್ಲಿ ರಾಜನು ಸ್ವಇಚ್ಛೆಯಿಂದ ನನ್ನ ಹಿರಿಯ ಮಗನು ಪಟ್ಟಕ್ಕೆ ಏರುತ್ತಿದ್ದನು. ಕೆಲವು ಸಂದರ್ಭದಲ್ಲಿ ರಾಜನು ಸ್ವ ಇಚ್ಛೆಯಿಂದ ನನ್ನ ಹಿರಿಯ ಮಗನಿಗೆ ಸಿಂಹಾಸನವನ್ನು ಬಿಟ್ಟುಕೊಡುತ್ತಿದ್ದನು. ಹಿರಿಯ ಮಗನು ಅಂಗವಿಕಲ ಅಥವಾ ಬುದ್ಧಿಮಾಂದ್ಯನಾಗಿದ್ದ ಸಂದರ್ಭದಲ್ಲಿ ಮಾತ್ರ ಹಿರಿಯ ಮಗನಿಗೆ ಪಟ್ಟಾಧಿಕಾರ ಮಾಡುವ ಪದ್ಧತಿಯಲ್ಲಿ ವ್ಯತ್ಯಯವಾಗುತ್ತಿತ್ತು. ಧೃತರಾಷ್ಟ್ರನು ಹಿರಿಯನಾಗಿದ್ದರೂ, ಅವನು ಕುರುಡನಾಗಿದ್ದುದರಿಂದ ತಮ್ಮ ಪಾಂಡುವು ಚಕ್ರವರ್ತಿಯಾಗಿದ್ದ. ರಾಜವ್ಯವಸ್ಥೆಯ ಜೊತೆ ಅಂದು ಗಣರಾಜ್ಯ ವ್ಯವಸ್ಥೆಯೂ ಅಸ್ತಿತ್ವದಲ್ಲಿತ್ತು. ಮಹಾಭಾರತದ ಕಾಲದಲ್ಲಿ ಗಣರಾಜ್ಯಗಳಿದ್ದವು. ಕೆಲವು ಸಂದರ್ಭದಲ್ಲಿ ಅನೇಕ ಗಣರಾಜ್ಯಗಳು ಸೇರಿ ಒಕ್ಕೂಟವನ್ನು - ಸಂಘವನ್ನು ಮಾಡಿಕೊಳ್ಳುತ್ತಿದ್ದವು. ಗ್ರಾಮಗಳಿಗೆ ಸ್ವಾಯತ್ತ ಅಧಿಕಾರವಿತ್ತು. ಪ್ರತಿಯೊಂದು ಹಳ್ಳಿಗೂ ಒಂದು ಅಧಿಕಾರಗಳ ಮಂಡಳಿಯಿರುತ್ತಿತ್ತು. ಹಳ್ಳಿಯ ಮುಖ್ಯಸ್ಥನನ್ನು ಗ್ರಾಮಿಣಿಯೆಂದು ಕರೆಯಲಾಗುತ್ತಿತ್ತು.

ಮಹಾಕಾವ್ಯಗಳ ಕಾಲದಲ್ಲಿ ಯುದ್ಧ - ಕದನಗಳು ರಾಜಕೀಯ ಜೀವನದ ಅವಿಭಾಜ್ಯ ಅಂಗಗಳಾಗಿದ್ದವು. ಶಸ್ತ್ರಸಜ್ಜಿತವಾದ, ಒಳ್ಳೆಯ ತರಬೇತಿ ಪಡೆದ, ಸಮರ್ಥವಾದ ಸೈನ್ಯವು ಸಾಮ್ರಾಜ್ಯಕ್ಕೆ ಆಸ್ತಿಯಾಗಿತ್ತು. ಚಕ್ರವರ್ತಿಗಳ ಸೈನ್ಯದಲ್ಲಿ ಪದಾತಿದಳ, ಅಶ್ವದಳ, ಆನೆಗಳದಳ ಮತ್ತು ರಥಗಳು ಇರುತ್ತಿದ್ದವು. ಕವಣೆ ಬೀಸುವವರು ಮತ್ತು ಪರ್ವತಾರೋಹಿಗಳು ಸೈನ್ಯದಲ್ಲಿ ಇರುತ್ತಿದ್ದರು. ಸೈನಿಕರು ಬಿಲ್ಲು, ವಿಷಯುಕ್ತಬಾಣಗಳು, ಖಡ್ಗ, ಈಟಿ ಮತ್ತು ಯುದ್ಧಗೊಡಲಿಗಳನ್ನು ಬಳಸುತ್ತಿದ್ದರು. ಬಹುಶಃ ಬೆಂಕಿಯುಗುಳುವ ಶಸ್ತ್ರಗಳು ಅಥವಾ ಮಂತ್ರದಿಂದ ಚಾಲೂಮಾಡಬಹುದಾದ ಚಕ್ರದಂತಹ ಶಸ್ತ್ರಾಸ್ತ್ರಗಳು ಅಲ್ಲಿ ಇದ್ದಿರಬೇಕು. ರಾಜನು ಮತ್ತು ಅಧಿಕಾರಿಗಳು ರಥದ ಮೇಲಿನಿಂದ ಮತ್ತು ಆನೆಯ ಮೇಲೆ ಕುಳಿತುಕೊಂಡು ಯುದ್ಧ ಮಾಡಿದರೆ ಸಾಮಾನ್ಯ ಸೈನಿಕರು ನೆಲದ ಮೇಲೆ ಯುದ್ಧ ಮಾಡುತ್ತಿದ್ದರು. ಕ್ಷತ್ರಿಯರು ಹೆಚ್ಚಾಗಿ ಯುದ್ಧ ಮಾಡುತ್ತಿದ್ದರು. ಅವರುಗಳು ಯುದ್ಧ ಭೂಮಿಯಲ್ಲಿನ ಸಾವನ್ನು ಪವಿತ್ರವೆಂದು ಭಾವಿಸಿದ್ದರು. ದೇಶದ ಗಡಿಗಳ ರಕ್ಷಣೆಯನ್ನು ಅವರಿಗೆ ವಹಿಸಿಕೊಡಲಾಗುತ್ತಿತ್ತು.

### *40.6.2 ಸಾಮಾಜಿಕ ಸ್ಥಿತಿಗತಿಗಳು*

ಹಿಂದೂಗಳು ಧರಿಸುತ್ತಿದ್ದ ಉಡುಪಿನಲ್ಲಿ ಮೂರು ಭಾಗಗಳಿರುತ್ತಿದ್ದವು. ದೇಹದ ಮೇಲ್ಭಾಗವನ್ನು ಮುಚ್ಚುವ ನೀಳ ಬಟ್ಟೆ, ದೇಹದ ಕೆಳಭಾಗವನ್ನು ಮುಚ್ಚುವ ಮತ್ತೊಂದು ನೀಳ ಪಟ್ಟಿ ಮತ್ತು ತಲೆಮೇಲೊಂದು ಪೇಟ. ಪ್ಯಾಂಟು, ಶರ್ಟ್ ಮತ್ತು ಕೋಟುಗಳು ಅವರಿಗೆ ಪರಿಚಿತವಿರಲಿಲ್ಲ. ಬಹುಶಃ ಬಟ್ಟೆಯನ್ನು ವಿವಿಧ ವಿನ್ಯಾಸಕ್ಕೆ ಕತ್ತರಿಸುವ ಮತ್ತು ಹೊಲಿಯುವ ಕಲೆ ಅವರಿಗೆ ಗೊತ್ತಿರಲಿಕ್ಕಿಲ್ಲ. ಮಹಾಕಾವ್ಯ ಕಾಲದಲ್ಲಿ ಜನರು ಸರಳವಾದ, ಪ್ರಾಮಾಣಿಕವಾದ ಹಾಗೂ ಶುದ್ಧವಾದ ಜೀವನ ನಡೆಸುತ್ತಿದ್ದರು. ನೈತಿಕ ಮೌಲ್ಯಗಳು ಮತ್ತು ಸದ್ಗುಣಗಳಿಗೆ ಹೆಚ್ಚಿನ ಮಹತ್ವ ನೀಡಿದ್ದರು. ಪ್ರತಿದಿನವೂ ಅವರು ತಪ್ಪದಂತೆ ಸ್ನಾನ ಮತ್ತು ಪ್ರಾರ್ಥನೆ ಮಾಡುತ್ತಿದ್ದರು. ಜನರು ಧರ್ಮವನ್ನು ಆದರ್ಶ ರೀತಿಯಲ್ಲಿ ಪಾಲಿಸುತ್ತಿದ್ದರು. ಪರಹಿತಕ್ಕಾಗಿ ಜನರು ಬದುಕುತ್ತಿದ್ದರು. ಧರ್ಮವು ಮಾರ್ಗದರ್ಶಿ ಆದರ್ಶ ರೀತಿಯಲ್ಲಿ ಪಾಲಿಸುತ್ತಿದ್ದರು. ಪ್ರತಿಯೊಬ್ಬ ವ್ಯಕ್ತಿಯ ಮತ್ತು ಪ್ರತಿಯೊಂದು ಚಟುವಟಿಕೆಯ ಹಿಂದಿನ ಚಾಲಕ ಶಕ್ತಿಯಾಗಿ ಧರ್ಮ ಕೆಲಸ ಮಾಡುತ್ತಿತ್ತು. ಸಮಾಜದ ಗುರಿ ಧರ್ಮ, ನ್ಯಾಯ, ಕಾನೂನು ಮತ್ತು ನೀತಿಯನ್ನು ರಕ್ಷಿಸುವುದಾಗಿತ್ತು.

ಜನರ ಆಹಾರವು ಸರಳವಾಗಿತ್ತು. ವೈದಿಕ ಕಾಲದಲ್ಲಿದ್ದ ದಾಖಲೆಗಳಲ್ಲಿ ಉಲ್ಲೇಖಿತವಾಗಿದ್ದಂತೆ ಮಹಾಕಾವ್ಯಗಳ ಕಾಲದಲ್ಲಿ ಮದ್ಯ ಹಾಗೂ ಮಾಂಸ ಸೇವನೆಯನ್ನು ತಿರಸ್ಕರಿಸಲಾಗುತ್ತಿತ್ತು. ಸಸ್ಯಹಾರವು ಜನಪ್ರಿಯತೆಗಳಿಸಿಕೊಳ್ಳುತ್ತಿತ್ತು. ಜನರು ವನವಿಹಾರ ಮತ್ತು ವನಭೋಜನವನ್ನು ಹೆಚ್ಚು ಇಷ್ಟಪಡುತ್ತಿದ್ದರು. ಸಮಾಜದ ಉನ್ನತ ವರ್ಗದಲ್ಲಿ ಜೂಜು ಮತ್ತು ಪಗಡೆಯಾದಂತಹ ಸಾಮಾಜಿಕ ಪಿಡುಗು ವ್ಯಾಪಕವಾಗಿತ್ತು. ಈ ಮಹಾಕಾವ್ಯಗಳಲ್ಲಿ ಪ್ರಥಮ ಬಾರಿಗೆ ಮಾವಿನ ಹಣ್ಣಿನ ಉಲ್ಲೇಖ ಸಿಗುತ್ತದೆ.

ಯೋಜಿತ ರೀತಿ ನಿರ್ಮಾಣ ಮಾಡಿದ ಗ್ರಾಮಗಳಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಜನರು ವಾಸಿಸುತ್ತಿದ್ದರು. ಹಳ್ಳಿಗಳು ಮಣ್ಣಿನ ಗೋಡೆಯಿಂದ ಸುತ್ತುವರಿದಿದ್ದವು. ಅಲ್ಲಿ ನಗರಗಳು ಮತ್ತು ಪಟ್ಟಣಗಳು ಇದ್ದವು. ಪ್ರತಿಯೊಂದು ಹಳ್ಳಿಯಲ್ಲೂ ರಕ್ಷಣಾ ವ್ಯವಸ್ಥೆ ಇತ್ತು ಮತ್ತು ಶಸ್ತ್ರಾಗಾರಗಳಿರುತ್ತಿದ್ದವು. ಶಾಂತಿ ಮತ್ತು ಸಮೃದ್ಧತೆಯಿಂದ ಕೂಡಿದ್ದ ಪ್ರಸಕ್ತ ಯುಗದಲ್ಲಿ ಕಾಶಿ, ಮಗಧ, ಮಥುರಾ, ಹಸ್ತಿನಾಪುರ, ಪ್ರಯಾಗ ಮುಂತಾದ ನಗರಗಳು ಅಭಿವೃದ್ಧಿಹೊಂದಿದ್ದವು. ಪ್ರತಿಯೊಂದು ನಗರದಲ್ಲೂ ವೃತ್ತಿ ಸಂಘಗಳಿರುತ್ತಿದ್ದವು. ಪುರೋಹಿತವರ್ಗದ ನಂತರ ಬರುತ್ತಿದ್ದ ಪ್ರಭಾವಿ ವರ್ಗವೆಂದರೆ ವ್ಯಾಪಾರಿವರ್ಗ. ರಾಜನು ತೆರಿಗೆಗಳನ್ನು ವಿಧಿಸುತ್ತಿದ್ದ. ತೆರಿಗೆಗಳನ್ನು ವಸ್ತುಗಳ

ರೂಪದಲ್ಲಿ ಸಲ್ಲಿಸಲಾಗುತ್ತಿತ್ತು. ಗ್ರಾಮವು ಆರ್ಥಿಕ ವ್ಯವಸ್ಥೆಯ ಕೇಂದ್ರಬಿಂದುವಾಗಿತ್ತು. ಕಾಲಕ್ರಮೇಣ ನಗರ ಜೀವನವು ಪ್ರವರ್ಧಮಾನಕ್ಕೆ ಬಂತು ಮತ್ತು ಕೈಗಾರಿಕೆಗಳು ಮತ್ತು ವ್ಯಾಪಾರ ತೀವ್ರ ಬೆಳವಣಿಗೆ ಕಂಡವು. ಕೃಷಿ, ಕರಕುಶಲಕಲೆ ಮತ್ತು ಉದ್ದಿಮೆಗಳಿಗೆ ರಾಜನ ಪ್ರೋತ್ಸಾಹವಿತ್ತು. ವೇದದ ಕಾಲಕ್ಕೆ ಹೋಲಿಸಿದರೆ ಮಹಿಳೆಯರ ಸ್ಥಾನಮಾನವು ಕೆಳಮಟ್ಟಕ್ಕೆ ಇಳಿದಿದ್ದರೂ ಅವರಿಗೆ ಹೆಚ್ಚು ಗೌರವ ನೀಡಲಾಗಿತ್ತು. ಮದುವೆಯು ಪವಿತ್ರವಾದ ಒಂದು ಘಟನೆಯಾಗಿತ್ತು. ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು ಸಮಾಜದಲ್ಲಿ ಕೆಳಜಾತಿಯ ಮಹಿಳೆಯರನ್ನು ವಿವಾಹ ಮಾಡಿಕೊಳ್ಳಬಹುದಾಗಿತ್ತು. ಶೂದ್ರರಿಗೆ ಮಾತ್ರ ವೈಶ್ಯರು ಸಮಾಜದಲ್ಲಿ ಕೆಳಜಾತಿಯ ಮಹಿಳೆಯರನ್ನು ವಿವಾಹ ಮಾಡಿಕೊಳ್ಳಬಹುದಾಗಿತ್ತು. ಶೂದ್ರರಿಗೆ ಮಾತ್ರ ತಮ್ಮ ಜಾತಿಯ ಮಹಿಳೆಯರನ್ನು ವಿವಾಹವಾಗುವ ಅನುಮತಿ ನೀಡಲಾಗಿತ್ತು. ಬಾಲ್ಯ ವಿವಾಹವು ಆಚರಣೆಯಲ್ಲಿರಲಿಲ್ಲ. ವಯಸ್ಕರಾದ ಮೇಲೆ ಮಹಿಳೆಯರಿಗೆ ವಿವಾಹ ಮಾಡಲಾಗುತ್ತಿತ್ತು. ಕೆಲವೊಂದು ಸಂದರ್ಭಗಳಲ್ಲಿ ಸ್ವಯಂವರ ಸಮಾರಂಭದಲ್ಲಿ ಸೇರಿದ್ದ ರಾಜಕುಮಾರರಲ್ಲಿ ಯುವರಾಣಿಯು ತನಗೆ ಮೆಚ್ಚುಗೆಯಾದವನನ್ನು ವಿವಾಹವಾಗಬಹುದಿತ್ತು. ಬಹುಪತ್ನಿತ್ವವು ಆಚರಣೆಯಲ್ಲಿತ್ತು. ಉನ್ನತವರ್ಗದ ಮಹಿಳೆಯರು ಶಿಕ್ಷಿತರಾಗಿರುತ್ತಿದ್ದರು. ಅವರಿಗೆ ನೃತ್ಯ ಮತ್ತು ಸಂಗೀತದ ತರಬೇತಿ ದೊರೆಯುತ್ತಿತ್ತು. ಹೆಂಡತಿಯು ಗಂಡನೊಂದಿಗೆ ಎಲ್ಲ ಬಗೆಯ ಧಾರ್ಮಿಕ ಮತ್ತು ಸಾಮಾಜಿಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದಳು. ಮಹಿಳೆಯರು ಮುಕ್ತವಾಗಿ ಸಂಚರಿಸಬಹುದಿತ್ತು. ಮುಖದ ಮೇಲೆ ಮುಸುಕು ಹಾಕಿಕೊಳ್ಳುವ ಪದ್ಧತಿಯಿರಲಿಲ್ಲ. ವೇದದ ಕಾಲದಲ್ಲಿ ಇಲ್ಲದೆ ಇದ್ದ ಸತಿ ಪದ್ಧತಿಯು ಮಹಾಕಾವ್ಯಗಳ ಕಾಲದಲ್ಲಿ ಆಚರಣೆಯಲ್ಲಿತ್ತು.

ಮಹಾಕಾವ್ಯಗಳ ಕಾಲದಲ್ಲಿ ವಿದ್ವಾಂಸರು ಮತ್ತು ವಿದ್ಯಾರ್ಥಿಗಳಿಗೆ ಶಿಕ್ಷಣ ಒದಗಿಸುತ್ತಿದ್ದ ಪರಿಷತ್ತು ಎಂಬ ಸಂಸ್ಥೆಯ ಬಗ್ಗೆ ನಮಗೆ ಉಲ್ಲೇಖಗಳು ದೊರೆಯುತ್ತವೆ. ಬಾಲ್ಯದಲ್ಲಿಯೇ ಮಗುವನ್ನು ಗುರುಗಳ ಬಳಿ ಶಿಕ್ಷಣಕ್ಕಾಗಿ ಬಿಡಲಾಗುತ್ತಿತ್ತು. ಅಲ್ಲಿ ವಿದ್ಯಾರ್ಥಿಯು ಅನೇಕ ವರ್ಷಗಳ ಕಾಲ ಶಿಸ್ತಿನಿಂದ ಶಿಕ್ಷಣ ಕಲಿಯಬೇಕಾಗಿತ್ತು. ಕ್ಷತ್ರಿಯ ಯುವಕರಿಗೆ ಮತ್ತು ರಾಜ ಮನೆತನಕ್ಕೆ ಸೇರಿದ ರಾಜಕುಮಾರರಿಗೆ ಬಾಲ್ಯದಲ್ಲಿಯೇ ಶಸ್ತ್ರಾಸ್ತ್ರ ಪ್ರಯೋಗ, ಕಲೆ, ಬಿಲ್ಲು ಬಾಣ ಪ್ರಯೋಗ, ಖಡ್ಗಯುದ್ಧ ಮತ್ತು ಈಟಿ ಎಸೆಯುವುದರ ಬಗ್ಗೆ ತರಬೇತಿ ಶಿಕ್ಷಣ ಕೊಡಲಾಗುತ್ತಿತ್ತು. ವೇದಗಳ ಅಧ್ಯಯನ ಕಡ್ಡಾಯವಾಗಿತ್ತು. ಖಗೋಳಶಾಸ್ತ್ರ, ಜ್ಯಾಮಿತಿ, ಗಣಿತ, ಛಂದಶಾಸ್ತ್ರ, ಈಜುವುದು, ಜಿಗಿಯುವುದು ಮುಂತಾದ ವಿದ್ಯೆಗಳನ್ನು ಕಲಿಸಿಕೊಡಲಾಗುತ್ತಿತ್ತು. ಶಿಕ್ಷಣವನ್ನು ಹೇಗೆ ವ್ಯವಸ್ಥೆಗೊಳಿಸಲಾಗಿತ್ತೆಂದರೆ ಸಮಾಜದ ಪ್ರತಿಯೊಂದು ವರ್ಗಕ್ಕೂ ಅದರ ಬಗ್ಗೆ ಮಾಹಿತಿ ಇರುತ್ತಿತ್ತು ಮತ್ತು ಕರ್ತವ್ಯದ ಬಗ್ಗೆ ಅರಿವಿತ್ತು ಹಾಗೂ ತಮ್ಮ ಸ್ಥಾನವೇನು ಎಂಬುದರ ಬಗ್ಗೆ ತಿಳುವಳಿಕೆಯಿತ್ತು.

ಸಮಾಜವನ್ನು ನಾಲ್ಕು ವರ್ಣ-ಜಾತಿಗಳಲ್ಲಿ ವರ್ಗೀಕರಿಸಲಾಗಿತ್ತು. ವೇದಗಳ ಕಾಲದಲ್ಲಿದ್ದುದಕ್ಕಿಂತ ಇಲ್ಲಿ ಜಾತಿ ಪದ್ಧತಿಯು ತುಂಬಾ ಬಿಗಿಯಾದ ವ್ಯವಸ್ಥೆಯಾಗಿತ್ತು. ಈ ಕಾಲದಲ್ಲಿ ಬ್ರಾಹ್ಮಣರು ಉಳಿದೆಲ್ಲ ವರ್ಣಗಳಿಗಿಂತ ಉನ್ನತವಾದ ಸ್ಥಾನ ಪಡೆದಿದ್ದರು. ಜಾತಿ ವ್ಯವಸ್ಥೆಯ ಕಟ್ಟುಪಾಡಿಗಳು ತುಂಬಾ ಬಿಗಿಯಾಗಿದ್ದವು. ನಾಲ್ಕು ವರ್ಣಗಳಲ್ಲದೆ ಅನೇಕ ಮಿಶ್ರ ಜಾತಿಗಳು ಅಸ್ತಿತ್ವಕ್ಕೆ ಬಂದವು. ಶೂದ್ರ ಜಾತಿಗೆ ಸೇರಿದ್ದ ಏಕಲವ್ಯನಿಗೆ ದ್ರೋಣಾಚಾರ್ಯನು ವಿದ್ಯೆ ಕಲಿಸಲು ತಿರಸ್ಕರಿಸಿದ್ದುದು ಜಾತಿ ವ್ಯವಸ್ಥೆ ಎಷ್ಟು ಬಿಗಿಯಾಗಿತ್ತು ಎಂಬುದು ತಿಳಿಯುತ್ತದೆ.

ಈ ಯುಗದಲ್ಲಿ ಜೀವನದಲ್ಲಿ ಅನುಸರಿಸಬೇಕಾಗಿದ್ದ ನಾಲ್ಕು ಆಶ್ರಮಗಳ ಜೊತೆಗೆ ನಲವತ್ತು ಸಂಸ್ಕಾರಗಳು ಪ್ರಚಲಿತದಲ್ಲಿದ್ದವು. ಧರ್ಮಶಾಸ್ತ್ರಗಳು ಮತ್ತು ಸೂತ್ರಗಳು ನಾಲ್ಕು ಆಶ್ರಮ ವ್ಯವಸ್ಥೆಯ ಪೂರ್ಣವಿವರಗಳನ್ನು ಒಳಗೊಂಡಿದ್ದವು. ಈ ನಾಲ್ಕು ಆಶ್ರಮ ವ್ಯವಸ್ಥೆಯೆಂದರೆ ಬ್ರಹ್ಮಚರ್ಯಾಶ್ರಮ, ಗೃಹಸ್ಥಾಶ್ರಮ, ವಾನಪ್ರಸ್ಥಶ್ರಮ ಮತ್ತು ಸನ್ಯಾಸಾಶ್ರಮ. ಬ್ರಾಹ್ಮಣರು

ಮತ್ತು ಕ್ಷತ್ರಿಯರು ಎಲ್ಲ ಆಶ್ರಮಗಳಿಗೂ ಅರ್ಹರಾಗಿದ್ದರು. ವೈಶ್ಯರಿಗೆ ಬ್ರಹ್ಮಚರ್ಯ ಮತ್ತು ಗೃಹಸ್ಥಾಶ್ರಮಗಳಿಗೆ ಮಾತ್ರ ಪ್ರವೇಶವಿತ್ತು. ಶೂದ್ರರು ಗೃಹಸ್ಥಾಶ್ರಮಕ್ಕೆ ಮಾತ್ರ ಅರ್ಹರಾಗಿದ್ದರು. ನಾಲ್ಕು ವರ್ಣಗಳು ಮತ್ತು ಅನೇಕ ಜಾತಿಗಳು ಅಲ್ಲಿದ್ದವು. ಮಹಾಕಾವ್ಯಗಳಲ್ಲಿ ಜಾತಿಪದ್ಧತಿಯ ಕಟ್ಟು ಕಟ್ಟಳೆ ಬಗ್ಗೆ ನಮಗೆ ವಿವರ ದೊರೆಯುವುದಿಲ್ಲ. ಜಾತಿ ಸಂಬಂಧಿ ಮೂಢ ನಂಬಿಕೆಗಳಿರಲಿಲ್ಲ. ಜಾತಿ ವ್ಯವಸ್ಥೆಯು ಆಳವಾಗಿ ಮತ್ತು ದೃಢವಾಗಿ ನೆಲೆಗೊಂಡಿತ್ತು. ಮೂಲ ನಾಲ್ಕು ವರ್ಣಗಳ ಜೊತೆ ನೂರಾರು ಜಾತಿಗಳು ಮತ್ತು ಉಪಜಾತಿಗಳು ಹುಟ್ಟಿಕೊಂಡವು. ಬಹುಶಃ ಅಂತರ್‌ಜಾತಿ ವಿವಾಹ ಮತ್ತು ವಂಶಪಾರಂಪರ್ಯ ಕಸುಬುಗಳು ಉಪಜಾತಿಗಳ ಬೆಳವಣಿಗೆಗೆ ಕಾರಣವಾಗಿರಬೇಕು. ಉಪನಿಷತ್ತುಗಳಲ್ಲಿ ವಿರೋಧವಿದ್ದರೂ ಕೂಡ ಬ್ರಾಹ್ಮಣರಿಗೆ ಸರ್ವೋತ್ತಮ ಸ್ಥಾನಮಾನ ನೀಡಲಾಗಿತ್ತು. ಬ್ರಾಹ್ಮಣರಿಗೆ ಸಮಾಜದಲ್ಲಿ ಹೆಚ್ಚಿನ ಅಧಿಕಾರವಿತ್ತು. ರಾಜ ಅಥವಾ ಸಾಮ್ರಾಟನಿಗೆ ಸಲಹೆ ನೀಡಲು ಮತ್ತು ಮಾರ್ಗದರ್ಶನ ನೀಡಲು ಬ್ರಾಹ್ಮಣ ಸಚಿವರು ಇರುತ್ತಿದ್ದರು. ಕೆಲವೊಮ್ಮೆ ಬ್ರಾಹ್ಮಣ ಸಚಿವರೇ ರಾಜರಿಗೆ ಗುರುಗಳಾಗಿರುತ್ತಿದ್ದರು. ಅರಸರಾಗಲಿ ಅಥವಾ ಪ್ರಜೆಗಳಾಗಲಿ ಬ್ರಾಹ್ಮಣರಿಗೆ ತಲೆಬಾಗುತ್ತಿದ್ದರು. ಬ್ರಾಹ್ಮಣರ ಕೋಪವು ತಪ್ಪಿತಸ್ಥರನ್ನು ಸುಟ್ಟು ಬೂದಿ ಮಾಡುವ ಶಕ್ತಿ ಪಡೆದಿದೆ ಎಂಬ ನಂಬಿಕೆ ಇದಕ್ಕೆ ಕಾರಣವಾಗಿತ್ತು. ಕ್ಷತ್ರಿಯರು ಯುದ್ಧಭೂಮಿಯಲ್ಲಿ ಅಗ್ರಗಣ್ಯರಾಗಿದ್ದರು. ಯುದ್ಧ ಮಾಡುವುದು ಅವರ ವೃತ್ತಿಯಾಗಿತ್ತು. ವೈಶ್ಯರು, ಒಕ್ಕಲುತನ, ವ್ಯಾಪಾರ ಮತ್ತು ಇತರೆ ವೃತ್ತಿಗಳಲ್ಲಿ ನಿರತರಾಗಿದ್ದರು. ಶೂದ್ರರು ಕರಕುಶಲ ಕೆಲಸಗಳನ್ನು, ಶ್ರಮ ಕೆಲಸಗಳನ್ನು ಮತ್ತು ಕೀಳು ವೃತ್ತಿಗಳನ್ನು ಕೈಗೊಳ್ಳುತ್ತಿದ್ದರು.

### *40.6.3 ಧಾರ್ಮಿಕ ಸ್ಥಿತಿಗತಿಗಳು*

ವೇದಕಾಲದ ದೇವ ದೇವತೆಗಳು ಆಕರ್ಷಣೆಯನ್ನು ಮತ್ತು ಮಹತ್ವವನ್ನು ಮಹಾಕಾವ್ಯಗಳ ಕಾಲದಲ್ಲಿ ಕಳೆದುಕೊಂಡಿದ್ದವು. ಮಹಾಕಾವ್ಯದ ಕಾಲದಲ್ಲಿ ವೇದಗಳ ಕಾಲದ ದೇವ ದೇವತೆಗಳನ್ನು ಮೂಲೆಗೆ ತಳ್ಳಿ ಹೊಸ ದೇವತ ದೇವತೆಗಳು ಅಸ್ತಿತ್ವಕ್ಕೆ ಬಂದವು. ಹೊಸದಾಗಿ ಹುಟ್ಟಿಕೊಂಡ ದೇವ ದೇವತೆಗಳು ವೇದ ಕಾಲದ ದೇವ ದೇವತೆಗಳನ್ನು ಅಡಿಯಾಳುಗಳನ್ನಾಗಿ ಮಾಡಿಕೊಂಡವು. ಹೊಸದಾಗಿ ಹುಟ್ಟಿಕೊಂಡ ದೇವ ದೇವತೆಗಳೆಂದರೆ ಬ್ರಹ್ಮ, ವಿಷ್ಣು, ಶಿವ, ಗಣೇಶ, ಲಕ್ಷ್ಮಿ, ಪಾರ್ವತಿ, ಸೂರ್ಯ, ಸ್ಕಂದ ಮುಂತಾದವರು. ಭೂಮಿಯ ಮೇಲೆ ದುಷ್ಟರನ್ನು ಶಿಕ್ಷಿಸುವ ಸಲುವಾಗಿ, ಧರ್ಮಪರಿಪಾಲನೆಗಾಗಿ ಮತ್ತು ಧರ್ಮದ ಪುನರ್‌ಸ್ಥಾಪನೆಗಾಗಿ ವಿಷ್ಣು ಅವತಾರವೆತ್ತುತ್ತಾನೆ ಎಂಬ ನಂಬಿಕೆ ವ್ಯಾಪಕವಾಗಿತ್ತು. ತ್ರಿಮೂರ್ತಿಗಳ ಕಲ್ಪನೆಯು ಮಹತ್ವ ಪಡೆದುಕೊಂಡಿತ್ತು. ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು - ಇವರು ಮೂರು ದೇವತೆಗಳು ಸೃಷ್ಟಿ, ಸ್ಥಿತಿ ಮತ್ತು ಲಯ ಎಂಬ ಕರ್ತವ್ಯಗಳಿಗೆ ಸಂವಾದಿಯಾಗಿದ್ದರು. ತ್ರಿಮೂರ್ತಿಗಳು ಮಹತ್ವ ಪಡೆದುಕೊಂಡಿದ್ದರು. ಪರಬ್ರಹ್ಮ ಕಲ್ಪನೆ ಬಳಕೆಯಲ್ಲಿತ್ತು. ಉಳಿದ ದೇವತೆಗಳಾದ ಸೂರ್ಯ, ಸ್ಕಂದ, ವರುಣ ಮುಂತಾದವು ಪರಬ್ರಹ್ಮನ ಸಂತಾನಗಳು ಎಂಬ ನಂಬಿಕೆಯಿತ್ತು. ಮಹಾಕಾವ್ಯದ ಕಾಲದಲ್ಲಿ ಕರ್ಮ, ಪುನರ್ಜನ್ಮ, ತಪಸ್ಸು, ಪರಿತ್ಯಾಗ ಮುಂತಾದ ವೈರಾಗ್ಯ ಪರವಾದ ನಂಬಿಕೆಗಳು ವ್ಯಾಪಕವಾಗಿ ಬಳಕೆಯಲ್ಲಿದ್ದವು. ಕರ್ಮಸಿದ್ಧಾಂತ ಮತ್ತು ಪುನರ್ಜನ್ಮದ ಬಗ್ಗೆ ದೃಢವಾದ ನಂಬಿಕೆಯಿತ್ತು. ಮನುಷ್ಯನು ತಾನು ಮಾಡಿದ ಕರ್ಮದ ಫಲವನ್ನು ಅನುಭವಿಸಬೇಕಾಗುತ್ತದೆ ಮತ್ತು ಅದರಿಂದ ಬಿಡುಗಡೆಯೇ ಇಲ್ಲ ಎಂಬ ನಂಬಿಕೆಯಿತ್ತು. ಕರ್ಮಕ್ಕೆ ಅನುಗುಣವಾಗಿ ಆತ್ಮವು ಮತ್ತೆ ಮತ್ತೆ ಹುಟ್ಟಿ ಬರುತ್ತದೆ ಎಂಬ ನಂಬಿಕೆಯಿತ್ತು. ಮೋಕ್ಷ ಪಡೆದ ನಂತರವೇ ಪುನರ್ಜನ್ಮಕ್ಕೆ ಕೊನೆ ಎಂದು ತಿಳಿಯಲಾಗಿತ್ತು. ಭಗವದ್ಗೀತೆಯಲ್ಲಿ ಮೋಕ್ಷಕ್ಕೆ ಭಕ್ತಿ ಮಾರ್ಗ, ಕರ್ಮಮಾರ್ಗ ಮತ್ತು ಜ್ಞಾನಮಾರ್ಗಗಳನ್ನು ಸೂಚಿಸಲಾಗಿತ್ತು. ಮಹಾಕಾವ್ಯಗಳ ಕಾಲದಲ್ಲಿ ಯಜ್ಞ-ಯಾಗಗಳನ್ನು ನಡೆಸಲಾಗುತ್ತಿತ್ತು ಮತ್ತು ಪ್ರಾಣಿ ಬಲಿ ನೀಡಲಾಗುತ್ತಿತ್ತು. ಸಾರ್ವಭೌಮತ್ವವನ್ನು ಸ್ಥಾಪಿಸುವ ಉದ್ದೇಶದಿಂದ ಚಕ್ರವರ್ತಿಗಳು

ಅಶ್ವಮೇಧಯಾಗವನ್ನು ಆಚರಿಸುತ್ತಿದ್ದರು. ಈ ಬಲಿಗಳ ಬಗ್ಗೆ ರಾಮಾಯಣದಲ್ಲಿ ವ್ಯಾಪಕ ಉಲ್ಲೇಖಗಳಿವೆ. ಆದರೆ ಮಹಾಭಾರತದ ಕಾಲಕ್ಕೆ ಬಲಿಗಳ ಮಹತ್ವ ಕಡಿಮೆಯಾಗಿದ್ದಿರಬೇಕು. ನಿಜವಾದ ಯಾಗವೆಂದರೆ ಸತ್ಯ, ಅಹಿಂಸೆ, ನಿಸ್ವಾರ್ಥ, ಪರಿಶುದ್ಧ ಮನಸ್ಸು, ಪರಿಶುದ್ಧ ಕರ್ಮ, ಪ್ರಾರ್ಥನೆ, ಇಂದ್ರಿಯ ನಿಗ್ರಹ ಎಂಬ ನಂಬಿಕೆ ನಿಧಾನವಾಗಿ ಬೆಳೆಯುತ್ತಿತ್ತು.

### 40.6.4 *ವ್ಯಾಪಾರಿ ಸಂಘಗಳು ಮತ್ತು ಹಣಕಾಸು*

ಕೃಷಿಯು ಪ್ರಧಾನ ಕಸುಬಾಗಿ ಮುಂದುವರಿದಿತ್ತು. ದನಗಳ ಸಗಣಿಯನ್ನು ಗೊಬ್ಬರವಾಗಿ ಬಳಸುತ್ತಿದ್ದರು. ವ್ಯಾಪಾರವು ಪ್ರವರ್ಧಮಾನಕ್ಕೆ ಬಂದಿತ್ತು. ವ್ಯಾಪಾರಿ ಸಂಘಗಳು ಅಸ್ತಿತ್ವಕ್ಕೆ ಬಂದವು. ಪ್ರಭುತ್ವದ ಜೊತೆಗೆ ಮಹಾಭಾರತದ ಕಾಲದಲ್ಲಿ ಸಾಮಂತ, ರಾಜರು, ಪಾಳೆಗಾರರು, ಸ್ಥಳೀಯ ಒಡೆಯರು ಹುಟ್ಟಿಕೊಂಡರು. ಕರಕುಶಲ ಕೆಲಸಗಾರರು, ಸೈನಿಕರು, ಕಾರ್ಮಿಕರು, ವ್ಯಾಪಾರಿಗಳು ರಾಜ್ಯಾದ್ಯಾಂತ ಸುತ್ತಾಡುತ್ತಿದ್ದರು. ಸಾಮ್ರಾಜ್ಯದ ಆಧಾರ ಸ್ತಂಭಗಳೆಂದು ಅವರನ್ನು ಮನ್ನಿಸಲಾಗಿತ್ತು. ರಾಜನು ತನ್ನ ಬಳಿ ಕೆಲಸ ಮಾಡುತ್ತಿದ್ದ ಸೈನಿಕರಿಗೆ ಸಮಾನವಾಗಿದ್ದ ಬಾಡಿಗೆ ಭಂಟರನ್ನು ಯುದ್ಧದ ಸಂದರ್ಭದಲ್ಲಿ ನೇಮಿಸಿಕೊಳ್ಳಬಹುದಾಗಿತ್ತು. ರಾಜನ ಮೆಚ್ಚುಗೆಯನ್ನು ಗಳಿಸಿಕೊಳ್ಳುವ ಉದ್ದೇಶದಿಂದ ತಾವು ಸಾಕುತ್ತಿದ್ದ ಬಾಡಿಗೆ ಭಂಟರನ್ನು ಯುದ್ಧದ ಸಂದರ್ಭದಲ್ಲಿ ವ್ಯಾಪಾರಿಗಳು ರಾಜನ ಸೇವೆಗೆ ಒದಗಿಸುತ್ತಿದ್ದರೆಂದು ಹೇಳಲಾಗಿದೆ. ವ್ಯಾಪಾರಿ ಸಂಘಗಳು ತಮ್ಮ ಸುಗಮ ವ್ಯಾಪಾರಕ್ಕಾಗಿ ಸಮಾಜದ ಶಾಂತಿ ಮತ್ತು ಸುವ್ಯವಸ್ಥೆಯನ್ನು ಬಯಸುತ್ತಿದ್ದರು. ವ್ಯಾಪಾರಿ ಸಂಘಗಳ ಕರ್ತವ್ಯ ಲೋಪಕ್ಕೆ ಪರಿಹಾರವೆಂಬುದೇ ಇರಲಿಲ್ಲ.

*ಹಣಕಾಸು ವ್ಯವಸ್ಥೆಯ ಉದಯ*

ಮಹಾಭಾರತದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುವಂತೆ ಯುದ್ಧದಂತಹ ತುರ್ತುಪರಿಸ್ಥಿತಿಯಲ್ಲಿ ಪ್ರಜೆಗಳು ಅಪಾರ ತ್ಯಾಗ ಮಾಡಬೇಕಾಗಿತ್ತು. ಅಸಮಾನ್ಯ ಸಂದರ್ಭಗಳಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಕರ್ತವ್ಯಕ್ಕೆ ಅನುಗುಣವಾಗಿ ನಡೆದುಕೊಳ್ಳಬೇಕು ಎಂದು ನಿರೀಕ್ಷಿಸಲಾಗಿತ್ತು. ವಿಶೇಷ ಸಂದರ್ಭವನ್ನು ಪ್ರಜೆಗಳಿಗೆ ವಿವರಿಸಿ ರಾಜನು ತೆರಿಗೆಯನ್ನು ವಿಧಿಸಬಹುದ್ದಾಗಿತ್ತು. ತೆರಿಗೆ ಸಲ್ಲಿಸಲು ನಿರಾಕರಿಸಿದ ಪ್ರಜೆಯ ಆಸ್ತಿಯನ್ನು ರಾಜನು ಮುಟ್ಟುಗೋಲು ಹಾಕಿಕೊಳ್ಳಬಹುದಾಗಿತ್ತು. ಯುದ್ಧದ ಸಂದರ್ಭದಲ್ಲಿ ಖಜಾನೆಯ ಖಾಲಿಯಾದರೆ ಬ್ರಾಹ್ಮಣರನ್ನು ಬಿಟ್ಟು ಉಳಿದ ಪ್ರಜೆಗಳ ಆಸ್ತಿಯನ್ನು ವಶಪಡಿಸಿಕೊಳ್ಳಬಹುದಾಗಿತ್ತು. ಯಜ್ಞಯಾಗಗಳ ಸಂದರ್ಭದಲ್ಲಿ ಕಾಣಿಕೆ ಸಲ್ಲಿಸಲು ಅಗತ್ಯವಾದ ಸಂಪತ್ತನ್ನು ಅಧರ್ಮಿಗಳಿಂದ ಕಸಿದುಕೊಳ್ಳಬಹುದಾಗಿತ್ತು. ಯುದ್ಧ ಮುಗಿದ ಮೇಲೆ ಸದ್ಯದಲ್ಲಿ ನಡೆಸುವ ಯಜ್ಞಕ್ಕಾಗಿ ಪ್ರಜೆಗಳಿಂದ ತೆರಿಗೆಯನ್ನು ಸಂಗ್ರಹಿಸುವುದಿಲ್ಲವೆಂದು ಯುದಿಷ್ಟರ ಘೋಷಿಸಿದ್ದನು. ಇದು ಸಾಮಾನ್ಯವಾಗಿ ರೂಢಿಯಲ್ಲಿದ್ದ ಸಂಗತಿಯಾಗಿತ್ತು. ಅಗತ್ಯ ಬಿದ್ದಾಗ ರಾಜನು ದಾಸ್ಯವರ್ಗದ ಸಂಪತ್ತನ್ನು ವಶಪಡಿಸಿಕೊಳ್ಳಬಹುದಾಗಿತ್ತು.

## 40.7 ಸಾರಾಂಶ

ಎರಡು ಮಹಾಕಾವ್ಯಗಳ ಕಾಲವು ಧರ್ಮದ ಯುಗವಾಗಿತ್ತು. ನೈತಿಕತೆ ಮತ್ತು ಸದ್ಗುಣಗಳಿಗೆ ಅತಿ ಹೆಚ್ಚಿನ ಮಹತ್ವವನ್ನು ನೀಡಲಾಗಿತ್ತು. ಮಹಾಭಾರತವು ಕೇವಲ ಮಹಾಕಾವ್ಯ ಮಾತ್ರವೇ ಆಗಿರಲಿಲ್ಲ. ಅದೊಂದು ಜೀವನ ದರ್ಶನವಾಗಿತ್ತು ಮತ್ತು ಶೂರಾಧಿಶೂರರ ಕಥೆಗಳ ಒಂದು ಕಾವ್ಯವಾಗಿತ್ತು. ಇವೆಲ್ಲಕ್ಕಿಂತ ಮುಖ್ಯವಾಗಿ ಅದರ ಕೇಂದ್ರದಲ್ಲಿ ಭಗವದ್ಗೀತೆ ಇತ್ತು. ಅದನ್ನು ಕಾವ್ಯಗಳಲ್ಲೆಲ್ಲಾ ಮಹಾಕಾವ್ಯವೆಂದು ಮತ್ತು ಋಷಿಸದೃಶ ಕೃತಿಯೆಂಬ ಕೀರ್ತಿಗೆ ಅದು ಪಾತ್ರವಾಗಿತ್ತು. ಕರ್ತವ್ಯಕ್ಕೆ ಸಂಬಂಧಿಸಿದಂತೆ ಸಂದಿಗ್ಧ ಸನ್ನಿವೇಶ ಎದುರಾದಾಗ ಗೀತೆಯು ಜನರಿಗೆ ಮಾರ್ಗದರ್ಶನ ನೀಡುವ ಕೃತಿಯೆಂಬ ಕೀರ್ತಿಗೂ ಪಾತ್ರವಾಗಿತ್ತು. ಮಹಾಕಾವ್ಯಗಳು ಕಥನಾಕಗಳೂ ಹೌದು ಮತ್ತು

ಚರಿತ್ರೆಯೂ ಹೌದು. ಅವು ಪವಿತ್ರವಾದ ಪ್ರಾಚೀನ ಸಾಹಿತ್ಯ ಕೃತಿಗಳಾಗಿವೆ. ಈ ಮಹಾಕಾವ್ಯಗಳನ್ನು ಆಕರ ಗ್ರಂಥಗಳನ್ನಾಗಿ ಉಪಯೋಗಿಸಿ, ಐತಿಹಾಸಿಕ ಪರಿಕಲ್ಪನೆಯಲ್ಲಿ ಭಾರತದ ಸಂಸ್ಕೃತಿ ಮತ್ತು ಆಧ್ಯಾತ್ಮ ಪರಂಪರೆಯನ್ನು ವಿಶ್ಲೇಷಿಸುವುದು ಇಂದಿನ ಇತಿಹಾಸಕಾರರ ಅಗತ್ಯತೆ ಮತ್ತು ಜವಾಬ್ದಾರಿಯಾಗಿದೆ. ಅಂದಿನ ಯುಗಧರ್ಮ ಮತ್ತು ಜೀವನದ ಎಲ್ಲಾ ರಂಗಗಳಲ್ಲಿ ಕಾಣುವ ಸಂಘರ್ಷ ಮತ್ತು ಅವುಗಳಲ್ಲಿನ ಮೌಲ್ಯಗಳು ಮಹಾಕಾವ್ಯಗಳಲ್ಲಿ ಅಡಕವಾಗಿವೆ. ಕಾರಣ ಈ ಪ್ರಯತ್ನ ಅವಶ್ಯ.

## 40.8 ಮಾದರಿ ಪ್ರಶ್ನೆಗಳು

1. ಮಹಾಕಾವ್ಯಗಳ ಕಾಲದ ಜನಜೀವನವನ್ನು ಚರ್ಚಿಸಿರಿ.
2. ಪ್ರಾಚೀನ ಭಾರತ ಸಂಸ್ಕೃತಿ ಅಧ್ಯಯನಕ್ಕೆ ಮಹಾಕಾವ್ಯಗಳ ಮಹತ್ವವನ್ನು ಮೌಲ್ಯೀಕರಿಸಿರಿ.

## 40.9 ಅಧ್ಯಯನಕ್ಕೆ ಗ್ರಂಥಗಳು


1. Altekar .A.S. : **Ancient India**
2. Basham .A.L. : **The wonder that was India**
3. Lunia .B.N. : **Evolution of Indian culture**
4. Tripati .R.S. : **History of Ancient India**

## ಟಿಪ್ಪಣಿಗಳು

## ಘಟಕ - 41

# ಹೊಸ ಧರ್ಮಗಳ ಉದಯದ ಸಂದರ್ಭದಲ್ಲಿ ಹಿಂದೂ ಸಮಾಜ

*ರಚನೆ*


**41.0** ಉದ್ದೇಶಗಳು

**41.1** ಪೀಠಿಕೆ

**41.2** ಹಿಂದೂ ಸಮಾಜದ ಸ್ಥಿತಿಗತಿಗಳು

- **41.2.1** ರಾಜಕೀಯ ವ್ಯವಸ್ಥೆ
- **41.2.2** ವೈದಿಕಧರ್ಮದ ಅವಸಾನ
- **41.2.3** ಯಜ್ಞ-ಯಾಗಗಳ ಆಚರಣೆ
- **41.2.4** ಮಾಟ-ಮಂತ್ರಗಳಲ್ಲಿ ನಂಬಿಕೆ
- **41.2.5** ಸಂಸ್ಕೃತದ ಪ್ರಭಾವ
- **41.2.6** ಬ್ರಾಹ್ಮಣರ ಸಾರ್ವಭೌಮತ್ವ
- **41.2.7** ಜಾತಿ ವ್ಯವಸ್ಥೆ
- **41.2.8** ವೈಚಾರಿಕ ಗೊಂದಲ

**41.3** ಸಾರಾಂಶ

**41.4** ಮಾದರಿ ಪ್ರಶ್ನೆಗಳು

**41.5** ಹೆಚ್ಚಿನ ಅಧ್ಯಯನಕ್ಕೆ ಪುಸ್ತಕಗಳು

## 41.0 ಉದ್ದೇಶಗಳು

ಈ ಘಟಕದ ಅಧ್ಯಾಯನದಿಂದ ಕೆಳಕಂಡ ವಿಚಾರಗಳನ್ನು ಅರಿತುಕೊಳ್ಳಬಹುದು.

1. ಜೈನಧರ್ಮ ಮತ್ತು ಬೌದ್ಧ ಧರ್ಮಗಳು ಉದಯಿಸಿದ ಸಂದರ್ಭದಲ್ಲಿ ಹಿಂದೂ ಸಮಾಜದ ಸ್ಥಿತಿಗತಿಗಳು
2. ಕ್ರಿ.ಪೂ. ೬ನೆಯ ಶತಮಾನದಲ್ಲಿ ಭಾರತದಲ್ಲಿದ್ದ ಸಾಮಾಜಿಕ ಮತ್ತು ಧಾರ್ಮಿಕ ವಿಪ್ಲವ ಮತ್ತು ವೈದಿಕ ಸಂಸ್ಕೃತಿಯ ಅವಸಾನ
3. ಕರ್ಮ, ಜ್ಞಾನ, ಆತ್ಮತ್ಯಾಗ, ತಪೋವರ್ಗ, ದೈವ ಸಾಕ್ಷಾತ್ಕಾರ, ಮೋಕ್ಷ ಸಾಧನೆ ಮುಂತಾದ ಸಿದ್ಧಾಂತಗಳಲ್ಲಿದ್ದ ವ್ಯತ್ಯಾಸಗಳು.
4. ವೈದಿಕ ಹಿಂದೂ ಧರ್ಮ ಮತ್ತು ಪೌರಾಣಿಕ ಹಿಂದೂ ಧರ್ಮಗಳ ನಡುವಿನ ಭಿನ್ನತೆ.

## 41.1 ಪ್ರಸ್ತಾವನೆ

ಕ್ರಿ.ಪೂ. ೬ನೆಯ ಶತಮಾನವು, ಭಾರತದಲ್ಲಷ್ಟೇ ಅಲ್ಲ, ಇಡೀ ವಿಶ್ವದಲ್ಲಿ ರಾಜಕೀಯ ಮತ್ತು ಧಾರ್ಮಿಕ ಮಹಾವಿಪ್ಲವದ ಕಾಲವಾಗಿತ್ತು. ರಾಜಕೀಯವಾಗಿ ಪ್ರಾಚೀನ ಕಾಲಕ್ಕೆ ಸೇರಿದ ಮಹಾಸಾಮ್ರಾಜ್ಯಗಳಾದ ರೋಮನ್ ಮತ್ತು ಆಚಮಿಡಿಯನ್ ಸಾಮ್ರಾಜ್ಯಗಳು ಅಂದು ಅಸ್ತಿತ್ವಕ್ಕೆ ಬಂದವು. ಪ್ರಾಚೀನ ಭಾರತದ ಇತಿಹಾಸದಲ್ಲಿ ಮಹತ್ವದ ಸ್ಥಾನಪಡೆದಿರುವ ಮಗಧ ಸಾಮ್ರಾಜ್ಯದ ಆರಂಭವನ್ನು ಕ್ರಿ.ಪೂ. ೬ನೆಯ ಶತಮಾನದಲ್ಲಿ ಗುರುತಿಸಬಹುದು. ಜೈನ ಮತ್ತು ಬೌದ್ಧ ಧರ್ಮಗಳ ಉದಯವನ್ನು ಇದೇ ಕಾಲದಲ್ಲಿ ಗುರುತಿಸಬಹುದು. ಇದೇ ಕಾಲಾವಧಿಯಲ್ಲಿ ಗ್ರೀಸ್‌ನಲ್ಲಿ ಪರ್ಯನಿಡೀಸ್, ಚೈನಾದಲ್ಲಿ ಕನ್‌ಫ್ಯೂಸಿಯಸ್ ಮತ್ತು ಪರ್ಷಿಯಾದಲ್ಲಿ ಜೋರಾಸ್ಟ್ರರ್ ಮಹಾಚಿಂತಕರು ಬದುಕಿದ್ದರು. ಈ ಚಿಂತಕರು ಪರಸ್ಪರ ಸಮಕಾಲೀನರಾಗಿದ್ದರು ಮತ್ತು ಸಾಮಾಜಿಕ ಮತ್ತು ಧಾರ್ಮಿಕವಾಗಿ ಹೊಸ ಚಿಂತನೆಯನ್ನು ಹುಟ್ಟುಹಾಕುವುದರಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು. ಪ್ರಾಚೀನ ಭಾರತದಲ್ಲಿ ಹುಟ್ಟಿಕೊಂಡ ಹೊಸಧರ್ಮಗಳಲ್ಲಿ ಸಾತ್ವಿಕವಾದ ಮತ್ತು ಸತ್ವಪೂರ್ಣವಾಗಿದ್ದ ಗುಣಗಳನ್ನು ಗುರುತಿಸಬಹುದಾಗಿದೆ. ಕ್ರಿ.ಪೂ. ೬ನೆಯ ಶತಮಾನದಲ್ಲಿ ಭಾರತದಲ್ಲಿ ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ವಿಪ್ಲಲವ ಉಂಟಾಯಿತು.

## 41.2 ಹಿಂದೂ ಸಮಾಜದ ಸ್ಥಿತಿಗತಿಗಳು

ಹೊಸಧರ್ಮಗಳಾದ ಜೈನಧರ್ಮ ಮತ್ತು ಬೌದ್ಧಧರ್ಮಗಳು ತಲೆ ಎತ್ತಿದ ೬ನೆಯ ಶತಮಾನದ ಸಂದರ್ಭದಲ್ಲಿ ಹಿಂದೂ ಸಮಾಜದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳು ಹೇಗಿದ್ದವು ಎಂಬುದರ ಚಿತ್ರವನ್ನು ಕೆಳಗಿನ ವಿಶ್ಲೇಷಣೆಯು ನೀಡುತ್ತದೆ.

### *41.2.1 ರಾಜಕೀಯ ವ್ಯವಸ್ಥೆ*

ಕ್ರಿ.ಪೂ. ೬ನೆಯ ಶತಮಾನದ ಭಾರತದಲ್ಲಿ ಸ್ವತಂತ್ರ ರಾಜ್ಯಗಳು ಅಥವಾ ಗಣರಾಜ್ಯಗಳು ಅಸ್ತಿತ್ವದಲ್ಲಿದ್ದವು ಎಂಬುದು ಅಂದಿನ ಪಾಳಿ ದಾಖಲೆಗಳಿಂದ ತಿಳಿದು ಬರುತ್ತದೆ. 'ಬುದ್ಧನ ಸಮಕಾಲೀನ ಗಣರಾಜ್ಯಗಳು' ಎಂದು ಅವುಗಳನ್ನು ಕರೆಯಲಾಗಿದೆ. ಅಂದು ೧೦ ಗಣರಾಜ್ಯಗಳಿದ್ದವು ಎಂದು ಹೇಳಲಾಗಿದೆ. ಅವುಗಳಲ್ಲಿ ಕಪಿಲವಸ್ತುವಿನ ಶಾಕ್ಯರು, ವೈಶಾಲಿಯ ಲಿಚ್ಛವಿಗಳು, ಮಿಥಿಲೆಯ ವಿದೇಹಿಗಳು, ವೈಶಾಲಿಯ ನಯ್ಯಾಗಳು ಮುಖ್ಯವಾಗಿದ್ದಾವೆ. ಇವು ಗಣರಾಜ್ಯಗಳಾಗಿದ್ದರೂ ಅಲ್ಲಿ ಅಧಿಕಾರಿಗಳ ಹುದ್ದೆಗೆ ಮತ್ತು ಕಾನೂನು ಮಾಡುವ ಹುದ್ದೆಗಳಿಗೆ ಕ್ಷತ್ರಿಯರು ಮತ್ತು ಬ್ರಾಹ್ಮಣರು

ಮಾತ್ರ ನೇಮಕಗೊಳ್ಳುತ್ತಿದ್ದರು. ತಮ್ಮ ಆಂತರಿಕ ಸಂಘರ್ಷಗಳಿಂದಾಗಿ ಗಣರಾಜ್ಯಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಎಲ್ಲ ಸಂಗತಿಗಳು ಮೌರ್ಯ ಮತ್ತು ನಂದ ಸಾಮ್ರಾಜ್ಯಗಳ ಹುಟ್ಟಿಗೆ ಕಾರಣವಾದವು. ಇವುಗಳ ಜೊತೆಗೆ ಅವಂತಿ, ಕೋಶಲ, ವಸ್ತ ಮತ್ತು ಮಗಧ ಸಾಮ್ರಾಜ್ಯಗಳು ತಲೆ ಎತ್ತಿದ್ದವು. ಕ್ರಿ.ಪೂ. ೬ನೆಯ ಶತಮಾನದಲ್ಲಿ ಗಣರಾಜ್ಯಗಳು ಮತ್ತು ಸಾಮ್ರಾಜ್ಯಗಳ ನಡುವೆ ಸಾರ್ವಭೌಮತ್ವವನ್ನು ಸ್ಥಾಪಿಸುವ ಸಲುವಾಗಿ ಘರ್ಷಣೆಗಳು ನಡೆಯುತ್ತಿದ್ದವು. ಸಾಮಾನ್ಯ ಜನರ ಬದುಕು ತುಂಬಾ ಕೆಳಮಟ್ಟದಲ್ಲಿದ್ದರೆ ಶ್ರೀಮಂತರ ಬದುಕು ಉತ್ತಮ ಸ್ಥಿತಿಯಲ್ಲಿತ್ತು.

### 41.2.2 *ವೈದಿಕ ಧರ್ಮದ ಅವಸಾನ*

ಕಾಲ ಸರಿದಂತೆ ವೈದಿಕ ಧರ್ಮವು ಅವಸಾನದ ದಾರಿ ಹಿಡಿಯಿತು. ಅನೇಕ ಅರ್ಥರಹಿತ ಆಚರಣೆಗಳು ಅಲ್ಲಿ ಹುಟ್ಟಿಕೊಂಡವು. ಇದರಿಂದಾಗಿ ಅದು ತನ್ನ ಮಹತ್ವವನ್ನು ಮತ್ತು ಸಾತ್ವಿಕ ಗುಣವನ್ನು ಕಳೆದುಕೊಂಡಿತು. ವೈದಿಕ ಹಿಂದೂ ಧರ್ಮದ ತತ್ವಗಳ ಸ್ಥಾನವನ್ನು ಪೌರಾಣಿಕ ಹಿಂದೂ ಧರ್ಮದ ತತ್ವಗಳು ಆಕ್ರಮಿಸಿಕೊಂಡು ಬಿಟ್ಟವು. ವೈಚಾರಿಕತೆಯ ಗುಣವನ್ನು ಬೆಳೆಸಿಕೊಂಡಿದ್ದ ಜನರಿಗೆ ಪುರೋಹಿತರು ಉಪದೇಶಿಸುತ್ತಿದ್ದ ಕುರುಡು ತತ್ವಗಳು, ಮೂಢನಂಬಿಕೆಗಳು, ವಿಗ್ರಹಾರಾಧನೆ ಮತ್ತು ಅವೈಜ್ಞಾನಿಕ ವಿಧಿ-ಆಚರಣೆಗಳ ಹೆಸರಿನಲ್ಲಿ ನಡೆಸುತ್ತಿದ್ದ ಸಾಮಾನ್ಯ ಜನರ ಶೋಷಣೆಯನ್ನು ಸಹಿಸಿಕೊಳ್ಳಲಾಗಲಿಲ್ಲ. ಪುರೋಹಿತ ವರ್ಗದ ಸ್ವಾರ್ಥ ಪರಜೀವನ ಹಾಗೂ ಲೌಕಿಕ ಸಂಗ್ರಹ ಬದುಕು ಸಮಾಜದಲ್ಲಿ ಅಭದ್ರತೆಯನ್ನು ಉಂಟು ಮಾಡಿತು ಮತ್ತು ಸಮಾಜವನ್ನು ವಿಚ್ಛಿದ್ರಗೊಳಿಸಿತು. ವೈದಿಕ ವಿಪ್ರರು ಧಾರ್ಮಿಕ ಮನೋಭಾವದಿಂದ ದೂರ ಸರಿದಿದ್ದರು. ಸಾಮಾಜಿಕ ಸೇವೆಯನ್ನು ತೊರೆದಿದ್ದರು. ಜನರಿಗೆ ನಿಜವಾದ ಬದುಕಿನ ಮಾರ್ಗ ಯಾವುದೆಂಬುದನ್ನು ತೋರಿಸುವುದರಲ್ಲಿ ಅವರು ವಿಫಲರಾಗಿದ್ದರು. ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿದ್ದ ಜನರು ಸಾಮಾನ್ಯ ನಿಯಮಗಳನ್ನೆಲ್ಲ ಗಾಳಿಗೆ ತೂರಿಬಿಟ್ಟಿದ್ದರು.

### 41.2.3 *ಯಜ್ಞ-ಯಾಗಗಳ ಆಚರಣೆ*

ಆರ್ಯರು ಯಜ್ಞ-ಯಾಗಗಳಲ್ಲಿ ನಂಬಿಕೆಯಿಟ್ಟುಕೊಂಡಿದ್ದರು. ಈ ನಂಬಿಕೆಗಳನ್ನು ವೈದಿಕ ಪುರೋಹಿತರು ಶೋಷಣೆಯ ಸಾಧನವನ್ನಾಗಿ ಮಾಡಿಕೊಂಡರು. ಯಜ್ಞ-ಯಾಗಗಳ ಆಚರಣೆಯಿಂದ ಮೋಕ್ಷವನ್ನು ಪಡೆದುಕೊಳ್ಳಬಹುದು ಎಂಬ ತಪ್ಪು ಭಾವನೆಯನ್ನು ಅವರು ಸಮಾಜದಲ್ಲಿ ಹುಟ್ಟುಹಾಕಿದರು. ಯಜ್ಞಗಳ ಆಚರಣೆಯ ಸಂದರ್ಭದಲ್ಲಿ ಅನೇಕ ಪ್ರಾಣಿಗಳನ್ನು, ಕೆಲವೊಂದು ಸಂದರ್ಭಗಳಲ್ಲಿ ಮನುಷ್ಯರನ್ನು ಬಲಿಕೊಡಲಾಗುತ್ತಿತ್ತು. ಅಸಹಾಯಕ ಮಾನವರ ಮತ್ತು ಮಾತುಬಾರದ ಪ್ರಾಣಿಗಳ ಹತ್ಯೆಯನ್ನು ಜನರು ವಿರೋಧಿಸತೊಡಗಿದರು. ಹಿಂಸೆಯು ಮೋಕ್ಷಕ್ಕೆ ಸಾಧನವೆ? ಎಂಬ ಪ್ರಶ್ನೆಗಳನ್ನು ಜನರು ಕೇಳಲು ತೊಡಗಿದರು. ಇದಲ್ಲದೆ ಯಜ್ಞ ಯಾಗಗಳ ಆಚರಣೆಗಳು ತುಂಬಾ ದುಬಾರಿಯಾಗಿ ಬಿಟ್ಟಿದ್ದವು. ಆಸ್ತಿ-ಪಾಸ್ತಿಗಳನ್ನು ಒತ್ತೆಯಿಡದೆ ಜನರು ಯಾಗ-ಯಜ್ಞಗಳನ್ನು ಆಚರಿಸುವುದು ಸಾಧ್ಯವಿರಲಿಲ್ಲ. ಹೀಗೆ ಯಜ್ಞ-ಯಾಗಗಳ ಆಚರಣೆಗಳು ಹಿಂದೂ ಸಮಾಜದಲ್ಲಿ ಸಾಮಾಜಿಕ ಅಭದ್ರತೆಯನ್ನು ಉಂಟು ಮಾಡಿದವು. ಈ ಕಾರಣದಿಂದಾಗಿ ಜನರ ಮನಶ್ಶಾಂತಿ ಹಾಳಾಗಿ ಹೋಯಿತು. ಜನರು ಸರಳ ಹಾಗೂ ಸುಲಭ ಧಾರ್ಮಿಕ ಮಾರ್ಗಕ್ಕಾಗಿ ಪರಿತಪಿಸುತ್ತಿದ್ದರು. ವಿಧಿ-ಆಚರಣೆಗಳಿಂದ ಮುಕ್ತವಾದ ಮೋಕ್ಷದ ಮಾರ್ಗಕ್ಕಾಗಿ ಜನರು ಹುಡುಕಾಟ ನಡೆಸಿದ್ದರು.

### 41.2.4 *ಮಾಟ-ಮಂತ್ರಗಳಲ್ಲಿ ನಂಬಿಕೆ*

ಕಾಲಕ್ರಮೇಣ ಆಧ್ಯಾತ್ಮಿಕ ಕ್ಷೇತ್ರವನ್ನು ಮಾಟ-ಮಂತ್ರ-ವಾಮಾಚಾರಗಳು ಆಕ್ರಮಿಸಿಕೊಂಡುಬಿಟ್ಟವು. ವೈದಿಕ ಮಂತ್ರಗಳಲ್ಲಿ ಪವಾಡದ ಗುಣವಿದೆಯೆಂದು ಜನರು

ನಂಬತೊಡಗಿದ್ದರು. ಮಂತ್ರಗಳ ಪಠಣದಿಂದ ಎಲ್ಲ ಬಗೆಯ ರೋಗಗಳನ್ನು ಗುಣಪಡಿಸಬಹುದೆಂದು ತಿಳಿದಿದ್ದರು. ಮಂತ್ರಶಕ್ತಿಯಿಂದ ಸೋಲು ಗೆಲುವುಗಳನ್ನು ನಿರ್ಧರಿಸಬಹುದೆಂದು ಜನರು ತಿಳಿದಿದ್ದರು. ಮಂತ್ರಗಳ ಪಠಣದಿಂದ ಮಕ್ಕಳನ್ನು ಪಡೆಯಬಹುದು ಎಂಬ ನಂಬಿಕೆ ಕ್ರಿ.ಪೂ. ೬ನೆಯ ಶತಮಾನದಲ್ಲಿ ಗಟ್ಟಿಯಾಗಿತ್ತು. ಕುರುಡು ಮತ್ತು ಮೂಢನಂಬಿಕೆಗಳು ಜನರನ್ನು ಹಾಳು ಮಾಡುತ್ತಿದ್ದವು. ವೈಚಾರಿಕ ಮನೋಭಾವ ಬೆಳೆಸಿಕೊಂಡ ಜನರು ಮೂಢನಂಬಿಕೆ ಮತ್ತು ಕುರುಡು ಆಚರಣೆಗಳಿಂದ ಕೂಡಿರುವ ಹಿಂದೂ ಧರ್ಮವನ್ನು ಬಿಟ್ಟು ಹೊಸಧರ್ಮಗಳಾದ ಜೈನಧರ್ಮ ಮತ್ತು ಬೌದ್ಧ ಧರ್ಮಗಳಿಗೆ ಸೇರಲು ಕರೆ ನೀಡಿದರು ಮತ್ತು ಪ್ರಚೋದಿಸಿದರು.

### 41.2.5 *ಸಂಸ್ಕೃತದ ಪ್ರಭಾವ*

ವೇದಗಳು, ಉಪನಿಷತ್ತುಗಳು, ಬ್ರಾಹ್ಮಣಗಳು, ರಾಮಾಯಣ, ಮಹಾಭಾರತ ಮುಂತಾದ ವೈದಿಕ ಸಾಹಿತ್ಯ ಕೃತಿಗಳೆಲ್ಲ ಸಂಸ್ಕೃತ ಭಾಷೆಯಲ್ಲಿದ್ದವು. ಸಂಸ್ಕೃತವು ರಾಜ-ಮಹಾರಾಜರ, ರಾಜರ ಸ್ಥಾನದ ಹಾಗೂ ಪುರೋಹಿತ ವರ್ಗದ ಭಾಷೆಯಾಗಿತ್ತು. ಸಾಮಾನ್ಯ ಜನರಿಗೆ ಸಂಸ್ಕೃತ ಅರ್ಥವಾಗುತ್ತಿರಲಿಲ್ಲ. ಬ್ರಾಹ್ಮಣರು ಯಜ್ಞ ಯಾಗಗಳ ಸಂದರ್ಭದಲ್ಲಿ ಮತ್ತು ಧಾರ್ಮಿಕ ಕ್ರಿಯಾಚರಣೆ ಸಂದರ್ಭದಲ್ಲಿ ಪಠಿಸುತ್ತಿದ್ದ ಮಂತ್ರಗಳ ಅರ್ಥ ಸಾಮಾನ್ಯ ಜನರಿಗೆ ತಿಳಿಯುತ್ತಿರಲಿಲ್ಲ. ಇದಲ್ಲದೆ ಪುರೋಹಿತ ವರ್ಗವು ಧಾರ್ಮಿಕ ಪಠ್ಯಗಳನ್ನು ಮತ್ತು ಕೃತಿಗಳನ್ನು ತಮ್ಮ ಲೌಕಿಕ ಉದ್ದೇಶಗಳಿಗನುಗುಣವಾಗಿ ವ್ಯಾಖ್ಯಾನ ಮಾಡುತ್ತಿತ್ತು. ಹೀಗೆ ಸಾಮಾನ್ಯ ಜನರನ್ನು ಶೋಷಿಸಲಾಗುತ್ತಿತ್ತು. ಆಳುವ ವರ್ಗವು ಸಾಮಾನ್ಯ ಜನರ ಭಾಷೆಯಾಗಿದ್ದ ಪಾಳಿಯನ್ನು ಪೂರ್ಣವಾಗಿ ಅಲಕ್ಷಿಸಿಬಿಟ್ಟಿತ್ತು.

### 41.2.6 *ಬ್ರಾಹ್ಮಣರ ಸಾರ್ವಭೌಮತ್ವ*

ಚಾತುರ್ವರ್ಣ ಸಿದ್ಧಾಂತದ ಪ್ರಕಾರ ಸಮಾಜವನ್ನು ಅನೇಕ ಜಾತಿ ಮತ್ತು ಉಪಜಾತಿಗಳಾಗಿ ವರ್ಗೀಕರಿಸಲಾಗಿತ್ತು. ಬೌದ್ಧಿಕ ವರ್ಗವನ್ನು ಬ್ರಾಹ್ಮಣರೆಂದು ವಿಂಗಡಿಸಲಾಗಿತ್ತು. ಸಮಾಜದ ಮೇಲೆ ಅವರಿಗೆ ಪೂರ್ಣ ನಿಯಂತ್ರಣವಿತ್ತು. ಧರ್ಮ ಮತ್ತು ಸರ್ಕಾರದ ಮೇಲೂ ಅವರಿಗೆ ಹಿಡಿತವಿತ್ತು. ಹುಟ್ಟಿದಾಗಿನಿಂದ ಸಾಯುವವರೆಗಿನ ಅವಧಿಯಲ್ಲಿ ಯಾವ ಆಚರಣೆಯನ್ನು ಬ್ರಾಹ್ಮಣರ ನೆರವಿಲ್ಲದೆ ನಡೆಸಲು ಸಾಧ್ಯವಿರಲಿಲ್ಲ. ಬ್ರಾಹ್ಮಣರ ಪ್ರಾಬಲ್ಯವನ್ನು ಅಲುಗಾಡಿಸಲು ಸಾಮಾನ್ಯ ಜನರಿಗೆ ಸಾಧ್ಯವಿರಲಿಲ್ಲ. ಸಮಾಜದಲ್ಲಿ ವಿಶೇಷ ಅಧಿಕಾರ ಮತ್ತು ಅನುಕೂಲಗಳನ್ನು ಅನುಭವಿಸುತ್ತಿದ್ದ ಬ್ರಾಹ್ಮಣರು ತಮ್ಮನ್ನು ತಾವು ಸರ್ವಶ್ರೇಷ್ಠರೆಂದು ಮತ್ತು ದೇವರಿಗೆ ಸಮಾನರೆಂದು ತಿಳಿದು ಕೊಂಡಿದ್ದರು. ಅವರನ್ನು 'ಭೂದೇವತೆಗಳು' ಎಂದು ಕರೆಯಲಾಗಿತ್ತು. ಸಮಾಜದ ಮತ್ತೊಂದು ವರ್ಗವಾಗಿದ್ದ ಕ್ಷತ್ರಿಯರು ಸಮಾಜದ ಎಲ್ಲ ಚಟುವಟಿಕೆಗಳ ಮೇಲೆ ಬ್ರಾಹ್ಮಣರಿಗಿದ್ದ ಸಾರ್ವಭೌಮತ್ವವನ್ನು ಪ್ರಶ್ನಿಸತೊಡಗಿದರು. ಸಮಾಜದ ಅವಿಭಾಜ್ಯ ಅಂಗವಾಗಿದ್ದ ಶೂದ್ರರು ಮತ್ತು ವೈಶ್ಯರನ್ನು ಅಸ್ಪೃಶ್ಯರಂತೆ ಕೀಳುಭಾವನೆಯಿಂದ ಕಾಣಲಾಗುತ್ತಿತ್ತು. ರಾಜ್ಯದ ಸಂಪತ್ತು ಬ್ರಾಹ್ಮಣರ ವಶದಲ್ಲಿತ್ತು. ಸಮಾಜದ ಅಸಮಾನತೆಗೆ ಇದು ಬುನಾದಿಯನ್ನು ಹಾಕಿತು. ಬೇರೆ ಬೇರೆ ವರ್ಣಗಳಿಗೆ ಸೇರಿದ ಜನರ ನಡುವೆ ಪರಸ್ಪರ ತಿಳುವಳಿಕೆಯಿರಲಿಲ್ಲ. ಬೇರೆ ಬೇರೆ ವರ್ಣಗಳಿಗೆ ಸೇರಿದ ಜನರ ನಡುವೆ ಸೌಹಾರ್ದ ಸಂಬಂಧವಿರಲಿಲ್ಲ.

### 41.2.7 *ಜಾತಿ ವ್ಯವಸ್ಥೆ*

ಹಿಂದೂ ಧರ್ಮ ಮತ್ತು ಹಿಂದೂ ಸಮಾಜದ ಬಹುದೊಡ್ಡ ರೋಗವೆಂದರೆ ಜಾತಿವ್ಯವಸ್ಥೆ. ತಾರತಮ್ಯ ಹಾಗೂ ಪಕ್ಷಪಾತವು ಜಾತಿ ವ್ಯವಸ್ಥೆಯ ಅಡಿಪಾಯವಾಗಿದೆ. ಕೆಳಜಾತಿಗಳಿಗೆ ಸೇರಿದ ಜನರು ಉನ್ನತ ಜಾತಿಗಳಿಗೆ ಸೇರಿದ ಜನರಿಂದ ಅನೇಕ ಬಗೆಯ ಕಷ್ಟ-ಕೋಟಲೆಗಳನ್ನು

ಅನುಭವಿಸಬೇಕಾಗಿತ್ತು. ಅಸ್ಪೃಶ್ಯತೆಯಿಂದ ಕ್ರೂರ ಹಾಗೂ ಅನಿಷ್ಟ ಆಚರಣೆಯನ್ನು ಜನರು ಅನುಭವಿಸಬೇಕಾಗಿತ್ತು. ಅನೇಕ ಬಗೆಯ ನಿಷೇಧಗಳನ್ನು ಶೂದ್ರರಿಗೆ ಹೇರಲಾಗಿತ್ತು. ಇದರಿಂದಾಗಿ ಶೂದ್ರರು ಅನೇಕ ನೈಸರ್ಗಿಕ ಹಾಗೂ ಮಾನವ ಹಕ್ಕುಗಳಿಂದ ವಂಚಿತರಾಗಿದ್ದರು. ಹೀಗೆ ಜಾತಿ ವ್ಯವಸ್ಥೆಯು ಭಾರತೀಯ ಸಂಸ್ಕೃತಿ ಮತ್ತು ಸಭ್ಯತೆಯ ಹೆಸರಿಗೆ ಮತ್ತು ಕೀರ್ತಿಗೆ ಕಳಂಕವನ್ನು ಉಂಟುಮಾಡಿತು. ಸಹಜವಾಗಿ ತುಳಿತಕ್ಕೆ, ಶೋಷಣೆಗೆ ಮತ್ತು ವಂಚನೆಗೆ ಒಳಗಾದ ಜನರು ಮೋಕ್ಷ ಪಡೆದುಕೊಳ್ಳಲು ಮತ್ತು ನೆಮ್ಮದಿ ಪಡೆದುಕೊಳ್ಳಲು ಹೊಸ ಧರ್ಮಗಳನ್ನು ಸೇರಲು ಕ್ರಿ.ಪೂ. ೬ನೆಯ ಶತಮಾನದಲ್ಲಿ ಉತ್ಸುಕರಾಗಿದ್ದರು.

### 41.2.8 *ವೈಚಾರಿಕ ಗೊಂದಲ*

ಹೊಸಧರ್ಮಗಳು ಹುಟ್ಟಿಕೊಂಡ ಸಂದರ್ಭದಲ್ಲಿ ಹಿಂದೂ ಸಮಾಜವು ವೈಚಾರಿಕ ಗೊಂದಲಕ್ಕೆ ಸಿಲುಕಿಕೊಂಡು ಬಿಟ್ಟಿತ್ತು. ಬದುಕಿನ ದುಃಖ ಕ್ಲೇಷ-ನೋವುಗಳನ್ನು ತೊಡೆದು ಹಾಕಲು ಮತ್ತು ಮೋಕ್ಷವನ್ನು ಪಡೆಯಲು ಕರ್ಮ, ಜ್ಞಾನ, ತಪೋಮಾರ್ಗ, ಸಲ್ಲೇಖನ ಮುಂತಾದ ತತ್ವಗಳನ್ನು ಬೋಧಿಸಲಾಗುತ್ತಿತ್ತು. ವೈರಾಗ್ಯದ ಆಚರಣೆಯಿಂದ ಮತ್ತು ಅರಿಷಡ್ವರ್ಗಗಳನ್ನು ಗೆಲ್ಲುವುದರ ಮೂಲಕ ಹುಟ್ಟು-ಸಾವುಗಳ ವಿಷಚಕ್ರದಿಂದ ಮುಕ್ತಿ ಪಡೆಯಬಹುದೆಂದು ಕೆಲವರು ವಾದಿಸುತ್ತಿದ್ದರು. ಹೀಗೆ ಅನೇಕ ಬಗೆಯ ತತ್ವಗಳು, ಸಿದ್ಧಾಂತಗಳು, ಸಂಸ್ಕಾರಗಳು ಇದ್ದುದರಿಂದ ಸಾಮಾನ್ಯ ಜನರು ಮೋಕ್ಷವನ್ನು ಸಾಧಿಸಲು ಯಾವುದು ಸರಿಯಾದ ಮಾರ್ಗ ಎಂಬ ಆಯ್ಕೆ ಸಾಧ್ಯವಾಗದೆ ದಾರಿಗಾಣದೆ ಒಂದು ಬಗೆಯ ಗೊಂದಲಕ್ಕೆ ಸಿಲುಕಿಕೊಂಡು ಬಿಟ್ಟಿದ್ದರು.

ಈ ಎಲ್ಲ ಕಾರಣಗಳಿಂದ ಅಸ್ತಿತ್ವದಲ್ಲಿದ್ದ ಸಾಮಾಜಿಕ ಸನ್ನಿವೇಶದ ಬಗ್ಗೆ ಜನರಲ್ಲಿ ಒಂದು ರೀತಿಯ ಅತೃಪ್ತಿ ಅಸಹನೆಯ ಭಾವನೆ ಉಂಟಾಯಿತು. ಸಾಮಾಜಿಕ ಅನಿಷ್ಟಗಳನ್ನು ಹೋಗಲಾಡಿಸಲು ಮತ್ತು ಪುರೋಹಿತವರ್ಗದ ಏಕಸ್ವಾಮ್ಯವನ್ನು ಕಿತ್ತುಹಾಕಲು ಸಮಾಜದಲ್ಲಿ ಸುಧಾರಣೆಗಳನ್ನು ತರುವುದು ಬೌದ್ಧಿಕ ವರ್ಗಕ್ಕೆ ಅನಿವಾರ್ಯವಾಗಿಬಿಟ್ಟಿತು. ಸಂಕ್ಷಿಪ್ತದಲ್ಲಿ ಪ್ರೊ. ಬಿ.ಎನ್. ಲೂನಿಯ ಹೇಳುವಂತೆ "ಹಳೆಯ ವ್ಯವಸ್ಥೆಯ ವಿರುದ್ಧದ ಪ್ರತಿಭಟನೆ ಅದಾಗಿತ್ತು. ಸತ್ತು ಹೋದ ಸಂಸ್ಕೃತಿ ವಿರುದ್ಧ, ಪುರೋಹಿತ ವರ್ಗದ ನಿರಂಕುಶ ಅಧಿಕಾರದ ವಿರುದ್ಧ, ಕುರುಡು ಆಚರಣೆಗಳಿಂದ ತುಂಬಿದ್ದ ಧರ್ಮದ ವಿರುದ್ಧ, ಸಾಮಾಜಿಕ ಅಸಮಾನತೆ ವಿರುದ್ಧ ನಡೆದ ಸಂಘರ್ಷ ಅದಾಗಿತ್ತು. ಕ್ರಾಂತಿಕಾರಿ ವಿಚಾರಗಳಿಂದ ಜನರು ಪ್ರಚೋದಿತಗೊಂಡರು. ಈ ಸಂಘರ್ಷದ ಅಂತಿಮ ಗುರಿಯು ಲೌಕಿಕ ಬೆಳವಣಿಗೆಯಾಗಿರಲಿಲ್ಲ. ಆಧ್ಯಾತ್ಮಿಕ ಬೆಳವಣಿಗೆ ಅದರ ಗುರಿಯಾಗಿತ್ತು. ಸಾಮಾಜೀಕರಣಕ್ಕೆ ಪ್ರತಿಯಾಗಿ ಆಧ್ಯಾತ್ಮೀಕರಣವು ಅದರ ಗುರಿಯಾಗಿತ್ತು". ಈ ಹಿನ್ನೆಲೆಯಲ್ಲಿ ಹಿಂದೂ ಸಮಾಜದ - ಹಿಂದೂ ಧರ್ಮದ ಆಧುನೀಕರಣದ ಆಂದೋಳನವನ್ನು ಮುನ್ನೆಡೆಸುವ ಕ್ರಾಂತಿಕಾರಕ ನಾಯಕರಿಗಾಗಿ ಜನರು ಉತ್ಸಾಹದಿಂದ ಎದುರು ನೋಡುತ್ತಿದ್ದರು. ಭಗವಾನ್ ಮಹಾವೀರ ಮತ್ತು ಗೌತಮಬುದ್ಧ ಅವರು ಅಂದು ಪ್ರಶ್ನಾತೀತ ನಾಯಕರುಗಳಾಗಿ ಮೂಡಿಬಂದರು. ಜನರ ಆಸೆ-ಆಕಾಂಕ್ಷೆಗಳನ್ನು ಈಡೇರಿಸಿದರು. ಜನರಿಗೆ ದಾರಿದೀಪವಾದರು. ಭಗವಾನ್ ಮಹಾವೀರನು ಸ್ಥಾಪಿಸಿದ ಧರ್ಮವು ಜೈನಧರ್ಮವೆಂದು ಮತ್ತು ಗೌತಮಬುದ್ಧನು ಸ್ಥಾಪಿಸಿದ ಧರ್ಮವನ್ನು ಬೌದ್ಧ ಧರ್ಮವೆಂದು ಹೆಸರು ಪಡೆದುಕೊಂಡವು.

## 41.3 ಸಾರಾಂಶ

ಕ್ರಿ.ಪೂ. ೬ನೆಯ ಶತಮಾನವು ಧಾರ್ಮಿಕ ವಿಪ್ಲವದ ಕಾಲ. ಆಚರಣೆಯಲ್ಲಿದ್ದ ಮೂಢನಂಬಿಕೆಗಳ ವಿರುದ್ದ - ಧಾರ್ಮಿಕ ಕಂದಾಚಾರಗಳ ವಿರುದ್ಧ ಜನರು ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದ ಕಾಲ ಅದು. ವೈದಿಕ ಧರ್ಮವು ತನ್ನೆಲ್ಲ ಸತ್ವವನ್ನು ಕಳೆದುಕೊಂಡಿತ್ತು. ಬೇರೆ ಬೇರೆ

ವರ್ಣಗಳಿಗೆ ಸೇರಿದ ಜನರ ನಡುವೆ ಪರಸ್ಪರ ತಿಳುವಳಿಕೆಯಾಗಲಿ ಅಥವಾ ಸೌಹಾರ್ದ ಸಂಬಂಧವಾಗಲಿ ಇರಲಿಲ್ಲ. ಪ್ರತಿಯೊಂದು ಜಾತಿಯು ತನ್ನ ಶ್ರೇಷ್ಠತೆ ಬಗ್ಗೆ ಜಾಗೃತವಾಗಿತ್ತು. ಉಳಿದ ಜಾತಿಗಳನ್ನು ಕನಿಷ್ಟವೆಂದು ಬಗೆದಿದ್ದವು. ಭಾರತೀಯ ಸಮಾಜದಲ್ಲಿ ಆಧ್ಯಾತ್ಮಿಕ ಮತ್ತು ನೈತಿಕ ಅಸಮಧಾನ ವ್ಯಾಪಕವಾಗುತ್ತಿತ್ತು. ಹಿಂದೂ ಬ್ರಾಹ್ಮಣಶಾಹಿ ಧರ್ಮವು ಕಂದಾಚಾರಗಳ ಆಗರವಾಗಿತ್ತು ಮತ್ತು ಸೈದ್ಧಾಂತಿಕವಾಗಿ ಅದೊಂದು ಅಮೂರ್ತ ಸಂಗತಿಯಾಗಿತ್ತು. ಧಾರ್ಮಿಕ ಕ್ಷೇತ್ರದಲ್ಲಿನ ಬ್ರಾಹ್ಮಣರ ಸಾರ್ವಭೌಮತ್ವವು ಮೂಢನಂಬಿಕೆಗಳ ಬೆಳವಣಿಗೆಗೆ ಕುಮ್ಮಕ್ಕು ನೀಡಿತು. ಇದು ಹಣ ಸುಲಿಗೆಗೆ ಮತ್ತು ಶೋಷಣೆಗೆ ಕಾರಣವಾಯಿತು. ಯಜ್ಞ-ಯಾಗಗಳ ಆಚರಣೆಗಳು ದುಬಾರಿಯಾಗಿ ಪರಿಣಮಿಸಿದವು ಮತ್ತು ಅಲ್ಲಿ ಪ್ರಾಣಿಗಳನ್ನು ಬಲಿ ನೀಡಬೇಕಾಗಿತ್ತು. ಧರ್ಮದ ಹೆಸರಿನಲ್ಲಿ ಯಜ್ಞ-ಯಾಗಗಳ ಹೆಸರಿನಲ್ಲಿ ಹಿಂಸೆಗೆ ಪ್ರೋತ್ಸಾಹ ನೀಡಲಾಗುತ್ತಿತ್ತು ಮತ್ತು ಮೂಕ ಪ್ರಾಣಿಗಳ ರಕ್ತ ಹರಿಸಲಾಗುತ್ತಿತ್ತು. ಯಜ್ಞ-ಯಾಗಗಳು ದುಬಾರಿಯಾದುದರಿಂದ ಸಮಾಜದಲ್ಲಿ ಆರ್ಥಿಕ ಅಭದ್ರತೆಯು ಉಂಟಾಯಿತು. ಸಾಮಾನ್ಯ ಜನರು, ಬಡವರು ಇದರಿಂದ ಅನೇಕ ಕಷ್ಟಗಳಿಗೆ ಒಳಗಾದರು.

ವೈದಿಕ ಕ್ರಿಯಾಚರಣೆಗಳು ಸಂಸ್ಕೃತ ಭಾಷೆಯಲ್ಲಿದ್ದುದರಿಂದ ಅವು ಸಾಮಾನ್ಯ ಜನರಿಗೆ ಅರ್ಥವಾಗುತ್ತಿರಲಿಲ್ಲ. ಉನ್ನತ ಜಾತಿ ಜನರಿಗೆ ಇದರಿಂದ ಸಾಮಾನ್ಯ ಜನರನ್ನು ಶೋಷಿಸುವುದು ಸುಲಭವಾಯಿತು. ಜನರಿಗೆ ವೈದಿಕ ಧರ್ಮದ ಬಗ್ಗೆ ನಂಬಿಕೆ ಮತ್ತು ವಿಶ್ವಾಸ ಹೋಗಿಬಿಟ್ಟಿತು. ಆ ಆಚರಣೆಗಳು ಸಾಮಾನ್ಯ ಜನರಿಗೆ ಸೂಕ್ತವಿರಲಿಲ್ಲ. ಮೋಕ್ಷ ಸಾಧನೆಗೆ ಅನೇಕ ಮಾರ್ಗಗಳನ್ನು ಹೇಳಿಕೊಡಲಾಗಿತ್ತು. ಅಂದು ಅಸ್ತಿತ್ವದಲ್ಲಿದ್ದ ಧಾರ್ಮಿಕ ಆಚರಣೆಗಳು ಜನರಲ್ಲಿ ಗೊಂದಲಕ್ಕೆ ಕಾರಣವಾದವು. ಉಪನಿಷತ್ತುಗಳಲ್ಲಿದ್ದ ತತ್ವ ಮತ್ತು ಭೋಧನೆಗಳು ಸಾಮಾನ್ಯ ಜನರಿಗೆ ರುಚಿಸಲಿಲ್ಲ. ಜಾತಿ ಪದ್ದತಿಯಿಂದಾಗಿ ಜನರು ಹೆಚ್ಚಿನ ಶೋಷಣೆಗೆ ಒಳಗಾದರು. ಈ ಹಿನ್ನೆಲೆಯಲ್ಲಿ ಜೈನಧರ್ಮ ಮತ್ತು ಬೌದ್ಧ ಧರ್ಮಗಳು ಆಚರಣೆಗೆ ಬಂದವು. ಭಾರತವು ಇಬ್ಬರು ಮಹಾನ್ ಚೇತನಗಳಿಗೆ ಜನ್ಮ ನೀಡಿತು. ಅವರಲ್ಲಿ ಭಗವಾನ್ ಮಹಾವೀರನು ಜೈನಧರ್ಮವನ್ನು ಸ್ಥಾಪಿಸಿದರೆ ಗೌತಮ ಬುದ್ಧನು ಬೌದ್ಧ ಧರ್ಮವನ್ನು ಸ್ಥಾಪಿಸಿದನು. ಇವರಿಬ್ಬರು ತಲ್ಲಣಗೊಂಡಿದ್ದ ಸಮಾಜಕ್ಕೆ ಶಾಂತಿಯನ್ನು, ಹೊಸ ಚೈತನ್ಯವನ್ನು ಒದಗಿಸಿಕೊಟ್ಟರು. ಭಾರತೀಯ ಸಂಸ್ಕೃತಿ ಮತ್ತು ಬದುಕಿನ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರುವುದರಲ್ಲಿ ಬೌದ್ಧ ಧರ್ಮ ಮತ್ತು ಜೈನಧರ್ಮಗಳು ಯಶಸ್ವಿಯಾದವು. ಸರಳ ಮಾರ್ಗದಲ್ಲಿ ಮೋಕ್ಷವನ್ನು ಹೇಗೆ ಸಂಪಾದಿಸುವುದು ಎಂಬುದು ಸಾಮಾನ್ಯ ಜನರಿಗೆ ತಿಳಿಯುವಂತಾಯಿತು. ಸಾಮಾನ್ಯ ಜನರ ಭಾಷೆಯಾಗಿದ್ದ ಪಾಳಿ ಮತ್ತು ಅರ್ಧಮಾಗದಿಗಳಲ್ಲಿ ಅವರು ತಮ್ಮ ಬೋಧನೆಯನ್ನು ನೀಡಿದರು. ಜ್ಞಾನ, ಸತ್ಕರ್ಮ ಮತ್ತು ಆಧ್ಯಾತ್ಮಿಕತೆಯ ಮೂಲಕ ದೇವರನ್ನು ಕಾಣುವ ಸುಲಭ ಮಾರ್ಗವನ್ನು ಅವರು ಹೇಳಿಕೊಟ್ಟರು.

## 41.4 ಮಾದರಿ ಪ್ರಶ್ನೆಗಳು

1. ಕ್ರಿ.ಪೂ. ೬ನೆಯ ಶತಮಾನದಲ್ಲಿ ಹೊಸ ಧರ್ಮಗಳು ಉದಯಿಸುತ್ತಿದ್ದ ಸಂದರ್ಭದಲ್ಲಿದ್ದ ಹಿಂದೂ ಸಮಾಜದ ಸ್ಥಿತಿಗತಿಗಳನ್ನು ಪರಿಶೀಲಿಸಿ.
2. "ಭಾರತದಲ್ಲಿ ಕ್ರಿ.ಪೂ. ೬ನೆಯ ಶತಮಾನವು ಬೌದ್ಧಿಕ ಕ್ರಾಂತಿಯ ಮತ್ತು ಧಾರ್ಮಿಕ ವಿಪ್ಲವದ ಕಾಲವಾಗಿತ್ತು". ಈ ಹೇಳಿಕೆಯನ್ನು ಕುರಿತು ಚರ್ಚಿಸಿ.

## 41.5 ಹೆಚ್ಚಿನ ಅಧ್ಯಯನಕ್ಕೆ ಪುಸ್ತಕಗಳು


1. Altekar A.S. : **Ancient India**
2. Bapt (Ed) : **2500 years of Buddhism**
3. Lunia B.N. : **Evolution of Indian Culture**
4. Rangaswamy .C.V. : **Studies in Indian Culture**
5. Sharma .R.C. : **History of Ancient India**

# ಟಿಪ್ಪಣಿಗಳು


ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*National Education Policy 1986*




**♣ REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✛ **M.Ed Study Centres : 06**


STUDENT
INSTRUCTIONAL SYSTEM